بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 18

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14 ಮೇ 2020, 14 ಹಿಜ್ರತ್ 1399 ಹಿಜರಿ ಶಮ್ಸಿ,
20 ರಮಝಾನ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ

## ಅಲ್ಲಾಹನ ಉಪದೇಶ

لٰکِنِ الَّذِیۡنَ اتَّقَوۡا رَبَّہُمۡ لَہُمۡ جَنّٰتٌ
تَجۡرِیۡ مِنۡ تَحۡتِہَا الۡاَنۡہٰرُ خٰلِدِیۡنَ فِیۡہَا
نُزُلًا مِّنۡ عِنۡدِ اللّٰہِ ؕ وَمَا عِنۡدَ اللّٰہِ
خَیۡرٌ لِّلۡاَبۡرَارِ ﴿ آل عمران:199 ﴾

*(ಆಲಿ ಇಮ್ರಾನ್ 199)*

ಅಂದರೆ: ಆದರೆ ತಮ್ಮ ಪ್ರಭುವಿನ ಭಯವಿಟ್ಟು ಕೊಂಡವರಿಗೆ, ಕೆಳಭಾಗದಲ್ಲಿ ಹೊಳೆಗಳು ಹರಿಯುವ ಸ್ವರ್ಗೀಯ ತೋಟಗಳಿವೆ. ಅಲ್ಲೇ ಅವರು ವಾಸಿಸುವರು. ಇದು ಅಲ್ಲಾಹನ ಕಡೆಯಿಂದ ಒಂದು ಸತ್ಕಾರವಾಗಿದೆ.ಅಲ್ಲಾಹನ ಬಳಿಯಲ್ಲಿರುವಂಥದ್ದು ಸಜ್ಜನರಿಗೆ ಅತ್ಯುತ್ತಮವಾಗಿದೆ.

**ನಿಮ್ಮ ಸಾಮರ್ಥ್ಯ ಮತ್ತು ಪ್ರಯತ್ನದ ಮೇಲೆ ಗರ್ವಪಡಬೇಡಿ ಮತ್ತು ಈ ಯಶಸ್ಸು ನಿಮ್ಮ ಯಾವುದೇ ಅರ್ಹತೆ ಅಥವಾ ಶ್ರಮದ ಫಲ ಎಂದು ಭಾವಿಸಬೇಡಿರಿ. ಕಾರಣ್ಯ ನಿಧಿಯಾದ ಅಲ್ಲಾಹನು, ಸತ್ಯ ನಿಷ್ಠೆಯಿಂದ ಮಾಡಿದ ಯಾರದೇ ಶ್ರಮವನ್ನು ವ್ಯರ್ಥಗೊಳಿಸುವುದಿಲ್ಲ. ಅವನೆ ನಿಮ್ಮ ಶ್ರಮಕ್ಕೆ ಫಲ ನೀಡುವವನಾಗಿದ್ದಾನೆ.**

**ನನ್ನ ವಿಶ್ವಾಸವೇನೆಂದರೆ ಮನುಷ್ಯನು ಲೋಕದಲ್ಲಿ ಎಲ್ಲಾ ತರದ ಅವಮಾನ ಮತ್ತು ಕಷ್ಟಗಳಿಂದ ಪರಿಹಾರ ಬಯಸುವುದಾದರೆ ಅದಕ್ಕೆ ಒಂದೇ ಒಂದು ಮಾರ್ಗವಿದೆ. ಅವನು ಮುತ್ತಖಿ (ಭಯಭಕ್ತಿಯುಳ್ಳವನು) ಆಗಿರಬೇಕು. ಅದೇ ಆ ಮಾರ್ಗ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಜನವರಿ 15, 1898 ರಂದು ಖ್ವಾಜಾ ಕಮಾಲುದ್ದೀನ್ ಸಾಹಿಬ್ ಬಿ.ಎ., ಎಲ್.ಎಲ್.ಬಿ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡ ಸುದ್ಧಿ ಬಂತು. ಫಜ್ರ್ ನಮಾಝ್‌ನ ನಂತರ ಹಝ್ರತ್ ಅಖ್‌ದಸ್ ಅವರು ಇಮಾಮ್ ಹುಮಾಮ್(ಅ) ಅವರನ್ನು ಬರಮಾಡಿಸಿಕೊಂಡು ಈ ಸಂಕ್ಷಿಪ್ತವಾದ ಭಾಷಣ ಮಾಡಿದರು.

**ಲೌಕಿಕ ಯಶಸ್ಸುಗಳು ಮತ್ತು ಸುಖ ಸೌಖ್ಯರ್ಗಗಳು ಶಾಶ್ವತವಲ್ಲ.**

ಮನುಷ್ಯನಿಗೆ ಯಾವುದೇ ಯಶಸ್ಸಿನ ಸಂಧರ್ಭದಲ್ಲಿ ಒಂದು ಸಂತೋಷ ಉಂಟಾಗುತ್ತದೆ. ಪವಿತ್ರ ಖುರ್‌ಆನಿನ ಪ್ರಕಾರ ಲಹು, ಲಅಬ್ ತಫಾಖರ್ (ಆಟ, ವಿನೋದ, ಸಂಪತ್ತು) ಎಂಬ ಮೂರು ವಿಧದ ಸಂತೋಷಗಳಿವೆ ಎಂದು ತಿಳಿದು ಬರುತ್ತದೆ. ಲಹು ಎಂಬುದರಲ್ಲಿ ಊಟೋಪಾಚಾರದ ಸಾಮಾಗ್ರಿಗಳು ಶಾಮೀಲಾಗಿದೆ. ಲಅಬ್‌ನಲ್ಲಿ ವಿವಾಹ ಮುಂತಾದ ಸಂತೋಷಗಳು ಮತ್ತು ತಫಾಖರ್‌ನಲ್ಲಿ ಸಂಪತ್ತು ಇತ್ಯಾದಿ ಸಂತೋಷಗಳು ಒಳಗೊಂಡಿವೆ. ಈ ಮೂರು ವಿಧದ ಸಂತೋಷಗಳಿಂದ ಯಾರೂ ಹೊರತಾಗಿಲ್ಲ. ಆದರೆ ನೆನಪಿಡಿರಿ. ಯಶಸ್ಸು ಮತ್ತು ಸಂತೋಷಗಳು ಶಾಶ್ವತವಾಗಿರುವುದಿಲ್ಲ. ಬದಲು ಯಾರಾದರೂ ಇದರ ವ್ಯಾಮೋಹಕ್ಕೆ ಒಳಗಾದರೆ ಆಂತಕಕ್ಕೊಳಗಾಗಬಹುದು. ಮುಂದೊಂದು ಸಮಯ ಬರುತ್ತದೆ. ಆಗ ಇವೆಲ್ಲಾ ಸಂತೋಷಗಳು ದು:ಖಗಳಲ್ಲಿ ಪರಿವರ್ತನೆಗೊಳ್ಳುತ್ತವೆ.

ಯಾವ ಲೌಕಿಕ ಯಶಸ್ಸುಗಳೂ ಪರೀಕ್ಷೆಗಳಿಂದ ಹೊರತಾಗಿರುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಕಾಣಬಹುದು. ಖಲಕಲ್ ಮೌತ ವಲ್ ಹಯಾತ ಲಿಯಬ್‌ಲುನಕುಮ್ (ಅಲ್-ಮುಲ್‌ಕ್-3) ನಿಮ್ಮ ಪೈಕಿ ಕೃತ್ಯ ನಿರ್ವಹಣೆಯಲ್ಲಿ ಯಾರು ಅತ್ಯುತ್ತಮರೆಂದು ಪರೀಕ್ಷಲಿಕ್ಕೋಸ್ಕರ ಅವನು ಮರಣ ಮತ್ತು ಜೀವನವನ್ನೂ ಸೃಷ್ಟಿಸಿದ್ದಾನೆ. ಜಯಾಪಜಯಗಳು ಜೀವನದ ಅವಿಭಾಜ್ಯ ಅಂಗಗಳಾಗಿರುತ್ತವೆ. ಯಶಸ್ಸು ಎಂಬುದು ಒಂದು ವಿಧದ ಜೀವವಿದ್ದ ಹಾಗೆ. ಒಬ್ಬನಿಗೆ ತನ್ನ ಯಶಸ್ಸಿನ ಸುದ್ಧಿ ತಲುಪಿದರೆ ಅವನಿಗೆ ಒಂದು ಹೊಸ ಜೀವನ ದೊರೆತಂತಾಗುತ್ತದೆ. ವಿಫಲಗೊಂಡ ಸುದ್ಧಿ ಬಂದರೆ ಜೀವವಿದ್ದವನಿಗೂ ಮರಣ ಹೊಂದಿದ ಹಾಗೆ ಭಾಸವಾಗುತ್ತದೆ. ಕೆಲವೊಮ್ಮೆ ದುರ್ಬಲ ಹೃದಯವುಳ್ಳವರು ಪ್ರಾಣವನ್ನೂ ಕಳಕೊಳ್ಳುತ್ತಾರೆ.

ಈ ಮಾತನ್ನು ನೆನಪಿಡಿ. ಏನೆಂದರೆ ಸಾಮಾನ್ಯವಾಗಿ ಜೀವನ ಮತ್ತು ಮರಣ ಸರಳವಾದುದಾಗಿದೆ. ಆದರೆ ನರಕದ ಜೀವನ ಕಷ್ಟಕರವಾಗಿದೆ. ಒಬ್ಬ ಸಜ್ಜನನು ವೈಫಲ್ಯದ ನಂತರ ಸಫಲಗೊಂಡು ಇನ್ನಷ್ಟು ಸಜ್ಜನನಾಗುತ್ತಾನೆ ಮತ್ತು ಅವನಿಗೆ ಅಲ್ಲಾಹನ ಮೇಲೆ ವಿಶ್ವಾಸ ವೃದ್ಧಿಯಾಗುತ್ತದೆ. ಅವನು ಯೋಚನೆ ಮಾಡಿದಾಗ ಅವನಿಗೆ ತಿಳಿಯುತ್ತದೆ - ನನ್ನ ಅಲ್ಲಾಹನು ಎಂತಹ ಮಹಿಮಾವಂತನು ಎಂದು. ಅವನ ಲೌಕಿಕ ಯಶಸ್ಸು ಅಲ್ಲಾಹನನ್ನು ಗುರುತಿಸುವ ಒಂದು ಸಾಧನಯಾಗುತ್ತದೆ. ಇಂತಹ ಜನರಿಗೆ ಈ ಲೌಕಿಕ ಯಶಸ್ಸುಗಳು ನೈಜ ಯಶಸ್ಸಿನ ಮಾರ್ಗವಾಗಿ ಪರಿಣಮಿಸುತ್ತವೆ. (ಇಸ್ಲಾಮಿನ ಧಾರ್ಮಿಕ ಅರ್ಥದಲ್ಲಿ ಇದನ್ನು ಫಲಾಹ್ ಎನ್ನುತ್ತಾರೆ) ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೈಜವಾದ ಸುಖ, ಸಂತೋಷಗಳು ಈ ಲೌಕಿಕ ಜೀವನದಲ್ಲಿ ಎಂದೂ ಲಭಿಸಲಾರದು. ಲೋಕದ ಎಲ್ಲ ಭಾಗಗಳನ್ನು ಸಂದರ್ಶಿಸಿದರೂ ಸಹ ಮನುಷ್ಯನು ನೈಜ ಮತ್ತು ಶಾಶ್ವತ ಸುಖವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಓರ್ವ ಶ್ರೀಮಂತನು ಯಥೇಚ್ಚ ಹಣ, ಸಂಪತ್ತುಗಳನ್ನು ಹೊಂದಿದ್ದರೂ ಇನ್ನೂ ಸಂಪಾದನೆಯಲ್ಲಿ ತೊಡಗಿರುತ್ತಾನೆ. ಆದರೆ ಅವನ ಸ್ಥಿತಿ "ಜರ್‌ಬ್" ಅಂದರೆ ತುರುಸುವಿಕೆಯ ರೋಗಿಯಂತಿರುತ್ತದೆ. ಅವನಗೆ ತುರಿಸಿಕೊಂಡಷ್ಟು ಸುಖ ದೊರೆಯುತ್ತದೆ. ಆದರೆ ಈ ತುರುಸುವಿಕೆಯ ಅಂತಿಮ ಪರಿಣಾಮವಾಗಿ ರಕ್ತ ಹರಿದು ಬರುತ್ತದೆ.

ಆದುದರಿಂದ ಈ ಲೌಕಿಕ ಮತ್ತು ತಾತ್ಕಾಲಿಕ ಯಶಸ್ಸಿನ ಮೇಲೆ ಅಷ್ಟೊಂದು ಸಂತೋಷ ಪಡಬೇಡಿರಿ. ಯಾಕೆಂದರೆ ತತ್ಫಲವಾಗಿ ನೀವು ನಿಜವಾದ ಯಶಸ್ಸಿನಿಂದ ದೂರವಾಗುವಿರಿ. ಬದಲಾಗಿ ಆ ಯಶಸ್ಸನ್ನು ಅಲ್ಲಾಹನನ್ನು ಗುರುತಿಸುವ ಒಂದು ಸಾಧನವನ್ನಾಗಿ ಮಾಡಿಕೊಳ್ಳಿರಿ. ನಿಮ್ಮ ಸಾಮರ್ಥ್ಯ ಮತ್ತು ಪ್ರಯತ್ನದ ಮೇಲೆ ಗರ್ವ ಪಡಬೇಡಿರಿ. ಈ ಯಶಸ್ಸು ನಮ್ಮ ಯಾವುದೇ ಅರ್ಹತೆ ಅಥವಾ ಶ್ರಮದ ಫಲ ಎಂದು ಭಾವಿಸಬೇಡಿರಿ. ಕರುಣಾನಿಧಿಯಾದ ಅಲ್ಲಾಹನು, ಸತ್ಯನಿಷ್ಠೆಯಿಂದ ಮಾಡಿದ ಯಾರ ಶ್ರಮವನ್ನೂ ವ್ಯರ್ಥಗೊಳಿಸುವುದಿಲ್ಲ. ನಿಮ್ಮ ಶ್ರಮಕ್ಕೆ ಖಂಡಿತವಾಗಿಯೂ ಅವನು ಫಲ ನಿಡುವನು. ಉದಾಹರಣೆಗೆ ನೋಡಿರಿ - ನೂರಾರು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗುತ್ತಾರೆ. ಅವರೆಲ್ಲರೂ ಶ್ರಮಪಡದವರೇ ಅಥವಾ ದಡ್ಡರೆ? ಬದಲಾಗಿ ಅವರಲ್ಲಿ ಕೆಲವರು ಎಷ್ಟೊಂದು ಜಾಣರಾಗಿರುತ್ತಾರೆಂದರೆ ಆ ಉತ್ತೀರ್ಣರಾದವರನ್ನೂ ಹಿಂದಿಕ್ಕುವಂತವರಾಗಿರುತ್ತಾರೆ. ಆದುದರಿಂದ ತಿಳಿಯುವುದೇನೆಂದರೆ ಅವನು ನಮ್ಮ ಶ್ರಮವನ್ನು ಎಂದೂ ವ್ಯರ್ಥಗೊಳಿಸಲಿಕ್ಕಿಲ್ಲ ಎಂದು. ಆ ಕೃತಜ್ಞತೆಯ ಫಲವಾಗಿ ಅಲ್ಲಾಹನೊಂದಿಗೆ ನಮ್ಮ ಪ್ರೀತಿ ಹೆಚ್ಚಾಗುವುದು ಮತ್ತು ವಿಶ್ವಾಸ ವೃದ್ಧಿಯಾಗುವುದು. ಅಷ್ಟೇ ಅಲ್ಲ ಇನ್ನೂ ಹೆಚ್ಚಿನ ಯಶಸ್ಸುಗಳು ದೊರೆಯುವುವು. ಏಕೆಂದರೆ ಅಲ್ಲಾಹನು ಹೇಳುತ್ತಾನೆ - ನೀವು ನನ್ನ

*(ಪುಟ ಸಂಖೆ 06 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಇಂದಿನ ದಿನಗಳಲ್ಲಿ ನೀವು ಬಹಳ ದುಆ ಮಾಡಿರಿ, ಬಹಳ ದುಆ ಮಾಡಿರಿ. ಬಹಳ ದುಆ ಮಾಡಿರಿ. ಅಲ್ಲಾಹನು ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರತಿಯೊಂದು ರೀತಿಯಲ್ಲಿ ಮತ್ತು ಜಮಾಅತನ್ನು ಸಂಪೂರ್ಣವಾಗಿ ತನ್ನ ಸಂರಕ್ಷಣೆಯಲ್ಲಿ ಶಾಂತಿಯಿಂದ ಇರಿಸುವವನಾಗಲಿ.**

**ಇಂದು ಇಂತಹ ಸಾಂಕ್ರಮಿಕ ರೋಗದ ದಿನಗಳಲ್ಲಿ ನಾವು ದುಆವಿನೊಂದಿಗೆ ಜಾಗ್ರುಕತೆಯು ವಹಿಸ ಬೇಕು**

**ವಾಣಿಜ್ಯೋದ್ಯಮಿಗಳಾಗಿರುವ ಅಹ್ಮದಿಯರು ಈ ದಿನಗಳಲ್ಲಿ ತಮ್ಮಲ್ಲಿರುವ ಸರಕುಗಳಿಂದ ಅನಾವಶ್ಯಕ ಲಾಭಗಳಿಸಲು ಪ್ರಯತ್ನಿಸಬಾರದು. ಈಗ ಮಾನವರ ಸೇವೆ ಮಾಡುವ ಕಾಲವಾಗಿದೆ. ಹಾಗೆ ಮಾಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಒತ್ತಿ ಹೇಳಿದ್ದಾರೆ. ಅನುಕಂಪದ ಭಾವನೆ ನಿಮ್ಮಲ್ಲಿ ಸೃಷ್ಟಿಸಲು ಹೇಳಿದ್ದಾರೆ. ಹುಖೂಖುಲ್ ಇಬಾದ್ ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ದಿನಗಳು ಇವುಗಳೇ ಆಗಿವೆ.**

**ಇತ್ತೀಚೆಗೆ ನಿಧನ ಹೊಂದಿದ ನಮ್ಮ ಅತ್ಯಂತ ನಿಷ್ಠಾವಂತನಾದ ಉದ್ಯೋಗಿಯೂ ಜಮಾಅತಿನ ಸೇವಕರೂ ಆಗಿದ್ದ ಮುಹ್ತರಮ್ ನಾಸಿರ್ ಅಹ್ಮದ್ ಸಈದ್ ಸಾಹಿಬರ ಬಗ್ಗೆ ಪ್ರಸ್ತಾಪಿಸುವೆನು.**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ಯಾರಾದರೂ ದೇವೇಚ್ಛೆ ಪ್ರಕಾರ ಈ ರೋಗಕ್ಕೆ ತುತ್ತಾಗಿ ಮೃತರಾದರೆ ಅಂತಹ ವ್ಯಕ್ತಿ ಶಹೀದ್ ಪದವಿ ಗಳಿಸುತ್ತಾರೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–04–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಈಗ ಕೊರೋನ ವೈರಸ್ ಸಾಂಕ್ರಾಮಿಕ ರೋಗದ ಕಾರಣದಿಂದ ಲೋಕದಲ್ಲಿ ಸಂಭವಿಸಿರುವ ಸ್ಥಿತಿಯ ಕಾರಣದಿಂದ ನಮ್ಮವರು ಮತ್ತು ಅನ್ಯರು ಎಲ್ಲರೂ ಆತಂಕ ಭರಿತರಾಗಿದ್ದಾರೆ. ಜನರು ಪತ್ರಗಳನ್ನು ಸಹ ಬರೆಯುತ್ತಾರೆ, ತಮ್ಮ ಸಂಕಷ್ಟಗಳನ್ನು ಅದರಲ್ಲಿ ವಿವರಿಸುತ್ತಾರೆ. ತಮ್ಮ ಪ್ರಿಯರು, ಸಂಬಂಧಿಕರು ಎಲ್ಲರೂ ಈ ರೋಗದಿಂದ ಅತಂಕ ಭರಿತರಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಬಹಳ ಆತಂತಕವನ್ನು ವ್ಯಕ್ತ ಪಡಿಸುತ್ತಾರೆ ಏಕೆಂದರೆ ಬೇರೆ ಯಾವುದಾದರೂ ರೋಗವಿದ್ದರೂ ಅದರ ಕಾರಣದಿಂದ ಈ ಸಾಂಕ್ರಮಿಕ ರೋಗವು ಬಹಳ ಬೇಗ ಅವರನ್ನು ಆವರಿಸುತ್ತದೆ. ಕೆಲವು ಅಹ್ಮದಿಯರಿಗೆ ಸಹ ಈ ರೋಗ ಬಾಧಿಸಿದೆ. ಒಟ್ಟಾರೆ ಹೇಳುವುದಾದರೆ ಆತಂಕ ಲೋಕವನ್ನು ಆವರಿಸಿದೆ. ಒಬ್ಬ ಮುರಬ್ಬಿ ನನಗೆ ಹೀಗೆ ಬರೆದಿದ್ದಾರೆ: ಇದೇನಾಗಿದೆ, ಏನು ಆಗುತ್ತಾ ಇದೆ ಎಂದು ಮನವರಿಕೆ ಆಗುವುದಿಲ್ಲ ಎಂದು. ಅವರ ಮಾತು ಸರಿಯಾಗಿಯೇ ಇದೆ. ಲೋಕಕ್ಕೆ ಏನಾಗಲಿದೆ ಎಂಬುದರ ಬಗ್ಗೆ ತಿಳಿಯುವುದಿಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಇಂದಿನ ಕಾಲದ ಸ್ಥಿತಿಯ ಬಗ್ಗೆ ಹೀಗೆ ಹೇಳಿದ್ದಾನೆ: **ವ ಖಾಲಲ್ ಇನ್‌ಸಾನು ಮಾಲಹಾ** – ಅದಕ್ಕೇನಾಯಿತು? ಎಂದು ಮನುಷ್ಯನು ಪ್ರಶ್ನಿಸುವಾಗ. (99:4).

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು 1920ರಲ್ಲಿ ಎಂದರೆ ಒಂದು ನೂರು ವರ್ಷಗಳ ಹಿಂದೆ ಪವಿತ್ರ ಖುರ್‌ಆನಿನ ಈ ವಚನಕ್ಕೆ ಸಂಕ್ಷಿಪ್ತ ವಿಶದೀಕರಣ ನೀಡಿ ಹೀಗೆ ಹೇಳಿದ್ದರು: ಹಿಂದಿನ ಕಾಲದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಸಾಂಕ್ರಾಮಿಕ ರೋಗದ ಹಾವಳಿ ಮತ್ತು ದೈವಿಕ ಪರೀಕ್ಷೆಗಳು ಸಂಭವಿಸುತ್ತಿದ್ದುವು. ಆದರೆ ಈಗಿನ ಕಾಲ ಹೇಗಿದೆ ಎಂದರೆ ದೈವಿಕ ಪರೀಕ್ಷೆಗಳ ಬಾಗಿಲುಗಳೇ ತೆರೆಯಲ್ಪಟ್ಟಿವೆ. (ಖುತ್‌ಬಾತೆ ಮಹ್ಮೂದ್, ಸಂಪುಟ–6, ಪುಟ–387, ಖುತ್‌ಬ ಜುಮುಅ 06–02–1920)

ನಾನು ಸಹ ಕಳೆದ ಕೆಲವು ವರ್ಷಗಳಿಂದ ಹೇಳುತ್ತಾ ಇದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಯೋಜಿಸಲ್ಪಟ್ಟ ನಂತರ ಮತ್ತು ವಿಶಿಷ್ಟವಾಗಿ ಅವರು ಲೋಕಕ್ಕೆ ವಿಪತ್ತುಗಳ ಮತ್ತು ದೈವಿಕ ದೃಷ್ಟಾಂತ ರೂಪದ ಹಾವಳಿಗಳ ಬಗ್ಗೆ ಮುನ್ನೆಚ್ಚರಿಕೆ ನೀಡಿದ ನಂತರ ಲೋಕದಲ್ಲಿ ತೂಫಾನುಗಳು, ಭೂಕಂಪಗಳು, ಸಾಂಕ್ರಾಮಿಕ ಮಹಾಮಾರಿಗಳು ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಂಡಿವೆ. ಸಾಮಾನ್ಯವಾಗಿ ಈ ಸಾಂಕ್ರಾಮಿಕ ಮಹಾಮಾರಿಗಳು, ವಿಪತ್ತುಗಳು ಜನರಿಗೆ ಎಚ್ಚರಿಕೆ ನೀಡಲು ಆಗಮಿಸುತ್ತವೆ. ನೀವು ನಿಮ್ಮ ಸೃಷ್ಟಿಕರ್ತನ ಹಕ್ಕುಗಳನ್ನು ಈಡೇರಿಸಿರಿ, ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಿರಿ, ಜನರ ಹಕ್ಕುಗಳನ್ನು ಈಡೇರಿಸಿರಿ ಎಂಬುದನ್ನು ಅವು ಸೂಚಿಸುತ್ತವೆ. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ನಾವು ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಅಲ್ಲಾಹನ ಕಡೆಗೆ ಬಾಗಬೇಕು. ಮತ್ತು ಲೋಕದ ಜನರಿಗೂ ಅದರ ಬಗ್ಗೆ ಎಚ್ಚರಿಕೆ ನೀಡಬೇಕಾಗಿದೆ. ಕೆಲವು ರೋಗಗಳು, ಮಹಾಮಾರಿಗಳು ತೂಫಾನು ಮೊದಲಾದುವುಗಳು ಲೋಕದಲ್ಲಿ ಸಂಭವಿಸುವಾಗ ಅದರ ಪ್ರಭಾವ ಪ್ರಕೃತಿ ಸಹಜವಾಗಿ ಎಲ್ಲರ ಮೇಲೆಯೂ ಬೀಳುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೆಲವು ದೈವಿಕ ಪರೀಕ್ಷೆಗಳಿಗೆ ನಮ್ಮೊಂದಿಗೆ ಸಂಬಂಧವಿರುವುದಿಲ್ಲ ಎಂಬುದು ಸತ್ಯವೇ ಆಗಿದೆ. ಆದರೆ ನಾವು ಈ ಲೋಕದಲ್ಲಿ ವಾಸಿಸುವಾಗ ಅನೇಕ ಮಹಾಮಾರಿಗಳು ನಮ್ಮ ಮೇಲೆಯೂ ಪ್ರಭಾವ ಬೀರುತ್ತವೆ. ದೈವಿಕ ಜಮಾಅತಿನವರನ್ನು ಅವುಗಳಿಂದ ಸಂಪೂರ್ಣವಾಗಿ ಸುರಕ್ಷಿತರಾಗಿರಿಸುವುದಿಲ್ಲ. ಯಾಕೆಂದರೆ ಅದು ಅಲ್ಲಾಹನ ಉದ್ದೇಶ ಲಕ್ಷ್ಯಗಳಿಗೆ ವಿರುದ್ಧವಾಗುತ್ತವೆ. (ಖುತ್‌ಬಾತೆ ಮಹ್ಮೂದ್, ಸಂಪುಟ–06, ಪುಟ–387–388, ಖುತ್‌ಬ ಜುಮುಅ 06–02–1920 )

ಆದರೆ ಸತ್ಯವಿಶ್ವಾಸಿಯಾದವನು ಈ ಕಷ್ಟಗಳಿಂದ ಅಲ್ಲಾಹನ ಸನ್ನಿಧಿಯಲ್ಲಿ ಬಾಗುತ್ತಾ ಅವನಿಗೆ ಕೃತಜ್ಞತೆಯರ್ಪಿಸುವ ದಾಸನಾಗಿ ದಾಟಿ ಹೋಗುತ್ತಾನೆ. ಆದುದರಿಂದ ಈ ದಿನಗಳಲ್ಲಿ ನಾವು ಮೊದಲಿಗಿಂತ ಹೆಚ್ಚಾಗಿ ಅಲ್ಲಾಹನ ಸನ್ನಿಧಿಯಲ್ಲಿ ಬಾಗುತ್ತಾ ಇರಲು ಪ್ರಯತ್ನಿಸಬೇಕು. ಕೆಲವು ಜನರು

ತಮ್ಮ ಅಭಿಪ್ರಾಯ ಪ್ರಕಟಿಸುತ್ತಿದ್ದಾರೆ – ಇದು ದೃಷ್ಟಾಂತ ರೂಪದಲ್ಲಿರುವ ಮಹಾಮಾರಿ ಎಂದು. ಆದುದರಿಂದ ಯಾವುದೇ ಮುಂಜಾಗ್ರತೆ ವಹಿಸುವ ಅಥವಾ ಚಿಕಿತ್ಸೆಯ ಆವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಅವರು ಇಂತಹ ಅಭಿಪ್ರಾಯ ಪ್ರಕಟಣೆಗಳ ಮೂಲಕ ಅನ್ಯರ ಭಾವನೆಗಳಿಗೆ ನೋವುಂಟುಮಾಡುತ್ತಾರೆ. ಇದೊಂದು ದೃಷ್ಟಾಂತವೋ ಅಥವಾ ಅಲ್ಲವೋ ಎಂಬುದು ನಮಗೆ ತಿಳಿದಿಲ್ಲ. ಆದರೆ ನಾವು ಸಾಮಾನ್ಯವಾಗಿ ಹೇಳುತ್ತೇವೆ ನಾನು ಸಹ ಈಗಲೆ ಹೇಳಿದ ಮತ್ತು ಕೆಲವು ಖುತ್‌ಬಗಳ ಮುಂಚೆಯ ಖುತ್‌ಬದಲ್ಲಿ ಈ ಸಾಂಕ್ರಮಿಕ ರೋಗದ ಬಗ್ಗೆ ಪ್ರಸ್ತಾಪಿಸುವಾಗ ಪ್ರಾರಂಭದಲ್ಲೇ ಹೇಳಿದೆ – ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಯೋಜಿಸಲ್ಪಟ್ಟ ನಂತರ ಭೂಮಿಗೆ ಸಂಬಂಧಿಸಿದ ಮತ್ತು ದೈವಿಕವಾದ ವಿಪತ್ತುಗಳು ಬಹಳ ವರ್ಧಿಸಿವೆ ಎಂದು. ಆದರೆ ಈ ರೋಗವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದ ಪ್ಲೇಗ್ ರೋಗದೊಂದಿಗೆ ಸೇರಿಸುವುದು, ಹಾಗೂ (ನಊಧುಬಿಲ್ಲಾಹ್) ಈ ರೋಗ ಬಾಧಿತರಾದ ಅಹ್ಮದಿಯರ ಅಥವಾ ಈ ರೋಗದಿಂದ ಮೃತರಾದ ಅಹ್ಮದಿಯರ ವಿಶ್ವಾಸ ಬಲಹೀನವಾಗಿದೆ ಎಂದು ಹೇಳುವುದು ಸರಿಯಲ್ಲ. ಹಾಗೆ ಹೇಳುವ ಅಧಿಕಾರ ಯಾರಿಗೂ ಇಲ್ಲ.

ಪ್ಲೇಗ್ ರೋಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪರವಾಗಿ ಒಂದು ದೃಷ್ಟಾಂತವಾಗಿ ಪ್ರಕಟವಾಯಿತು. ಪ್ಲೇಗ್ ರೋಗದಿಂದ ಮೃತರಾದವರನ್ನು ಶಹೀದರೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು. (ಸಹೀಹ್ ಬುಖಾರಿ ಕಿತಾಬುತ್ತಿಬ್, ಹದೀಸ್–5733) ಆದರೆ ಪ್ಲೇಗ್ ರೋಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪರವಾಗಿರುವ ಒಂದು ದೃಷ್ಟಾಂತವಾಗಿ ಪ್ರಕಟವಾಗಿತ್ತು. ಅದರ ಬಗ್ಗೆ ಅಲ್ಲಾಹನು ಅವರಿಗೆ ವಿಶಿಷ್ಟವಾಗಿ ತಿಳಿಸಿದ್ದನು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಸಂಭವಿಸಿದ ಪ್ಲೇಗ್ ರೋಗದ ಸ್ಥಿತಿ ಬೇರೆಯೇ ಆಗಿತ್ತು. ಆದರೆ ಅದರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮುಫ್ತಿ ಸಾಹಿಬ್[ರ] ರೊಂದಿಗೆ ಹೇಳಿದ್ದರು: ನೀವು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿರಿ. ನಾನು ನನ್ನ ಜಮಾಅತಿನವರಿಗೋಸ್ಕರ ಬಹಳ ಪ್ರಾರ್ಥಿಸುತ್ತಿದ್ದೇನೆ. ಅಲ್ಲಾಹನು ಅವರನ್ನು ಸಂರಕ್ಷಿಸಲಿ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳುತ್ತಾರೆ: ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುವುದೇನೆಂದರೆ, ಅಲ್ಲಾಹನ ಕ್ರೋಧ ಇಳಿದು ಬರುವಾಗ ದುರ್ಜನರೊಂದಿಗೆ ಸಜ್ಜನರನ್ನೂ ಅದು ಆವರಿಸುತ್ತದೆ. ಅನಂತರ ಅವರ ಪರಲೋಕದ ಸ್ಥಿತಿ ಅವರ ಕರ್ಮಗಳಿಗನುಸಾರವಾಗಿರುವುದು. ಕೇವಲ ಅವರಿಗೆ ಅಲ್ಲ ಅವರೊಂದಿಗೆ ಭಯಭಕ್ತಿವುಳ್ಳವರ ಮೇಲೆಯು ಸಹ ಇದು ಪ್ರಭಾವ ಬೀರುತ್ತದೆ. ನಾನು ಮೊದಲು ಹೇಳಿದ ಹಾಗೆ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ ಸಹಜ ಕಾನೂನಾಗಿದೆ ಇದರ ಪ್ರಭಾವವು ಇರುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನೋಡಿರೀ! ಹಝ್ರತ್ ನೂಹ್ ಅಲೈಹಿಸ್ಸಲಾಮ್ ಅವರ ಭೂಕಂಪವು ಎಲ್ಲರನ್ನು ಆವರಿಸಿತು ಸಾಮಾನ್ಯವಾಗಿ ಎಲ್ಲಾ ಪುರುಷರಿಗೆ, ಮಹಿಳೆಯರಿಗೆ, ಹಿರಿಯರಿಗೆ ಹಾಗೂ ಕಿರಿಯರಿಗೆ ಹಝ್ರತ್ ನೂಹ್[ಅ] ಅವರ ದಾವೆ ಏನಾಗಿದೆ ಎಂಬುದರ ಬಗ್ಗೆ ಅರಿವಿರಲಿಲ್ಲ ಆದರೆ ಆ ಭೂಕಂಪವು ಅವರನ್ನು ಸಹ ಆವರಿಸಿತು. ಅದೇ ರೀತಿ ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜಿಹಾದ್‌ಗಳಲ್ಲಿ ಜಯ ಲಭಿಸಿದುದು ಇಸ್ಲಾಮಿನ ಸತ್ಯತೆಗೆ ದೃಷ್ಟಾಂತಗಳ ರೂಪದಲ್ಲಿದ್ದುವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಯಲ್ಲಿ ಸಹಾಬರು ಸಹ ಅದರಲ್ಲಿ ಭಾಗವಹಿಸಿದರು. ಆದರೆ ಪ್ರತಿಯೊಂದು ಯುದ್ಧದಲ್ಲಿ ಅವಿಶ್ವಾಸಿಗಳು ಮಾತ್ರವಲ್ಲ ಮುಸ್ಲಿಮರು ಸಹ ಕೊಲ್ಲಲ್ಪಟ್ಟರು. ಕೊಲ್ಲಲ್ಪಟ್ಟ ಮುಸ್ಲಿಮರು ಶಹೀದರೆಂದು ಕರೆಯಲ್ಪಟ್ಟರು. ಅದೇ ರೀತಿ ಪ್ಲೇಗ್ ರೋಗ ನಮ್ಮ ಸತ್ಯತೆ ಪ್ರಕಟಿಸುವ ಒಂದು ದೃಷ್ಟಾಂತವಾಗಿದೆ. ಆದರೆ ನಮ್ಮ ಜಮಾಅತಿನ ಕೆಲವು ವ್ಯಕ್ತಿಗಳು ಸಹ ಶಹೀದರಾಗುವ ಸಾಧ್ಯತೆಗಳಿವೆ. ಅನಂತರ ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮೊಟ್ಟ ಮೊದಲು ಮಾಡಬೇಕಾದುದು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದಾಗಿದೆ. ನಿಮ್ಮನ್ನು ಭಾವೋದ್ವೇಗಗಳಿಂದ ಮುಕ್ತರನ್ನಾಗಿ ಮಾಡಬೇಕು. ಅನಂತರ ಹುಖೂಖುಲ್ ಇಬಾದ್ (ದಾಸರ ಹಕ್ಕುಗಳನ್ನು) ಈಡೇರಿಸಿಕೊಡಿರಿ. ಅಲ್ಲಾಹನ ಬಗ್ಗೆ ಸತ್ಯವಾದ ವಿಶ್ವಾಸ ಹೊಂದಿರಿ. ಅಳಲಿನೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತಾ ಇರಬೇಕು. ಅಲ್ಲಾಹನ ಸನ್ನಿಧಿಯಲ್ಲಿ ಅಳುತ್ತಾ ಪ್ರಾರ್ಥನೆ ಮಾಡದೆ ಇರುವ ಯಾವ ದಿನವೂ ಇರಬಾರದು. ಅನಂತರ ನೀವು ಬಾಹ್ಯ ವಸ್ತುಗಳಿಂದ ಪ್ರಯೋಜನ ಪಡೆಯಲು ಪ್ರಯತ್ನಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಅಲ್ಲಾಹನ ವಿಧಿನಿರ್ಣಯ ಪ್ರಕಾರ ನಿಮ್ಮವರಲ್ಲಿ ಯಾರಾದರೂ ಪ್ಲೇಗ್ ರೋಗ ಬಾಧಿತರಾದರೆ ಅವನೊಂದಿಗೆ ಮತ್ತು ಅವನ ಸಂಬಂಧಿಕರೊಂದಿಗೆ ಅನುಕಂಪದಿಂದ ವರ್ತಿಸಿರಿ. ಪ್ರತಿಯೊಂದು ರೀತಿಯಲ್ಲಿ ಅವರಿಗೆ ಸಹಾಯ ನೀಡಿರಿ. ಅವರಿಗೆ ಚಿಕಿತ್ಸೆ ನೀಡಲು ಪರಿಪೂರ್ಣ ಪ್ರಯತ್ನ ಮಾಡಿರಿ. ಆದರೆ ಅನುಕಂಪ ತೋರಿಸುವುದರ ಅರ್ಥ ರೋಗಿಯ ವಿಷಮಯ ಶ್ವಾಸ ಮತ್ತು ಬಟ್ಟೆಗಳ ಬಗ್ಗೆ ನಿರ್ಲಕ್ಷ್ಯದಿಂದಿರುವುದಲ್ಲ. (ಮಲ್‌ಫೂಝಾತ್, ಸಂಪುಟ–9, ಪುಟ–251–253)

ನಿಸ್ಸಂದೇಹವಾಗಿಯೂ ಅನುಕಂಪ ತೋರಿಸಿರಿ ಆದರೆ ಅದರೊಂದಿಗೆ ತಮ್ಮನ್ನು ಸಂರಕ್ಷಿಸಿಕೊಳ್ಳುವುದು ಅಗತ್ಯವಾಗಿದೆ. ಅದರ ಪ್ರಭಾವದಿಂದ ತಮ್ಮನ್ನು ಸಂರಕ್ಷಿಸಿಕೊಳ್ಳಬೇಕು. ಈ ಉಪದೇಶಗಳಿಂದ ನಾವು ಪಾಠ ಕಲಿತುಕೊಳ್ಳಬೇಕು. ರೋಗಿಗಳಿಗೆ ಸಹಾಯ ನೀಡುವವರು ಆವಶ್ಯಕವಾದ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು. ಉದಾಹರಣೆಗೆ ಈಗ ಹೀಗೆ ಹೇಳಲಾಗುತ್ತಿದೆ, ಮಾಸ್ಕ್ ಧರಿಸಿರಿ ಎಂದು. ಅನಾವಶ್ಯಕವಾಗಿ ಜನರ ಮನೆಗಳಿಗೆ ಹೋಗುತ್ತಾ ಬರುತ್ತಾ ಇರಬಾರದು. ಸರಕಾರಗಳು ಸಹ ಆದೇಶಗಳನ್ನು ಹೊರಡಿಸುತ್ತಿದೆ ಅದನ್ನು ಪಾಲಿಸಬೇಕು. ಅವರೊಂದಿಗೆ ಸಹಕರಿಸಬೇಕು.

ಇಂದು ಇಲ್ಲಿ ಯು.ಕೆ ಸರಕಾರವು ಆದೇಶಿಸಿದೆ ಜನರು ಪಾರ್ಕ್‌ಗಳಲ್ಲಿ ಹೋಗುತ್ತಾರೆ ಪರಸ್ಪಸ ಸೇರುತ್ತಾರೆ. ಅನುಮತಿಯು ಕೇವಲ ವಾಕ್(walking) ಗೆ ಮಾತ್ರ ನೀಡಲಾಗಿದೆ. ಪಾರ್ಕ್‌ಗಳಲ್ಲಿ ಪಿಕ್‌ನಿಕ್ ಮಾಡಲು ಅಥವಾ ಜನ ಸೇರಲು ಪ್ರಾರಂಭ ಮಾಡದಿರಿ ಇದು ಸರಿಯಲ್ಲ. ಸರಕಾರವು ಇದರ ಕಡೆ ಪದೇ ಪದೇ ಗಮನ ಹರಿಸುತ್ತಾ ಇದೆ. ಕಾರ್‌ಗಳಲ್ಲಿ ಕುಳಿತುಕೊಂಡು ಹೋಗುತ್ತಾರೆ. ಸರಕಾರವು ಹೇಳಿದೆ ಒಂದು ವೇಳೆ ನೀವು ತಾಜ ಗಾಳಿ ಪಡೆಯುವುದಕ್ಕೆ ಮತ್ತು exercise ಮಾಡುವುದಕ್ಕೆ ಹೋಗುತ್ತಿದ್ದೇವೆ ಎಂದು ಹೇಳುವುದಾದರೆ ನೀವು ಮನೆಗಳಿಂದ ಕಾಲ್ನಡಿಗೆಯಲ್ಲಿ ಅಥವಾ ಸೈಕಲ್‌ಗಳಲ್ಲಿ ಹೋಗಿರಿ. ಕಾರ್‌ಗಳಲ್ಲಿ ಹೋಗುವುದು ಸರಿಯಲ್ಲ. ಈಗ ಕೆಲವು ಕಡೆ ಸರಕಾರವು ಕಾರ್ ಪಾರ್ಕಿಂಗ್ ಸ್ಥಗಿತಗೊಳಿಸಿದೆ ಅಲ್ಲಿ ಕಾರ್ ಪಾರ್ಕಿಂಗ್‌ಗೆ ಅನುಮತಿ ಇಲ್ಲ. ಏನೇ ಇರಲಿ ಅಹ್ಮದಿಯರು ಇಂತಹ ಕೃತ್ಯಗಳಿಂದ ದೂರ ಉಳಿಯಬೇಕು. ಯಾರಿಗೆ ಸೇವೆ, ಕೆಲಸಗಳು ವಹಿಸಲಾಗಿದೆಯೋ, ಖುದ್ದಾಮುಲ್ ಅಹ್ಮದಿಯಾ ಬಹಳ ಸ್ವಯಂ ಸೇವಕರನ್ನು ಸೇವೆಗೆ ಇಳಿಸಿದೆ. ಅವರು ಎಲ್ಲಾ ರೀತಿಯ ಮುಂಜಾಗ್ರತೆಗಳೊಂದಿಗೆ ಮತ್ತು ಪ್ರಾರ್ಥನೆಗಳೊಂದಿಗೆ ತಮ್ಮ ಕರ್ತವ್ಯಗಳನ್ನು ಈಡೇರಿಸಬೇಕು. ಅಜಾಗರೂಕತೆಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು. ವಿನಾ ಕಾರಣ ತಮ್ಮನ್ನು ತಾವೇ ನಾಶಕ್ಕೆ ಗುರಿಪಡಿಸಬಾರದು. ಹಾಗೆ ಗುರಿಪಡಿಸುವುದು ಅಜ್ಞಾನವೇ ಹೊರತು ಶೌರ್ಯವೇನೂ ಅಲ್ಲ. ಆದುದರಿಂದ ಬಹಳ ಜಾಗ್ರತೆ ವಹಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ಯಾರಾದರೂ ದೇವೇಚ್ಛೆ ಪ್ರಕಾರ ಈ ರೋಗಕ್ಕೆ ತುತ್ತಾಗಿ ಮೃತರಾದರೆ ಅಂತಹ ವ್ಯಕ್ತಿ ಶಹೀದ್ ಪದವಿ ಗಳಿಸುತ್ತಾರೆ. ಅಂತಹ ವ್ಯಕ್ತಿಯ ಮೃತ ಶರೀರಕ್ಕೆ ಸ್ನಾನ ಮಾಡಿಸುವುದಾಗಲಿ ಹೊಸ ಕಫನ್ ತೊಡಿಸುವುದಾಗಲಿ ಆವಶ್ಯಕವಾಗಿಲ್ಲ. ಅಂತಹ ಮೃತರೊಂದಿಗೆ ಶಹೀದರೊಂದಿಗೆ ವರ್ತಿಸುವ ಹಾಗೆ ವರ್ತಿಸಲಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒತ್ತಿ ಹೇಳುತ್ತಾರೆ: ಮನೆಗಳನ್ನು ಬಹಳ ಚೆನ್ನಾಗಿ ಸ್ವಚ್ಛವಾಗಿರಿಸಿರಿ. ನಿಮ್ಮ ಬಟ್ಟೆಗಳನ್ನು ಶುದ್ಧವಾಗಿರಿಸಿರಿ. ಚರಂಡಿಗಳನ್ನು ಸ್ವಚ್ಛ ಮಾಡಿಸುತ್ತಾ ಇರಬೇಕು. ಇಲ್ಲಿ ಎಲ್ಲಾ ಸೇವರೇಜ್ ಸಿಸ್ಟಮ್ ಇದೆ ಒಳಭೂಮಿಯಲ್ಲಿರುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ಎಲ್ಲಿ ಚರಂಡಿಗಳು ತೆರೆದಿರುತ್ತದೆಯೋ ಅಲ್ಲಿ ಇದು ಬಹಳ ಅವಶ್ಯವಾದ ವಿಷಯವಿದೆ ಚರಂಡಿಗಳು ಸ್ವಚ್ಛವಾಗಿರಿಸುವುದು. ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಎಲ್ಲದಕ್ಕಿಂತಲೂ ಮುಖ್ಯವಾದುದು ನಿಮ್ಮ ಹೃದಯಗಳನ್ನು ಸ್ವಚ್ಛವಾಗಿರಿಸುವುದಾಗಿದೆ. ಅಲ್ಲಾಹನೊಂದಿಗೆ ಪರಿಪೂರ್ಣವಾಗಿ ರಾಜಿಮಾಡಿಕೊಳ್ಳಿರಿ. (ಮಲ್‌ಫೂಝಾತ್, ಸಂಪುಟ–9, ಪುಟ–253)

ಆದ್ದರಿಂದ ನಮಗೆ ಇಂದು ಇಂತಹ ಸಾಂಕ್ರಮಿಕ ರೋಗದ ಕಾರಣ ಉದ್ಭವವಾಗಿರುವ ಪರಿಸ್ಥಿತಿಯಲ್ಲಿ. ಪ್ರತಿಯೊಬ್ಬರು ಪ್ರಭಾವಿತಗೊಂಡಿದ್ದಾರೆ ನಾನು ಮುಂಚೆಯೇ ಹೇಳಿದ ಹಾಗೆ ಬರೆಯುವವರು ಬರೆಯುತ್ತಾರೆ ನಮಗೆ ಈ ವಿಷಯದ ಕಡೆ ಬಹಳ ಗಾಂಭೀರ್ಯದಿಂದ ಗಮನ ಹರಿಸಬೇಕಾಗಿದೆ. ಆದುದರಿಂದ ನಾವು ಯಾವಾಗಲೂ ನೆನಪಿನಲ್ಲಿಡಬೇಕಾದುದು ಏನೆಂದರೆ ನಮಗೆ ದುಆಗಳ ಮಾರ್ಗ ತೆರೆದಿಡಲಾಗಿದೆ. ಸರ್ವಶಕ್ತನಾದ ಅಲ್ಲಾಹನು ದುಆಗಳನ್ನು ಆಲಿಸುತ್ತಾನೆ. ನಿಷ್ಠಾವಂತರಾಗಿ ಅಲ್ಲಾಹನ ಮುಂದೆ ಬಾಗುವುದಾದರೆ ಅವನು ದುಆಗಳನ್ನು ಅಂಗೀಕರಿಸುತ್ತಾನೆ. ನೀವು ನಿಮ್ಮ ಬಗ್ಗೆ, ನಿಮ್ಮ ಪ್ರೀತಿಗೆ ಪಾತ್ರರಾದವರ ಬಗ್ಗೆ, ನಿಮ್ಮ ನಿಕಟ ಸಂಬಂಧಿಕರ ಬಗ್ಗೆ, ಜಮಾಅತ್ ಬಗ್ಗೆ ಮತ್ತು ಸಾಮಾನ್ಯವಾಗಿ ಮಾನವರೆಲ್ಲರ ಬಗ್ಗೆ ದುಆ ಮಾಡಬೇಕು. ಜಗತ್ತಿನಲ್ಲಿ ಅನೇಕ ಜನರು ಹೇಗಿದ್ದಾರೆ ಎಂದರೆ ಅವರಲ್ಲಿ ಅಹ್ಮದಿಯರು ಸಹ ಇರಬಹುದು ಅವರ ಬಳಿ ತಮ್ಮನ್ನು ರಕ್ಷಿಸಿಕೊಳ್ಳಲು ಜಾಗೃತ ವಹಿಸಲು ಯಾವುದೇ ರೀತಿಯ ಸಾಮಗ್ರಿ ಇಲ್ಲ, ಅವರಿಗೆ ಚಿಕಿತ್ಸೆ ಮಾಡಿಕೊಳ್ಳಲು ಸೌಲಭ್ಯವಿಲ್ಲ, ಊಟದ

ಸೌಲಭ್ಯವೂ ಇಲ್ಲ, ಅಲ್ಲಾಹನು ಅವರ ಮೇಲೆ ಮತ್ತು ನಮ್ಮೆಲ್ಲರ ಮೇಲೆ ಕಾರುಣ್ಯ ದೋರುವವನಾಗಲಿ. ನಾವು ಜಮಾಅತ್ತಿನಂದ ಇಂತಹವರಿಗೆ ಊಟ ಹಾಗೂ ಅವರಿಗೆ ಅವಶ್ಯವಿರುವ ಸಾಮಗ್ರಿಗಳನ್ನು ತಲುಪಿಸುವ ವ್ಯವಸ್ಥೆ ಸಹ ಮಾಡುತ್ತಿದ್ದೆವೆ. ಆದರೂ ಇದರಲ್ಲಿ ಕೊರತೆಯು ಉಂಟಾಗ ಬಹುದು. ಊಟ ಹಾಗೂ ಚಿಕಿತ್ಸೆಯ ಸೌಲಭ್ಯಗಳನ್ನು ಒದಗಿಸಿ ಕೊಡಲು ಪ್ರಯತ್ನಿಸಲಾಗುತ್ತಿದೆ. ಅಹ್ಮದಿಯರಿಗೆ ಈ ಸೌಲಭ್ಯಗಳನ್ನು ತಲುಪಿಸುವ ಪ್ರಯತ್ನದಲ್ಲಿ ಕೊರತೆಯು ಆಗುತ್ತದೆ ಬದಲಿಗೆ ನಾವು ಅಹ್ಮದಿಯೇತರರವರೆಗೂ ಈ ಸೌಲಭ್ಯಗಳನ್ನು ತಲುಪಿಸಲು ಪ್ರಯತ್ನಿಸುತ್ತಿದ್ದೇವೆ. ನಿಸ್ವಾರ್ಥರಾಗಿ ಕೇವಲ ಸೇವೆ ಮಾಡಬೇಕೆಂಬ ನಿಟ್ಟಿನಲ್ಲಿ ಶ್ರಮಿಸುತ್ತಿದ್ದೇವೆ ಆದರೂ ಕೆಲವು ಪಕ್ಷಪಾತಿಗಳು ಮಾಧ್ಯಮಗಳ ಮುಖಾಂತರ ಅಥವಾ ತೋರಿಕೆಯ ವಿದ್ವಾಂಸರು ಅಹ್ಮದಿಯರು ಮಾಡುತ್ತಿರುವಂತಹ ಈ ಮಾನವೀಯತೆಯ ಸೇವೆಗಳು ತಮ್ಮ ತಬ್‌ಲಿಗಿನಲ್ಲಿ (ಪ್ರಚಾರ ಕಾರ್ಯ) ಸಹಾಯವಾಗಬೇಕೆಂದು ಮಾಡುತ್ತಾರೆ ಎಂದು ಆಕ್ಷೇಪಿಸುತ್ತಾರೆ. ಏನೇ ಇರಲಿ ನಮಗೆ ಇವರ ಈ ಆಕ್ಷೇಪಗಳಿಂದ ಯಾವುದೇ ರೀತಿಯ ವ್ಯತ್ಯಾಸವಾಗುವುದಿಲ್ಲ. ಅಲ್ಲಹನು ನಮ್ಮ ನಿಯ್ಯತ್‌ಗಳನ್ನು (ಇರಾದೆ) ಅರಿಯುವವನಾಗಿದ್ದಾನೆ. ನಾನು ಪುನಃ ಹೇಳುತ್ತೇನೆ, ಇಂದಿನ ದಿನಗಳಲ್ಲಿ ನೀವು ಬಹಳ ದುಆ ಮಾಡಿರಿ, ಬಹಳ ದುಆ ಮಾಡಿರಿ. ಬಹಳ ದುಆ ಮಾಡಿರಿ. ಅಲ್ಲಾಹನು ನಮ್ಮ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರತಿಯೊಂದು ರೀತಿಯಲ್ಲಿ ಮತ್ತು ಜಮಾಅತನ್ನು ಸಂಪೂರ್ಣವಾಗಿ ತನ್ನ ಸಂರಕ್ಷಣೆಯಲ್ಲಿ ಶಾಂತಿಯಿಂದ ಇರಿಸುವವನಾಗಲಿ. ಅಲ್ಲಾಹನು ನನಗೂ ನಿಮಗೆಲ್ಲರಿಗೂ ದುಆ ಮಾಡುವ ಮತ್ತು ದುಆಗಳು ಅಂಗೀಕರಿಸಲ್ಪಡುವ ಭಾಗ್ಯವನ್ನು ದಯಪಾಲಿಸಲಿ.

ಒಂದು ವಿಷಯ ಹೇಳಲು ಇಚ್ಛಿಸುತ್ತೇನೆ. ವಾಣಿಜ್ಯೋದ್ಯಮಿಗಳಾಗಿರುವ ಅಹ್ಮದಿಯರು ಈ ದಿನಗಳಲ್ಲಿ ತಮ್ಮಲ್ಲಿರುವ ಸರಕುಗಳಿಂದ ಅನಾವಶ್ಯಕ ಲಾಭಗಳಿಸಲು ಪ್ರಯತ್ನಿಸಬಾರದು. ಈಗ ಮಾನವರ ಸೇವೆ ಮಾಡುವ ಕಾಲವಾಗಿದೆ. ಹಾಗೆ ಮಾಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಒತ್ತಿ ಹೇಳಿದ್ದಾರೆ. ಅನುಕಂಪದ ಭಾವನೆ ನಮ್ಮಲ್ಲಿ ಸೃಷ್ಟಿಸಲು ಹೇಳಿದ್ದಾರೆ. ಹುಖೂಖುಲ್ ಇಬಾದ್ ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡುವ ದಿನಗಳು ಇವುಗಳೇ ಆಗಿವೆ. ಆ ಮೂಲಕ ಅಲ್ಲಾಹನ ಸಾಮೀಪ್ಯ ಪಡೆಯುವ ದಿನಗಳು ಇವುಗಳಾಗಿವೆ. ಅಲ್ಲಾಹನು ಪ್ರತಿಯೊಬ್ಬರಿಗೆ ಅಂತಹ ಭಾಗ್ಯ ದಯಪಾಲಿಸಲಿ – ಆಮೀನ್.

ಈಗ ನಾನು ಇತ್ತೀಚೆಗೆ ನಿಧನ ಹೊಂದಿದ ನಮ್ಮ ಅತ್ಯಂತ ನಿಷ್ಠಾವಂತನಾದ ಉದ್ಯೋಗಿಯೂ ಜಮಾಅತಿನ ಸೇವಕರೂ ಆಗಿದ್ದ ಮುಹ್ತರಮ್ ನಾಸಿರ್ ಅಹ್ಮದ್ ಸಈದ್ ಸಾಹಿಬರ ಬಗ್ಗೆ ಪ್ರಸ್ತಾಪಿಸುವೆನು. ಅವರು ಏಪ್ರಿಲ್ ದಿನಾಂಕ 5ರಂದು ದೇವ ವಿಧಿಗನುಸಾರವಾಗಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**.

ನಾಸಿರ್ ಅಹ್ಮದ್ ಸಯೀದ್ ಸಾಹೆಬ್ 1951ರಲ್ಲಿ ಡಸ್ಕ, ಸಿಯಾಲ್‌ಕೋಟ್ ಜಿಲ್ಲೆಯ ಒಂದು ಊರಿನಲ್ಲಿ ತಾಜ್ ದೀನ್ ಸಾಹೆಬ್ ಅವರ ಮನೆಯಲ್ಲಿ ಜನಿಸಿದರು. ಅವರ ತಂದೆಯ ಹೆಸರು ತಾಜ್‌ದೀನ್ ಆಗಿತ್ತು. ಇವರು ಹುಟ್ಟಿನಿಂದಲೇ ಅಹ್ಮದಿ ಆಗಿದ್ದಾರೆ. ವಿದ್ಯಾಭ್ಯಾಸ ಹೆಚ್ಚಾಗಿರಲಿಲ್ಲ. ಅವರು ಎಂಟನೇಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನಂತರ 1973ರಲ್ಲಿ ನಝಾರತ್ ಉಮೂರೆ ಆಮದ ಮುಖಾಂತರ ಇವರು ಹಿಫಾಝುತೆ ಖಾಸ್ (ವಿಶೇಶ ಅಂಗರಕ್ಷಕ) ರಲ್ಲಿ ನೇಮಕವಾಯಿತು. (ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವರ ಕಾಲದಲ್ಲಿ ನನ್ನ ಪ್ರಕಾರ ಇವರು ರಬ್ವಹ್‌ದಿಂದ ಹಿಜ್ರತ್ ಮಾಡಿದ್ದರು) ತದನಂತರ ಮತ್ತೆ 1985ರಲ್ಲಿ ಅವರ ವರ್ಗಾವಣೆಯು ರಬ್ವಹ್‌ದಿಂದ ಲಂಡನ್ನಿಗೆ ಆಯಿತು. ವಯಸ್ಸಿನ ಪ್ರಕಾರ ಹಾಗೂ ಕಚೇರಿಯ ನಿಯಮಗಳ ಪ್ರಕಾರ ಅವರಿಗೆ 2010ರಲ್ಲಿ ನಿವೃತ್ತಿ ನೀಡಲಾಗಿತ್ತು ಆದರೆ ಅವರು ನಿವೃತ್ತಿ ಹೊಂದಿದ ನಂತರವೂ ಸಹ ಸೇವೆ ಸಲ್ಲಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಖಿಲಾಫತೆ ಸಾಲಿಸ (ತೃತೀಯ ಖಿಲಾಫತ್) ಮೊದಲುಗೊಂಡು ನನ್ನ ಕಾಲದ ತನಕ ಸೇವೆ ಸಲ್ಲಿಸುವ ಭಾಗ್ಯ ಅವರಿಗೆ ಲಭಿಸಿತು.

ನಾಸಿರ್ ಸಈದ್ ಸಾಹಿಬ್ ಅನೇಕ ಸದ್ಗುಣಗಳಲ್ಲಿ ಸಂಪನ್ನರಾಗಿದ್ದರು. ಅವರು ಬಹಳ ನಿಷ್ಠಾವಂತರಾಗಿ ಮತ್ತು ಜಾಗರೂಕರಾಗಿ ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಿದ್ದರು. ಅವರಿಗೆ ಖಿಲಾಫತ್‌ನೊಂದಿಗೆ ಸತ್ಯಸಂಧವಾದ ಮತ್ತು ಬಹಳ ಪ್ರೀತಿಯ ಸಂಬಂಧವಿತ್ತು. ಅವರು ತಮ್ಮ ಪತ್ನಿ ಕುಲ್‌ಸೂಮ್ ಬೇಗಮ್ ಸಾಹಿಬರನ್ನೂ ಖಾಲಿದ್ ಸಈದ್ ಎಂಬ ಪುತ್ರನನ್ನೂ ಅಗಲಿ ಹೋಗಿದ್ದಾರೆ. ಖಾಲಿದ್ ಸಈದ್ ಸಹ ಸ್ವಯಂ ಸೇವಕರಾಗಿ ಹಿಫಾಝುತೆ ಖಾಸ್‌ನಲ್ಲಿ ಕಾರ್ಯನಿರತರಾಗುತ್ತಿದ್ದಾರೆ. ಅವರು ತಮ್ಮ ತಂದೆಯವರ ಹಾಗೆ ನಿಷ್ಠಾವಂತರಾಗಿ ಅವರ ಹೆಜ್ಜೆ ಗುರುತುಗಳಲ್ಲಿ ಚಲಿಸುವ ಭಾಗ್ಯವನ್ನು ಅಲ್ಲಾಹನು ಅವರಿಗೆ ನೀಡಲಿ. ಮೃತರ ಪತ್ನಿಗೆ ಸಹನೆಯನ್ನೂ ಧೈರ್ಯವನ್ನೂ ಅಲ್ಲಾಹನು ದಯಪಾಲಿಸಲಿ.

ನಾಸಿರ್ ಸಯೀದ್ ಸಾಹೆಬ್‌ರವರ ಓರ್ವ ಸಂಬಂಧಿ ಮಹ್ಮೂದ್ ಸಾಹೆಬ್ ರಬ್ವಹ್‌ದಲ್ಲಿದ್ದಾರೆ. ಮಹ್ಮೂದ್ ಸಾಹೆಬ್ ಮೊದಲು ಸೈನ್ಯದಲ್ಲಿದ್ದರು ಮತ್ತು ಸಮ ವಯಸ್ಸಿನವರಾಗಿದ್ದರು. ಅವರು ಹೇಳುತ್ತಾರೆ ನಾಸಿರ್ ಸಯೀದ್ ಸಾಹೆಬ್‌ರವರ ಪೋಷಕರು ಸಹ ಅವರಿಗೆ ಸೈನ್ಯದಲ್ಲಿ ಸೇರಲು ಹೇಳಿದರು ಅಥವಾ ಇನ್ನು ಬೇರೆ ಯಾವುದಾದರು ಉದ್ಯೋಗ ಮಾಡಿಕೊಳ್ಳಲು ಹೇಳಿದರು ಆಗ ಅವರು ಅವರ ಪೋಷಕರಿಗೆ ಉತ್ತರಿಸಿದರು: ನಾನು ಉದ್ಯೋಗ ಮಡಬೇಕಾದರೆ ಈ ಜಾಮಾಅತ್ತಿನ ಉದ್ಯೋಗ ಮಡುವೆನು ಇಲ್ಲವಾದರೆ ಈ ಚಿಕ್ಕ ಜಮೀನಿನ ಕೆಲಸ ಮಾಡುವೆನು. ತದನಂತರ ನಾನು ಹೇಳಿದ ಹಾಗೆ ಇವರು ಜಮಾಅತ್ತಿನ ಸೇವೆಗೆ ಬಂದು ಸೇರಿದರು. ಅವರ ಓರ್ವ ಸಂಬಂಧಿಕರು ಬರೆಯುತ್ತಾರೆ, ಅವರು ತಮ್ಮ ಎಲ್ಲಾ ಸಂಬಂಧಿಕರೊಂದಿಗೆ ಪ್ರೀತಿಯ ಸಂಬಂಧವಿರಿಸಿದ್ದರು. ಮತ್ತು ಅನೇಕ ಅವಶ್ಯವಿರುವವರ ಅವಶ್ಯಕತೆಗಳನ್ನು ರಹಸ್ಯವಾಗಿ ಪೂರೈಸುತ್ತಿದ್ದರು.

ರಬ್ವಹ್‌ದ ಹಿಫಾಝುತೆ ಖಾಸ್‌ನ (ವಿಷೇಶ ಅಂಗರಕ್ಷಕರು) ಶಕೂರ್ ಸಾಹೆಬ್ ಹೇಳುತ್ತಾರೆ ನನಗೆ 1990ರಿಂದ 1998ರವರೆಗೆ ಲಂಡನ್ನಿನಲ್ಲಿ ನಾಸಿರ್ ಸಯೀದ್ ಸಾಹೆಬ್ ಅವರೊಂದಿಗೆ ಡ್ಯೂಟಿ ಮಾಡುವ ಭಾಗ್ಯ ಲಭಿಸಿತು ನಾನು ಅವರನ್ನು ಸದಾ ಖಿಲಾಫತ್ತಿನೊಂದಿಗೆ ನಿಷ್ಠಾವಂತ ಹಾಗೂ ವಿಧೇಯನನ್ನಾಗಿ ಕಂಡೆನು ಮತ್ತು ತಮ್ಮ ಡ್ಯೂಟಿಯ ವಿಷಯದಲ್ಲಿ ಬಹಳ ನಿಷ್ಠಾವಂತರಾಗಿದ್ದರು. ಯಾವಾಗಲು ತಮ್ಮ ಡ್ಯೂಟಿಗೆ ನಿಗದಿತ ಸಮಯಕ್ಕಿಂತ ಮುಂಚೆಯೇ ಹಾಜರಾಗುತ್ತಿದರು. ಮತ್ತು ರಹಸ್ಯವಾಗಿಡಬೇಕಾದ ವಿಷಯವನ್ನು ರಹಸ್ಯವಾಗಿರಿಸುತ್ತಿದ್ದರು ಅದೇ ರೀತಿ ತಮ್ಮ ಸಂಗಡಿಗರನ್ನು ಸಹ ರಹಸ್ಯದ ವಿಷಯವನ್ನು ರಹಸ್ಯವಾಗಿರಿಸಬೇಕೆಂದು ಹೇಳುತ್ತಿದ್ದರು. ಇಂತಹ ವಿಷಯಗಳನ್ನು ಯಾವಾಗಲೂ ತಮ್ಮ ಸಂಗಡಿಗರೊಂದಿಗೆ ಹಂಚುತ್ತಿರಲಿಲ್ಲ ರಹಸ್ಯವಾಗಿರಿಸುತ್ತಿದ್ದರು.

ಮೇಜರ್ ಮಹ್ಮೂದ್ ಸಾಹೆಬ್ ಹಿಫಾಝುತೆ ಖಾಸ್‌ನ ಮೇಲ್ವಿಚಾರಕರಾಗಿದ್ದಾರೆ ಅವರು ಬರೆಯುತ್ತಾರೆ ನಾಸಿರ್ ಸಯೀದ್ ಸಾಹೆಬ್ ಬಹಳ ನಿಷ್ಠಾವಂತ ಸೇವಕರಾಗಿದ್ದರು. ಅವರ ಆತ್ಮದ ಅಕ್ಷರೇಖೆಯು ಕೇವಲ ಖಿಲಾಫತೆ ಅಹ್ಮದಿಯಾ ಆಗಿತ್ತು. ಲೌಕಿಕ ಲಾಲಸೆಗಳಿಂದ ಅವರು ಶುದ್ಧವಾಗಿದ್ದರು. ತಮ್ಮ ಸೇವೆಯೇ ಅವರ ಮುಖ್ಯ ಉದ್ದೇಶವಾಗಿತ್ತು. ಸೇವೆ ಮಡುವುದಲ್ಲದೆ ಇನ್ನು ಯಾವ ಆಕಾಂಕ್ಷೆಯು ಅವರು ಹೊಂದಿರಲಿಲ್ಲ. ಅವರ ಹೃತ್ಪೂರ್ವಕ ಆಸೆಯು ಖಿಲಾಫತ್‌ನ ಆಸ್ಥಾನದಲ್ಲಿ ಜೀವ ತ್ಯಜಿಸಬೇಕೆಂದಾಗಿತ್ತು ಅವರೊಂದಿಗೆ ಹಾಗೆಯೇ ಆಯಿತು. ಆತಿಥಿ ಸತ್ಕಾರದಲ್ಲಿಯು ಬಹಳ ಮುಂದೆ ಇದ್ದರು. ಪ್ರತಿಯೊಬ್ಬ ಹಿರಿಯ ಹಾಗೂ ಕಿರಿಯರನ್ನು ಗೌರವದಿಂದ ಕಾಣುತ್ತಿದ್ದರು. ತಮ್ಮ ಮೇಲಧಿಕಾರಿಯವರನ್ನು ಬಹಳ ಗೌರವಿಸುತ್ತಿದ್ದರು. ಎಂದೂ ಯಾರ ಬಗ್ಗೆಯೂ ದೂರಲಿಲ್ಲ. ಯಾವಾಗಲು ಪ್ರತಿಯೊಂದು ಆದೇಶಗಳನ್ನು ಪಾಲಿಸುತ್ತಿದ್ದರು. ಮೇಜರ್ ಸಾಹೆಬ್ ಬರೆಯುತ್ತಾರೆ ಅವರು ವಖ್‌ಫೆ ಝಿಂದಗಿಗೆ ಒಂದು ಉದಾಹರಣೆ ಆಗಿದ್ದರು. ಸತ್ಯವೂ ಇದೇ ಆಗಿದೆ ಅವರು ನಿಸ್ವಾರ್ಥಿಯಾಗಿ ದುಡಿದಿದ್ದಾರೆ.

ಜರ್ಮನಿಯ ಜಾಮಿಯಾದ ಓರ್ವ ವಿದ್ಯಾರ್ಥಿ ಹಾರೂನ್ ಸಾಹೆಬ್ ಬರೆಯುತ್ತಾರೆ ಯಾವಾಗಾದರು ಜನರಲ್ಲಿ ಪರಸ್ಪರ ಜಗಳವಾದರೆ ಪರಸ್ಪರ ಸಂದಾನ ಮಾಡಿಸುವಲ್ಲಿ ಇವರ ಪಾತ್ರ ಮಹತ್ವದ್ದಾಗಿದ್ದದ್ದು ಹಲವಾರು ಸಾರಿ ಅನುಭವಕ್ಕೆ ಬಂದಿದೆ. ಒಮ್ಮೆ ನಾನು ಅವರೊಂದಿಗೆ ಪ್ರಶ್ನಿಸಿದೆ ನೀವು ತಮ್ಮ ರಜಾ ದಿನಗಳಲ್ಲಿ ಎಲ್ಲಿಗಾದರೂ ಹೋಗುತ್ತೀರಾ? ಎಂದು ಅದಕ್ಕೆ ಅವರು ಉತ್ತರಿಸಿದರು ಖಲೀಫರ ಬಳಿ ಇದ್ದು ಅವರ ಹತ್ತಿರ ಡ್ಯುಟಿ ಕೊಡುವುದೇ ವಾಖಿಫೆ ಝಿಂದಗಿಗೆ ರಜಾ ದಿನಗಳಾಗಿರುತ್ತದೆ ಇದಲ್ಲದೇ ಇನ್ನು ಬೇರೆ ಯಾವುದೇ ಉದ್ದೇಶವಿರ ಬಾರದು. ಅನೇಕ ಜನರು ಅವರ ಉತ್ತಮ ಸ್ವಭಾವ, ಅವರ ಆತಿಥಿ ಸತ್ಕಾರ, ಎಲ್ಲರೊಂದಿಗೆ ಮುಗುಳ್ನಗುತ್ತ ಭೇಟಿಯಾಗುವ ಸ್ವಭಾವಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರು ಜಮಾಅತ್ತಿನ ದೊಡ್ಡ ಹುದ್ದೆಯಲ್ಲಿಲ್ಲದಿದ್ದರೂ ಸಾಮಾನ್ಯ ಸೇವಕರಾಗಿದ್ದರೂ ಎಲ್ಲರ ಪ್ರೀಯರಾಗಿದ್ದರು.

ಜರ್ಮನಿಯ ನಾಸೀರ್ ಬಾಜ್ವಾಹ್ ಸಾಹೆಬ್ ಬರೆಯುತ್ತಾರೆ: ಅವರು ಬಹಳ ಉತ್ತಮ ಸ್ವಭಾವದವರಾಗಿದ್ದರು. ಎಲ್ಲರ ಬಗ್ಗೆಯು ಒಳ್ಳೆದನ್ನೇ ಯೋಚಿಸುತ್ತಿದ್ದರು. ಪ್ರತಿಕ್ಷಣ ಪ್ರತಿ ವ್ಯಕ್ತಿಯ ಸೇವೆಗಾಗಿಯು ಸಿದ್ಧವಾಗಿರುತ್ತಿದ್ದರು ಬೇರೆಯವರ ಸೇವೆ ಮಾಡಿ ಸಂತೋಷಗೊಳ್ಳುತ್ತಿದ್ದರು. ಅದರಲ್ಲಿಯೇ ಮನಃಶಾಂತಿ ಅನುಭವಿಸುತ್ತಿದ್ದರು. ಅಮೇರಿಕಾದ ಓರ್ವ ಯುವಕ ಸಯ್ಯದ್ ಉವೈಸ್ ಸಾಹೆಬ್ ಬರೆಯುತ್ತಾರೆ ಅಮೇರಿಕಾದ ಪ್ರವಾಸಕ್ಕೆ ಬಂದಾಗ ಬಹಳ ಸಂತೋಷದಿಂದ ಭೇಟಿ ಆಗುತ್ತಿದ್ದರು. ಎಂದೂ ಆಯಾಸಗೊಂಡಿರುವುದನ್ನು ಕಾಣಲಿಲ್ಲ ಮತ್ತು ಯುವಕರೊಂದಿಗೆ ಬಹಳ ಪ್ರೀತಿಯಿಂದ ಭೇಟಿ ಆಗುತ್ತಿದ್ದರು. ಮತ್ತು ಪ್ರೀತಿಯಿಂದ ತಿಳಿಮಾತು ಹೇಳುತ್ತಿದ್ದರು. ಹೀಗೆ ಅವರಲ್ಲಿ ಉತ್ಸಾಹ ತುಂಬಲು ಪ್ರಯತ್ನಿಸುತ್ತಿದ್ದರು. ಅವರಲ್ಲಿ ಇದೊಂದು ವಿಶೇಶ ಗುಣವಿತ್ತು. ಪ್ರತಿಯೊಂದು ರಾಷ್ಟ್ರಗಳಿಂದ ಪತ್ರಗಳು ಬರುತ್ತಿವೆ ಎಲ್ಲವನ್ನು ಇಲ್ಲಿ ಪ್ರಸ್ತಾಪಿಸಲು ಸಾಧ್ಯವಿಲ್ಲ.

ಫಿರೋರ್ಝ್ ಆಲಮ್ ಸಾಹೆಬ್ ಅವರು ಸಹ ಅವರ ಅನೇಕ ಉತ್ತಮ ಗುಣಗಳನ್ನು ಪ್ರಸ್ತಾಪಿಸಿದ್ದಾರೆ ಅವರು ಬರೆಯುತ್ತಾರೆ ವಿನಮ್ರತೆ ಹಾಗೂ ವಿಧೇಯತೆಯ ಸ್ವಭಾವ ಹೊಂದಿದ್ದರು. ಅವರು ಒಬ್ಬಂಟಿ ಆಗಿ ಇಲ್ಲಿದ್ದಾಗ ಅವರ ಆತಿಥ್ಯ ಸತ್ಕಾರ ಮಾಡುತ್ತಿದ್ದರು. ಅನಂತರ ಅವರ ಆರಾಧನೆಯ ಬಗ್ಗೆ ಪ್ರಸ್ತಾಪಿಸುತ್ತಾರೆ: ನಾನು ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿ[(ರ)] ಅವರ ಅನಾರೋಗ್ಯದ ಕಾಲದಲ್ಲಿ ಮಸೀದಿಯಲ್ಲಿ ರಾತ್ರಿ ತಹಜ್ಜುದ್ ಸಮಾರ್ಝ್ ನಿರ್ವಸುವಾಗ ಅವರನ್ನು ಬಹಳ ದುಃಖದಿಂದ ಪ್ರಾರ್ಥನೆಗಳನ್ನು ಮಾಡುತ್ತಿರುವುದನ್ನು ಕಂಡಿದ್ದೇನೆ.

ಜರ್ಮನಿಯ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಮಾಜಿ ಅಧ್ಯಕ್ಷರಾದ ಹಸನಾತ್ ಸಾಹೆಬ್ ಅವರು ಸಹ ವಾಖಿಫೆ ಝಿಂದಗಿ ಆಗಿದ್ದಾರೆ. ಅವರು ಸಹ ಹೀಗೆ ಬರೆದಿದ್ದಾರೆ: ಅವರ ನಿಷ್ಠೆ, ಡ್ಯುಟಿಯಲ್ಲಿ ಸಮರ್ಪಣೆ, ಖಿಲಾಫತ್ನೊಂದಿಗೆ ಅವರ ನಿಷ್ಠೆಯನ್ನು ಕಂಡು ನಮಗೆ ಅಸೂಯೆ ಉಂಟಾಗುತ್ತದೆ. ಒಂದು ಕಡೆ ಅವರಲ್ಲಿ ಸರಳತೆ ಇದ್ದರೆ ಇನ್ನೊಂದು ಕಡೆ ಸಾಮಾನ್ಯ ವಿವೇಕವೂ ಇತ್ತು. ಮತ್ತೆ ಹೇಳುತ್ತಾರೆ ಖುದ್ದಾಮುಲ್ ಅಹ್ಮದಿಯಾದ ಅಧ್ಯಕ್ಷ ಆಗಿದ್ದರಿಂದ ಡ್ಯುಟಿಯ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಳ್ಳುವ ಭಾಗ್ಯ ಲಭಿಸಿತು. ಅವರು ಎಂದೂ ತಮ್ಮ ಆರೋಗ್ಯ ಅಥವಾ ವಯಸ್ಸು ಹೆಚ್ಚಾಗಿದೆ ಎಂದು ತೋರಿಸಲಿಲ್ಲ. ತಮ್ಮ ಡ್ಯೂಟಿಯಲ್ಲಿ ಅವರು ಎಲ್ಲಾ ಯುವಕರ ಹಾಗೆ ಕಾಣುತ್ತಿದ್ದರು. ಹಸನಾತ್ ಸಾಹೆಬರು ಬರೆಯುತ್ತಾರೆ: ನಾನು ಕಂಡಹಾಗೆ ಅವರೊಂದಿಗೆ ಯಾರಾದರು ಅವರ ವಯಸ್ಸು ಹೆಚ್ಚಾಗಿದೆ ಎಂದು ಉತ್ತಮವಾಗಿ ವರ್ತಿಸುತ್ತಿದ್ದರೆ ಅದನ್ನು ಇಷ್ಟಪಡುತ್ತಿರಲಿಲ್ಲ. ಉಳಿದ ಯುವಕರು ಡ್ಯುಟಿ ನೀಡುತ್ತಿರುವ ಹಾಗೆ ನಾನು ಡ್ಯೂಟಿ ನೀಡುವೆನು. ತಮಗಿಂತ ಕಿರಿಯವರೊಂದಿಗೆ ಬಹಳ ಗೌರವದಿಂದ ವರ್ತಿಸುತ್ತಿದ್ದರು. ಬಹಳ ಪ್ರೀತಿಯಿಂದ ಕಾಣುತ್ತಿದ್ದರು ಅವರು ಹೇಳುತ್ತಾರೆ ಅವರ ಈ ವರ್ತನೆಯಿಂದ ನಮಗೆ ನಾಚಿಕೆ ಉಂಟಾಗುತ್ತಿತ್ತು. ಡ್ಯೂಟಿ ನೀಡುತ್ತಿದ್ದ ಯುವಕರಲ್ಲಿ ಉತ್ಸಾಹ ತುಂಬುತ್ತಿದ್ದರು. ಇದು ಬಹಳ ಒಳ್ಳೆಯ ಗುಣವಾಗಿದೆ. ಅವರು ಹೇಳುತ್ತಾರೆ ಜನರು ಶಿಬಿರಗಳನ್ನು ಆಯೋಜಿಸಿ ಅಥವಾ ಭಾಷಣಗಳನ್ನು ನೀಡಿ ಟ್ರೈನಿಂಗ್ ನೀಡುತ್ತಾರೆ ಆದರೆ ಇವರು ನಿಡುವಂತಹ ಡ್ಯೂಟಿಯ ಶೈಲಿಯೇ ಟ್ರೈನಂಗ್ ಆಗಿತ್ತು. ಇವರು ಭೇಟಿ ಆದಾಗ ಯಾವಾಗಲೂ ಹೀಗೆ ಹೇಳುತ್ತಿದ್ದರು: ನನಗೋಸ್ಕರ ದುಆ ಮಾಡಿರಿ ನನ್ನ ಅಂತಿಮವು ಉತ್ತಮವಾಗಲಿ ಎಂದು.

ರಶಿಯನ್ ಡೆಸ್ಕ್‌ನ ಖಾಲಿದ್ ಅಹ್ಮದ್ ಸಾಹೆಬ್ ಹೇಳುತ್ತಾರೆ: ಅವರು ಯಾವಾಗಲೂ ಬಡವರ ಸಹಾಯ ರಹಸ್ಯವಾಗಿ ಮಾಡುತ್ತಿದ್ದರು. ಇದಲ್ಲದೆ ಜಮಾಅತ್ತಿನ ಅನೇಕ ಸಿರಿವಂತ ಜನರಿಗೆ ಬಡ ಸಹೋದರ ಸಹೋದರಿಯ ಸಹಾಯ ಮಾಡಲು ಹೇಳುತ್ತಿದ್ದರು.

ಅವರ ಇನ್ನೊಂದು ವಿಶೇಶ ಗುಣ ಎಂದರೆ ಅತಿಥಿಯರ ಗೌರವಿಸುವುದಾಗಿತ್ತು. ಅವರ ಈ ಗುಣ ವಿಶೇಶವಾಗಿ ಜಲ್ಸದ ಸಂದರ್ಭದಲ್ಲಿ ನಾವು ಕಾಣ ಬಹುದಾಗಿತ್ತು. ಜಲ್ಸಕ್ಕೆ ಆಗಮಿಸಿರುವಂತಹ ಅನೇಕ ಅತಿಥಿಗಳನ್ನು ಇವರು ಹೃತ್ಪೂರ್ವಕವಾಗಿ ಸತ್ಕರಿಸುತ್ತಿದ್ದರು. ಮತ್ತು ಅನೇಕ ಅತಿಥಿಗಳು ಬೇರೆ ಬೇರೆ ರಾಷ್ಟ್ರಗಳಿಂದ ಅಗಮಿಸಿರುವ ಅತಿಥಿಗಳನ್ನು ತಮ್ಮ ಮನೆಗೆ ಆಹ್ವಾನಿಸಿ ಅವರ ಊಟೋಪಚಾರ ಮಾಡುತ್ತಿದ್ದರು. ಅದರೊಂದಿಗೆ ಎಲ್ಲಾ ಅತಿಥಿಗಳಿಗೆ ಮಸೀದಿಯಲ್ಲಿ ಬಳಸಲಾದ ಜಾನಮಾಝುನ್ನು ನೀಡುತ್ತಿದ್ದರು.

ಜರ್ಮನಿಯ ಅಥರ್ ಝುಬ್ಬೈರ್ ಸಾಹೆಬ್ ಬರೆಯುತ್ತಾರೆ: ಖಿಲಾಫತ್‌ನೊಂದಿಗೆ ಅವರು ಬಹಳ ನಿಷ್ಠೆಯ ಸಂಬಂಧ ಇರಿಸಿದ್ದರು. ಬಹಳ ನಿಷ್ಠಾವಂತರಾಗಿದ್ದರು, ಮಾತನಾಡುವ ಶೈಲಿಯು ಬಹಳ ವಿನಮ್ರವಾಗಿತ್ತು. ಯಾವಾಗಾದರು ಮುಂದಿನ ಶಿಫ್ಟ್‌ಗೆ ಬರುವಂತಹವರು ಸ್ವಲ್ಪ ತಡವಾಗಿ ಬಂದರು ಸಹ ಅವರು ಎಂದೂ ದೂರುತ್ತಿರಲಿಲ್ಲ ಬದಲಿಗೆ ಅಲ್ಲಹನಿಗೆ ಕೃತಜ್ಞತೆ ತೋರುತ್ತಿದ್ದರು ಖಲೀಫರಿಗೆ ಇನ್ನಷ್ಟು ಸಮಯ ಸೇವೆ ನೀಡಲು ಅಲ್ಲಾಹನು ಅವಕಾಶ ನೀಡಿದನು ಎಂದು. ಅನಾರೋಗ್ಯರಾಗುತ್ತಿದ್ದರು ಸಹ ಡ್ಯೂಟಿಯಿಂದ ಬೇಗ ಹೋಗಬೇಕೆಂದು ಆಶಿಸುತ್ತಿರಲಿಲ್ಲ ಬದಲಿಗೆ ಅನಾರೋಗ್ಯದ ಕೊನೆಯ ಗಳಿಗೆಯಲ್ಲಿಯು ಸಹ ನಾನು ಅವರ ಪುತ್ರ ಹೇಳಿದ್ದನ್ನು ಕೇಳಿದೆ ಅವರು ಅಂತಹ ಸಂದರ್ಭದಲ್ಲಿಯು ತನ್ನ ಪುತ್ರನಿಗೆ ಕೇಳಿದರು ಸಮಯ ಏನಾಗಿದೆ? ಎಂದು. ಅವರಿಗೆ ಸಮಯ ತಿಳಿಸಿದಾಗ ಅವರು ಹಾಗಾದರೆ ಇಂದಿನ ಡ್ಯುಟಿಯು ಸಹ ಹೋಯಿತು ಎಂದರು. ನಾನು ಇಂದು ಡ್ಯುಟಿಗೆ ಹೋಗಲು ಸಾಧ್ಯವಿಲ್ಲ. ಅಂದರೆ ಅವರು ಅನರೋಗ್ಯರಾಗಿದ್ದರು ಸಹ ಅವರಿಗೆ ಡ್ಯುಟಿಯ ಯೋಚನೆ ಇತ್ತು.

ಮತ್ತೆ ಇಲ್ಲಿನ ಹಮ್ಝುಝ ರಶೀದ್ ಸಾಹೆಬ್ ಅವರು ಹೇಳುತ್ತಾರೆ: ಬಹಳ ಪ್ರೀತಿ ಮಾಡುವ ವ್ಯಕ್ತಿತ್ವ ಹೊಂದಿದ್ದರು ಮತ್ತು ಉತ್ಸಾಹ ತುಂಬುವಂತಹ ಸ್ವಭಾವದವರಾಗಿದ್ದರು. ಯುವಕರಿಗೆ ಇವರು ಓರ್ವ ಮಾರ್ಗದರ್ಶಕರಾಗಿದ್ದರು. ಬಹಳ ನಿಸ್ವಾರ್ಥರಾಗಿ ತಮ್ಮ ಹೊಣೆಗಾರಿಕೆಯನ್ನು ನೀಡುವವರಾಗಿದ್ದರು. ಖಿಲಾಫತ್‌ನೊಂದಿಗೆ ಬಹಳ ಪ್ರೀತಿಯ ಸಂಬಂಧ ಇರಿಸುವವರಾಗಿದ್ದರು. ಯುವಕರಿಗೆ ಹೇಳುತ್ತಿದ್ದರು ನೀವೆಲ್ಲರು ಖಲೀಫರನ್ನು ಪ್ರೀತಿಸುತ್ತ ಡ್ಯುಟಿ ಮಾಡಬೇಕು ಈ ವಿಷಯವು ಎಲ್ಲಾ ವಿಷಯಕ್ಕಿಂತ ಮಿಗಿಲಾಗಿರಿಸಬೇಕು ಎಂದು.

ಸಯ್ಯದ್ ತಾಹ ಸಾಹೆಬ್ ಇಂಡೋನೇಶಿಯದ ಮುಬಲ್ಲಿಗ್ ಆಗಿದ್ದಾರೆ ಅವರು ಹೇಳುತ್ತಾರೆ: ನಾನು ಅವರ ಭೇಟಿ ಆದಾಗ ಅವರು 2000ರಲ್ಲಿ ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿ ಅವರೊಂದಿಗೆ ಇಂಡೋನೇಶಿಯಕ್ಕೆ ಆಗಮಿಸಿದ್ದ ಘಟನೆಗಳು ಹೇಳುತ್ತಿದ್ದರು. ಅವರು ಹೇಳುತ್ತಾರೆ ಒಮ್ಮೆ ಇಲ್ಲಿ ಮಸೀದಿಗೆ ಆಗಮಿಸಿದರು ಅಲ್ಲಿ ಬಟ್ಟೆ ತೊಳೆಯುವ ವ್ಯವಸ್ಥೆ ಇರಲಿಲ್ಲ ಅದಕ್ಕೆ ನಾವು ಅವರಿಗೆ ಹೇಳಿದೆವು ನಮಗೆ ಆ ಬಟ್ಟೆಗಳನ್ನು ನೀಡಿರಿ ನಾವು ಹೊರಗಡೆಯಿಂದ ಸ್ವಚ್ಛಗೊಳಿಸುವೆವು ಎಂದು ಆಗ ಅವರು ಹೇಳಿದರು ನಾವು ನಮ್ಮ ಬಟ್ಟೆಗಳನ್ನು ಸ್ವತಃ ತೊಳೆಯುತ್ತೇವೆ. ನಾವು ಸೇವಕರಾಗಿದ್ದೇವೆ ನಾವು ಬೇರೆಯವರಿಂದ ಬಟ್ಟೆ ತೊಳಿಸುವಷ್ಟು ಉನ್ನತ ಮಟ್ಟದಲದಲಿಲ್ಲ. ಬಹಳ ಪ್ರಯತ್ನದ ನಂತರವೂ ನಮಗೆ ಅವರು ಬಟ್ಟೆಗಳನ್ನು ನೀಡಲಿಲ್ಲ. ಇದು ಚಿಕ್ಕ ವಿಷಯ ಎಂದೆನಿಸುತ್ತದೆ ಆದರೆ ಇದರಲ್ಲಿ ಓರ್ವ ವಾಖಿಫೆ ಝಿಂದಗಿಗೆ ಬಹಳ ಪಾಠವಿದೆ.

ಯು.ಕೆ.ಯ ಮಾಜಿ ಮುಹ್‌ತಮಿಮ್ ಮಖಾಮಿ ಅದ್‌ನಾನ್ ಝುಫರ್ ಸಾಹಿಬ್ ಬರೆಯುತ್ತಾರೆ: ಡ್ಯೂಟಿ ನೀಡುವ ಕಡೆ ನಮಗೆ ವಿಶೇಷವಾಗಿ ಗಮನ ಹರಿಸುತ್ತಿದ್ದರು ಮತ್ತು ಇನ್ನುಳಿದ ವಿಷಯಗಳು ಸಹ ಪ್ರಸ್ತಾಪಿಸಿದ್ದಾರೆ ಅಂದರೆ ಡ್ಯೂಟಿಯ ಸಮಯದಲ್ಲಿ ಊಟದ ಬಗ್ಗೆ ಗಮನ ಹರಿಸುವುದು ಮುಂತಾದವುಗಳು. ಇದರೊಂದಿಗೆ ಇನ್ನೊಂದು ವಿಶೇಷ ವಿಷಯವನ್ನು ಬರೆದಿದ್ದಾರೆ ಅವರು ಬರೆಯುತ್ತಾರೆ ಅವರು ನನಗೆ ಖಿಲಾಫತ್‌ಗೆ ಗೌರವ ಅರ್ಪಣೆಯನ್ನು ಕಲಿಸಿದರು. ಖಿಲಾಫತ್‌ನೊಂದಿಗೆ ದೃಢ ಸಂಬಂಧ ಹೇಗೆ ಬೆಳೆಸ ಬಹುದು ಎಂದು ತಿಳಿಸಿದರು. ಬಹಳ ದೂರದೃಷ್ಟಿ ಹೊಂದಿದ ವ್ಯಕ್ತಿತ್ವ ಹೊಂದಿದ್ದರು. ಯಾರಾದರು ಅವರೊಂದಿಗೆ ಸಲಹೆ ಕೇಳಿದಾಗ ಅವರು ನೀಡಿದ ಸಲಹೆಯಿಂದ ಎಲ್ಲರಿಗೂ ಉಪಯೋಗವೇ ಆಗಿತ್ತು.

ಅತ್‌ಹರ್ ಅಹ್ಮದ್ ಸಾಹೆಬ್ ಹಿಫಾಝುತೆ ಖಾಸ್‌ನ ಉದ್ಯೋಗಿ ಆಗಿದ್ದಾರೆ ಅವರು ಬರೆಯುತ್ತಾರೆ ನಾನು 9 ವರ್ಷಗಳ ಕಾಲ ಡ್ಯೂಟಿ ನೀಡಿದೆ. ಅನಂತರ ಹಿಫಾಝುತೆ ಖಾಸ್‌ನಲ್ಲಿ ಸೇರಿಕೊಂಡೆ ಆಗ ನಾನು ನಾಸಿರ್ ಸಈದ್ ಸಾಹಿಬ್‌ರೊಂದಿಗೆ ಹೇಳಿದೆ: ನೀವು 48 ವರ್ಷಗಳ ಸುದೀರ್ಘ ಕಾಲದಿಂದ ಮೂರು ಖಲೀಫರಿಗೆ ಡ್ಯುಟಿ ನೀಡಿದ್ದೀರಿ. ನನಗೆ ಏನಾದರೊಂದು ಉಪದೇಶ ನೀಡಿರಿ. ಅವರು ಹೇಳಿದರು: ಇಲ್ಲಿ ನಿಮ್ಮ ಕಣ್ಣುಗಳನ್ನೂ ಕಿವಿಗಳನ್ನೂ ತೆರೆದಿಡಿರಿ. ನಾಲಗೆಯನ್ನು ಬಂದನದಲ್ಲಿಡಿರಿ. ಅದರೊಂದಿಗೆ ದುಆ ಮಾಡುತ್ತಾ ಇರಿ. ಈ ಉಪದೇಶ ಪ್ರತಿಯೊಬ್ಬ ವಾಕಿಫೇ ಝಿಂದಗಿಗೆ ಆವಶ್ಯಕವಾದುದಾಗಿದೆ. ಜಮಾಅತಿನ ಪ್ರತಿಯೊಬ್ಬ ಉದ್ಯೋಗಿ ಮತ್ತು ಜಮಾಅತಿನ ಸೇವಕರಿಗೆ ಇದು ಆವಶ್ಯಕವಾದ ಉಪದೇಶವಾಗಿದೆ. ಜಮಾಅತಿನ ಪ್ರತಿಯೊಬ್ಬ ಹುದ್ದೇದಾರನಗೂ ಆವಶ್ಯಕವಾದುದಾಗಿದೆ. ಅದು ಬಹಳ ಉತ್ತಮ ಉಪದೇಶವಾಗಿದೆ. ಅನಂತರ ಅವರು ಬರೆಯುತ್ತಾರೆ ಅವರೊಂದಿಗೆ ಡ್ಯೂಟಿ ನೀಡಿ. ಅವರಿಗೆ ಜನರು ಲಾಲಾಜಿ ಎನ್ನುತ್ತಿದ್ದರು. ಲಾಲಾಜಿಯವರೊಂದಿಗೆ ಡ್ಯೂಟಿ ನೀಡಿ ನನಗೆ ಅರಿವಾದ ವಿಷಯವೇನೆಂದರೆ ನಮ್ಮ ಅಧಿಕಾರಿಯಿಂದ ಹೊರಡಿಸಲಾದ ಆದೇಶದಂತೆ ನಡೆಯಬೇಕು. ಅವರ ಆದೇಶದಿಂದ ತಮಗೆ ಬೇಕಾದ ರೀತಿಯ ವ್ಯಾಖ್ಯಾನಗಳನ್ನು ಮಾಡಬಾರದು. ಅವರು ಹೇಳಿದ ಹಾಗೆಯೇ ಅವರು ಮಾಡುತ್ತಿದ್ದರು. ನಮಗೂ ಸಹ ಅದೇ ರೀತಿ ಉಪದೇಶಿಸುತ್ತಿದ್ದರು. ಮತ್ತು ದುಆಗಾಗಿ ಹೇಳುತ್ತಿದ್ದರು. ದುಆ ಮಾಡಿರಿ ನಾನು ಓಡಾಡುತ್ತಿರುವಾಗಲೇ ನನಗೆ ಅಲ್ಲಾಹನು ತಮ್ಮ ಬಳಿ ಕರೆದುಕೊಳ್ಳಲಿ ನನಗೆ ಯಾರ ಅಧಿನದಲ್ಲೂ ಇಡದಿರಲಿ ಎಂದು. ಅಲ್ಲಾಹನು ಅವರೊಂದಿಗೆ ಹಾಗೆಯೇ ವರ್ತಿಸಿದನು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ದಯಪಾಲಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಪತ್ನಿಗೆ ಆರೋಗ್ಯ ದಯಪಾಲಿಸಲಿ ಮತ್ತು ಸಬರ್ ನೀಡಲಿ. ಅವರ ಕುಟುಂಬದವರನ್ನು ಖಿಲಾಫತ್ ಮತ್ತು ಜಮಅತ್‌ನೊಂದಿಗೆ ನಿಷ್ಠೆಯಿಂದ ಇರಿಸಲಿ.

ನನಗೆ ಅವರು ಜಮಾಅತ್ತಿನ ಸೇವೆಗಾಗಿ ರಬ್ವಾಹ್‌ಗೆ ಬಂದ ಕಾಲದಿಂದ ಅವರ ಪರಿಚಯವಿದೆ. ನಿಸ್ಸಂದೇಹವಾಗಿಯು ಬರೆದವರೆಲ್ಲರು ಸರಿಯಾಗಿ ಬರೆದಿದ್ದಾರೆ. ಬಹಳ ಶ್ರಮವಹಿಸಿ ಸೇವೆ ಮಾಡುತ್ತಿದ್ದರು. ಮತ್ತು ಬಹಳ ವಿಧೇಯವಾಗಿದ್ದರು. ಅವರ ನಿಧನವು ಎಂತಹ ಕಾಲದಲ್ಲಾಯಿತು ಎಂದರೆ ಅವರ ಜನಾಝುದಲ್ಲಿ ಹೆಚ್ಚಿನ ಜನರು ಸೇರುವಂತಿಲ್ಲ. ಸ್ವಲ್ಪ ಕಾಲದಿಂದ ಅವರು ಹೃದಯ ರೋಗಿಯಾಗಿದ್ದರು. ಎನ್‌ಜಿಯೋಪ್ಲಷ್ಟಿ ಸಹ ಆಗಿತ್ತು. ಕೆಲವು ದಿನಗಳ ಮುಂಚೆ ಅವರಿಗೆ ಆಸ್ಪತ್ರೆಯಲ್ಲಿ ದಾಖಲು ಮಾಡಲಾಯಿತು. ಆಗ ವೈದ್ಯರು ಹೇಳಿದ್ದರು ಬಹಳ ಗಂಭೀರವಾದ ಹೃದಯಘಾತವಾಗಿದೆ ಎಂದು. ಆದರೆ ಮತ್ತೆ ಹೇಳಿದರು ಅದರೊಂದಿಗೆ ವೈರಸ್ ಸಹ ತಗಲಿದೆ ಎಂದು. ಅಲ್ಲಾಹನೆ ಬಲ್ಲವನಾಗಿದ್ದಾನೆ ಏನೆ ಇರಲಿ ಕೆಲವು ದಿನಗಳು ಆಸ್ಪತ್ರೆಯಲ್ಲಿ

ಚಿಕಿತ್ಸೆ ಪಡೆಯುತ್ತಿದ್ದರು. ಅಲ್ಲಿಯೇ ನಿಧನ ಹೊಂದಿದರು. ಇಲ್ಲಿ ಸರಕಾರದ ವತಿಯಿಂದ ಇರುವ ನಿಯಮಗಳಿಂದ ಅವರ ಮೃತದೇಹವನ್ನು ಸಹ ಇಲ್ಲಿಗೆ ತರಲು ಸಾಧ್ಯವಿಲ್ಲ. ಕೆಲವು ಹತ್ತಿರ ಸಂಬಂಧಿಕರು ಜನಾಝದಲ್ಲಿ ಭಾಗವಹಿಸಬಹುದು. ಅದಲ್ಲದೇ ಜನಾಝಗಾಗಿ ಒಂದು ಶರತ್ತು ಹೀಗಿದೆ ಅವರದ್ದೇ Funeral Homeನಲ್ಲಿ ಜನಾಝ ಮಾಡಬೇಕು ಎಂದು. ಆದ್ದರಿಂದ ಅವರ ಜನಾಝ ಗಾಯಿಬನ್ನು ನಾನು ಮುಂದೆ ಇನ್‌ಶಾ ಅಲ್ಲಾಹ್ ನಿರ್ವಹಿಸುವೆನು.

ಅವರು ತಮ್ಮ ಸೇವೆಯುನ್ನು ಮತ್ತು ತಮ್ಮ ಪ್ರತಿಜ್ಞೆಯುನ್ನು ನಿಷ್ಠಾಪೂರ್ವಕವಾಗಿ ನಿರ್ವಹಿಸುತ್ತಾ ಈ ಲೋಕದಿಂದ ಅಗಲಿ ಹೋದರು. ಅವರು ಅಲ್ಲಾಹನೊಂದಿಗೆ ಮಾಡಿದ ಪ್ರತಿಯೊಂದು ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಅವರ ಜೀವಿತದಲ್ಲಿ ನಮಗೆ ಇದುವೇ ಕಾಣಿಸುತ್ತದೆ. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಪ್ರಕಾರ ಅವರು ಶಹೀದರಾಗಿ ಗಣಿಸಲ್ಪಡುತ್ತಾರೆ. ಅಲ್ಲಾಹನು ಅವರನ್ನು ಶಹೀದರೊಂದಿಗೆ ಸೇರಿಸುವವನಾಗಲಿ. ಈ ರೋಗದಿಂದ ಮೃತರಾದ ಎಲ್ಲಾ ಅಹ್ಮದಿಯರೊಂದಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸುವವನಾಗಲಿ. ನಮ್ಮ ಪ್ರಾರ್ಥನೆ ಇದಾಗಿದೆ: ಪ್ರತಿಯೊಬ್ಬನು ಅಲ್ಲಾಹನ ರಹಮ್ ಮತ್ತು ಮಗ್‌ಫಿರತ್ ಗಳಿಸುವವನಾಗಲಿ – ಆಮೀನ್.

---

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅನುಗ್ರಹಗಳಿಗೆ ಕೃತಜ್ಞರಾದರೆ ನಾನು ಇನ್ನೂ ಹೆಚ್ಚು ಅನುಗ್ರಹಿಸುವೆನು. ಕೃತಘ್ನರಾದರೆ ಶಿಕ್ಷೆಗೆ ಗುರಿಪಡಿಸುವೆನು.

**ಸತ್ಯವಿಶ್ವಾಸಿ (ಮೂಮಿನ್) ಮತ್ತು ಅವಿಶ್ವಾಸಿ (ಕಾಫಿರ್) ಗಿರುವ ವ್ಯತ್ಯಾಸಗಳು:**

ಮೂಮಿನ್‌ನ (ಸತ್ಯ ವಿಶ್ವಾಸಿ) ಕಾರ್ಯವೇನೆಂದರೆ ಅವನು ತನಗೆ ದೊರೆತಿರುವ ಯಶಸ್ಸಿನ ಬಗ್ಗೆ ವಿನೀತನಾಗಿರುವನು ಮತ್ತು ಅಲ್ಲಾಹನನ್ನು ಕೊಂಡಾಡುವನು. ಅಲ್ಲಾಹನು ತನ್ನ ಮೇಲೆ ಅನುಗ್ರಹ ತೋರಿದನು ಎಂದು ಭಾವಿಸಿ ತನ್ನ ಹೆಜ್ಜೆಗಳನ್ನು ಮುಂದೆ ಹಾಕುವನು ಮತ್ತು ಎಲ್ಲಾ ಪರೀಕ್ಷೆಗಳಲ್ಲಿ ದೃಢತೆ ತೋರಿಸಿ ಅಲ್ಲಾಹನ ಅನುಗ್ರಹ ಪಡೆಯುವನು. ನೋಡಲಿಕ್ಕೆ ಓರ್ವ ವಿಶ್ವಾಸಿ ಮತ್ತು ಅವಿಶ್ವಾಸಿಯ ಯಶಸ್ಸು ಒಂದೇ ರೀತಿಯದ್ದಾಗಿರುತ್ತದೆ. ಆದರೆ ನೆನಪಿಡಿರಿ. ಅವಿಶ್ವಾಸಿಯ ಯಶಸ್ಸು ದುರ್ಮಾರ್ಗವಾಗಿದೆ. ಮತ್ತು ಆ ಯಶಸ್ಸನ್ನು ದುರ್ಮಾರ್ಗಕ್ಕೆ ಕೊಂಡೊಯ್ಯುವ ಕಾರಣವೇನೆಂದರೆ ಅವನು ಅಲ್ಲಾಹನನ್ನು ನಂಬುವುದಿಲ್ಲ. ಬದಲಾಗಿ ಅದಕ್ಕೆ ತನ್ನ ಶ್ರಮ, ಬು ಬುದ್ಧಿವಂತಿಕೆ ಮತ್ತು ಅರ್ಹತೆಯೇ ಕಾರಣವೆಂದು ಭಾವಿಸುತ್ತಾನೆ. ಆದರೆ ಮೂಮಿನ್ ಅಲ್ಲಾಹನನ್ನು ನಂಬಿ ಅಲ್ಲಾಹನೊಂದಿಗೆ ಒಂದು ಹೊಸ ಸಂಬಂಧವನ್ನು ಜೋಡಿಸುತ್ತಾನೆ. ಆ ಮೂಲಕ ಅವನು ಪ್ರತಿ ಯಶಸ್ಸಿನ ಮೇಲೆ ಅಲ್ಲಾಹನ ಒಂದು ಹೊಸ ರೂಪವನ್ನು ಕಾಣುತ್ತಾನೆ. ಅವನಲ್ಲಿ ಬದಲಾವಣೆ ಉಂಟಾಗುತ್ತದೆ. "ಇನ್ನಲ್ಲಾಹ್ ಮುಅಲ್ಲಝೀನತ್ತಖೌ" (ಅನ್ನಹಲ್–129) ಎಂದರೆ – ನಿಶ್ಚಯವಾಗಿಯೂ ಭಯ ಭಕ್ತಿಯುಳ್ಳವರ ಜೊತೆಯಲ್ಲಿ ಅಲ್ಲಾಹನಿದ್ದಾನೆ. ಇಲ್ಲಿ ನೆನಪಿಡಬೇಕಾದ ವಿಷಯವೇನೆಂದರೆ ಪವಿತ್ರ ಖುರ್‌ಆನಿನಲ್ಲಿ "ತಖ್ವಾ" ಎಂಬ ಪದವು ಹಲವು ಸಲ ಬಂದಿರುತ್ತದೆ. ಅಂದರೆ ಯಾರು ಅಲ್ಲಾಹನಿಗೆ ಆದ್ಯತೆ ಕೊಡುತ್ತಾನೋ, ಅಲ್ಲಾಹನು ಅವನಿಗೆ ಆದ್ಯತೆ ನೀಡುತ್ತಾನೆ ಮತ್ತು ಲೋಕದಲ್ಲಿ ಎಲ್ಲಾ ತರಹದ ಅವಮಾನಗಳಿಂದ ರಕ್ಷಿಸುತ್ತಾನೆ. ನನ್ನ ವಿಶ್ವಾಸವೇನೆಂದರೆ ಮನುಷ್ಯನು ಎಲ್ಲ ವಿಧದ ಅವಮಾನ ಮತ್ತು ಕಷ್ಟಗಳಿಂದ ದೂರ ಉಳಿಯಬೇಕಾದರೆ ಅವನಿಗೆ ಒಂದೇ ಒಂದು ಮಾರ್ಗವಿದೆ. ಅದುವೇ ಭಯಭಕ್ತಿಯ ಮಾರ್ಗ. ಹಾಗಾದರೆ ಮಾತ್ರ ಅವನಿಗೆ ಯಾವ ಕೊರತೆಯೂ ಉಂಟಾಗಲಾರದು. ಸತ್ಯವಿಶ್ವಾಸಿಯನ್ನು ಅವನ ಯಶಸ್ಸುಗಳೇ ಮುಂದಕ್ಕೆ ಕೊಂಡ್ಯೊಯ್ಯುತ್ತವೆ. ಅವನು ನಿಂತಲ್ಲೇ ನಿಶ್ಚಲನಾಗಿ ನಿಲ್ಲುವುದಿಲ್ಲ.

**(ಮಲ್ಫೂಝಾತ್ ಸಂಪುಟ–1, ಪುಟ–134 ಮುದ್ರಣ 2018 ಖಾದಿಯಾನ್)**

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

---

## ಪವಿತ್ರ ರಮಝಾನ್ ತಿಂಗಳಿಗೆ ತಹರೀಕ್ ಜದೀದಿನೊಡನೆ ಘನಿಷ್ಠ ಸಂಬಂಧವಿದೆ.

ತಹ್‌ರೀಕ್ ಜದೀದ್ ಸ್ಥಾಪಕರಾದ ಸಯ್ಯದ್‌ನಾ ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ)(ರ) ಅವರು ಪವಿತ್ರ ರಮಝಾನ್ ತಿಂಗಳ ಮತ್ತು ತಹ್‌ರೀಕ್ ಜದೀದ್‌ಗೆ ಇರುವ ಅನ್ಯೋನ್ಯ ಸಂಬಂಧಗಳ ಕಡೆಗೆ ನಮ್ಮ ಗಮನ ಸೆಳೆಯುತ್ತಾ ಹೇಳುತ್ತಾರೆ. ರಮಝಾನಿನಿಂದ ಲಾಭಾನ್ವಿತರಾಗಬೇಕಾದರೆ ತಹ್‌ರೀಕ್ ಜದೀದ್‌ನ ರೀತಿಯಲ್ಲಿ ನಡೆದುಕೊಳ್ಳಿರಿ. ತಹ್‌ರೀಕ್ ಜದೀದನ್ನು ಬಲಗೊಳಿಸಲು ಬಯಸುವವರಾದರೆ ಉಪವಾಸಗಳಿಂದ ಲಾಭಾನ್ವಿತರಾಗಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವನ ನಡೆಸುವುದು, ಶ್ರಮ ಪಡುವುದು ಮತ್ತು ತ್ಯಾಗ ಭಾವನೆಗಳನ್ನು ರೂಢಿಸಿಕೊಳ್ಳುವುದು. ಈ ಪಾಠ ಕಲಿಸಿಕೊಡಲು ರಮಝಾನ್ ಬರುತ್ತದೆ. ಆದುದರಿಂದ ಯಾವ ಉದ್ದೇಶಕ್ಕಾಗಿ ರಮಝಾನ್ ಬಂದಿದೆಯೋ ಆ ಉದ್ದೇಶವನ್ನು ಸಾಧಿಸಲು ಪ್ರಯತ್ನ ಮಾಡಿರಿ. ಪ್ರತಿಯೊಬ್ಬ ವ್ಯಕ್ತಿ ಪ್ರಯತ್ನ ಮಾಡಬೇಕು. ಅವನ ರಮಝಾನ್ ತಹ್‌ರೀಕ್ ಜದೀದ್ ಆಗಿರಬೇಕು. ತಹ್‌ರೀಕ್ ಜದೀದ್ ರೀತಿಯಲ್ಲಿ ಅವನ ರಮಝಾನ್ ಆಗಿರಬೇಕು. ರಮಝಾನ್ ನಮ್ಮ ಆತ್ಮ ವ್ಯಾಮೋಹವನ್ನು ತ್ಯಜಿಸುವಂತಾಗಿರಬೇಕು. ನಾನು ನಿಮಗೆ ರಮಝಾನಿನಿಂದ ಲಾಭಾನ್ವಿತರಾಗಲು ಹೇಳಿದ ಉದ್ದೇಶ ವಾಸ್ತವದಲ್ಲಿ ತಹ್‌ರೀಕ್ ಜದೀದ್‌ನ ಧ್ಯೇಯೋದ್ದೇಶಗಳನ್ನು ರಮಝಾನಿನ ಪ್ರಕಾಶದಲ್ಲಿ ಅರಿಯಬೇಕು ಎಂಬುದಾಗಿದೆ. ನಾನು ನಿಮಗೆ ತಹ್‌ರೀಕ್ ಜದೀದ್ ಕಡೆ ಗಮನಹರಿಸಲು ಹೇಳಿದ ಉದ್ದೇಶವು ರಮಝಾನಿನ ಧ್ಯೇಯೋದ್ದೇಶಗಳು ಮನದಲ್ಲಿರಲಿ ಎಂದಾಗಿದೆ. ಸರಿಯಾದ ತ್ಯಾಗ ಮತ್ತು ನಿರಂತರ ತ್ಯಾಗ ನಿಮ್ಮ ಅಭ್ಯಾಸವಾಗಿರಲಿ. ಯಾವ ರಮಝಾನ್ ನಿಜವಾದ ತ್ಯಾಗಗಳಿಲ್ಲದೆ ಕಳೆದು ಹೋಗುತ್ತದೆಯೋ, ಅದು ರಮಝಾನ್ ಅಲ್ಲ, ಮತ್ತು ಆತ್ಮಶುದ್ಧಿ ಪಡೆಯದೆ ಹೋದರೆ ತಹ್‌ರೀಕ್ ಜದೀದ್, ತಹ್‌ರೀಕ್ ಜದೀದ್ ಅಲ್ಲ. **(ಖುತುಬ ಜಮಅ 4 ನವೆಂಬರ್ 1938)**.

ಈ ಕುರಿತು ಹುಝೂರ್(ಅಬಿಅ) 11 ನವೆಂಬರ್ 1938 ರ ಖುತುಬ ಪ್ರವಚನದ ಕೊನೆಯಲ್ಲಿ ಜಮಾಅತಿಗೆ, ತಹ್‌ರೀಕ್ ಜದೀದ್ ಚಂದಾದಾರರಿಗೆ ವಿಶೇಷವಾಗಿ ಪ್ರಾರ್ಥಿಸಲು ಒತ್ತು ನೀಡುತ್ತಾ ಹೇಳಿದರು. ಬರುವ ರಮಝಾನಿನ ಅಂತಿಮ ದಶಕ (ಅಶ್ರಾ) ವನ್ನು ಗತಿಸಿ ಹೋದ ತ್ಯಾಗಗಳಿಗೆ ಕೃತಜ್ಞತೆ ಸಲ್ಲಿಸುತ್ತ ಮತ್ತು ಭವಿಷ್ಯದಲ್ಲಿ ಹೊಸ ಚೈತನ್ಯ ಪಡೆಯಲು ವ್ಯಯ ಮಾಡಿರಿ. ಕಳೆದುಹೋದ ವರ್ಷಗಳಲ್ಲಿ ಯಾರಿಗೆ ಸಾಂಪತ್ತಿಕ ತ್ಯಾಗ ಮಾಡುವ ಭಾಗ್ಯ ದೊರೆತಿದೆಯೋ ಅವರು ಅಲ್ಲಾಹನಿಗೆ ಕೃತಜ್ಞೆ ಸಲ್ಲಿಸಲು ಪ್ರತಿಯೊಬ್ಬನು ಪ್ರಾರ್ಥನೆ ಮಾಡುವಾಗ ಅಲ್ಲಾಹನಿಗೆ ತ್ಯಾಗ ಮಾಡುವವರಿಗಾಗಿ ಪ್ರಾರ್ಥಿಸಲಿ. ಅವರು ಧರ್ಮದ ವೈಭವಕ್ಕಾಗಿ, ಧರ್ಮದ ಸ್ಥಿರತೆಗಾಗಿ ಮಾಡಿದ ತ್ಯಾಗಗಳ ಫಲವಾಗಿ ಅಲ್ಲಾಹನು ಅವರ ಮೇಲೆ ತನ್ನ ಅನುಗ್ರಹಗಳನ್ನು ಕಾರುಣ್ಯಗಳನ್ನು ದಯಪಾಲಿಸಲಿ. ಅವರಿಗೆ ತನ್ನ ಸಂಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಆಮೀನ್ **(ಅಲ್‌ಫಝ್ಲ್ 15 ನವೆಂಬರ್ 1938 ಪುಟ 4)**

ಅಲ್ ಫಝ್ಲ್ ಖಾದಿಯಾನ್ ದಿನಪತ್ರಿಕೆ 29 ನವೆಂಬರ್‌ನಲ್ಲಿ ಪ್ರಕಟಗೊಂಡ ಜಾಹೀರಾತಿನನ್ವಯ ನಿಷ್ಠಾವಂತ ಜಮಾಅತ್ ಬಾಂಧವರ ನೀತಿ ಹೇಗಿತ್ತೆಂದರೆ ಅವರು ಯಾವಾಗಲೂ ರಮಝಾನಿನ ಮಧ್ಯ ಭಾಗದವರೆಗೆ ತಮ್ಮ ವಾಗ್ದಾನದ ಪ್ರಕಾರ ಚಂದ ತಹ್‌ರೀಕ್ ಜದೀದ್ ಶತಪ್ರತಿಶತ ಪಾವತಿಸಿ ಅಲ್ಲಾಹನ ಅನುಗ್ರಹಗಳನ್ನು ಕಾರುಣ್ಯಗಳನ್ನು ಪಡೆಯಲು ಪ್ರಯತ್ನಪಡುತ್ತಾರೆ. ಆದುದರಿಂದ ಅಲ್ಲಾಹನ ಅಪಾರವಾದ ಕೃಪೆಯಿಂದ ಮತ್ತೊಮ್ಮೆ ನಾವು ಅಸಂಖ್ಯಾತ ಅನುಗ್ರಹ ದೈವಿಕ ಕಾರುಣ್ಯಗಳಿಗೆ ಪಾತ್ರರಾಗುವ ಪವಿತ್ರ ರಮಝಾನಿನಲ್ಲಿ ಪಾದಾರ್ಪಣೆ ಮಾಡಿದ್ದೇವೆ. ತಹ್‌ರೀಕ್ ಜದೀದ್ ಪಾವತಿಗಾರರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅವರು ತಮ್ಮ ಭವ್ಯ ಪರಂಪರೆಯನ್ನು ದೃಷ್ಟಿಯಲ್ಲಿಟ್ಟುಕೊಂಡು 20 ರಮಝಾನ್ ಅಲ್ ಮುಬಾರಕ್, ಮೇ ತಿಂಗಳು 14 ರವರೆಗೆ ತಮ್ಮ ವಾದಾನುಸಾರ ಪರಿಪೂರ್ಣ ಚಂದ ಪಾವತಿಸಿ ಹುಝೂರ್(ಅಬಿಅ) ರವರ ಸ್ವೀಕಾರ್ಹ ಪ್ರಾರ್ಥನೆಗಳಿಗೆ ಪಾತ್ರರಾಗುವ ಭಾಗ್ಯ ಪಡೆಯಿರಿ. ಅಲ್ಲಾಹನು ನಮಗೆಲ್ಲರಿಗೂ ಹೆಚ್ಚು ಹೆಚ್ಚಾಗಿ ಪಾಲಿಸಲು ಭಾಗ್ಯ ದಯಪಾಲಿಸಲಿ. **ಆಮೀನ್**

ಎಲ್ಲಾ ಜಿಲ್ಲಾ ಹಾಗೂ ಸ್ಥಳೀಯ ಅಮೀರ್, ಜಮಾಅತ್ ಅಧ್ಯಕ್ಷರು, ತಹ್‌ರೀಕ್ ಜದೀದ್ ಕಾರ್ಯದರ್ಶಿ ಹಾಗೂ ಮುಬಲ್ಲಿಗ್ ಇನ್‌ಚಾರ್ಜ್ ಸಾಹೇಬರುಗಳಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ತಮ್ಮ ತಮ್ಮ ಜಮಾಅತುಗಳಲ್ಲಿ ಸಂಪೂರ್ಣ ಚಂದ ನೀಡಿದವರ ಪಟ್ಟಿಗಳು 14 ಮೇ ತಿಂಗಳಿನ ಮುಂಚಿತವಾಗಿ ಅಂಚೆಯ ಮೂಲಕ ಅಥವಾ 20 ಮೇ ವರೆಗೆ E-mail ಮೂಲಕ ವಕಾಲತ್ ಮಾಲ್ ತಹರೀಕ್ ಜದೀದ್ ಖಾದಿಯಾನ್ ಕಳುಹಿಸಿಕೊಡಲು ವಿನಂತಿಸಲಾಗಿದೆ. ಈ ಪ್ರಯುಕ್ತ ಎಲ್ಲ ಜಮಾಅತುಗಳ ಪಟ್ಟಿಗಳು ಒಟ್ಟುಗೂಡಿಸಿ 29 ರಂಝಾನಿನಲ್ಲಿ ಸಾಮೂಹಿಕ ಪ್ರಾರ್ಥನೆಗೋಸ್ಕರ ಸಯ್ಯದನಾ ಹುಝೂರ್ ಅನ್ವರ್(ಅಬಿಅ) ಅವರ ಸಮ್ಮುಖ ಅರ್ಪಿಸಬಹುದಾಗಿದೆ.

**ಜಝಾಕುಮುಲ್ಲಾಹ್ ತಆಲಾ ಖೈರಃ**
**ವಕೀಲುಲ್ ಮಾಲ್ ತಹರೀಕ್ ಜದೀದ್ ಖಾದಿಯಾನ್**

# ದರ್‌ಸುಲ್ ಖುರ್‌ಆನ್

## ಪವಿತ್ರ ಖುರ್‌ಆನಿನ ಕೊನೆಯ ಮೂರು ಅಧ್ಯಾಯಗಳ ದರ್ಸ್ (ಪ್ರವಚನ)

**ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಆಗಮನದಿಂದ ಉದ್ಭವವಾಗುವ ಮುಂಜಾವಿನಿಂದ ಲಾಭಾನ್ವಿತರಾಗಲು ಹಾಗೂ ಈ ಅಧ್ಯಾಯಗಳಲ್ಲಿ ವಿವರಿಸಲಾದ ಪ್ರಾರ್ಥನೆಗಳ ಮೂಲಕ ಮತ್ತು ತನ್ನ ನಡವಳಿಕೆಯಿಂದ ದಜ್ಜಾಲಿನ ಷಡ್ಯಂತ್ರಗಳಿಂದ ರಕ್ಷಿಸಲ್ಪಡಲು ಉಪದೇಶ.**

**ಹಝ್ರತ್ ಮಸೀಹ್ ಮೌಊದ್(ಅ) ಪ್ರಸ್ತುತಪಡಿಸಿದ ವ್ಯಾಖ್ಯಾನದ ಮೂಲಕ ಈ ಅಧ್ಯಾಯಗಳ ಅಮೂಲಾಗ್ರ ವಿಷಯಗಳ ಮೇಲೆ ಅಭೂತಪೂರ್ವ ವಿಶ್ಲೇಷಣೆ.**

**ಸಾಮೂಹಿಕ ಪ್ರಾರ್ಥನೆ (ದುಆ)**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–06–2019** ರಂದು ನೀಡಿದ **ದರ್‌ಸುಲ್ ಖುರ್‌ಆನ್ (ಖುರ್‌ಆನ್ ಪ್ರವಚನ)**

أَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
قُلْ هُوَ اللّٰهُ اَحَدٌ۔ اَللّٰهُ الصَّمَدُ۔ لَمْ يَلِدْ وَلَمْ يُوْلَدْ۔ وَلَمْ يَكُنْ لَّهٗ كُفُوًا اَحَدٌ۔

بِسْمِ اللّٰهِ الرَّحْمٰنِ الرَّحِيْمِ
قُلْ اَعُوْذُ بِرَبِّ الْفَلَقِ۔ مِنْ شَرِّ مَا خَلَقَ۔ وَمِنْ شَرِّ غَاسِقٍ اِذَا وَقَبَ۔
وَمِنْ شَرِّ النَّفّٰثٰتِ فِي الْعُقَدِ۔ وَمِنْ شَرِّ حَاسِدٍ اِذَا حَسَدَ

بِسْمِ اللّٰهِ الرَّحْمٰنِ الرَّحِيْمِ
قُلْ اَعُوْذُ بِرَبِّ النَّاسِ۔ مَلِكِ النَّاسِ۔ اِلٰهِ النَّاسِ۔ مِنْ شَرِّ الْوَسْوَاسِ الْخَنَّاسِ۔
الَّذِيْ يُوَسْوِسُ فِيْ صُدُوْرِ النَّاسِ۔ مِنَ الْجِنَّةِ وَالنَّاسِ۔

**ಅಧ್ಯಾಯ ಅಲ್ ಇಖ್‌ಲಾಸ್ ಅನುವಾದ:**

ಪರಮ ದಯವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಹೇಳು. ಅವನು ಅಲ್ಲಾಹನು: ಏಕನು ಅವನು ನಿರಪೇಕ್ಷನು ಮತ್ತು ಸರ್ವರಿಗೂ ಆಶ್ರಯದಾತನು. ಅವನು ಜನಕನಲ್ಲ; ಜಾತನೂ ಅಲ್ಲ. ಅವನಿಗೆ ಸಮನಾಗಿ ಯಾರೂ ಇಲ್ಲ.

**ಅಧ್ಯಾಯ ಅಲ್–ಫಲಕ್ ಅನುವಾದ:**

ಪರಮದಯವಂತನೂ ಕಾರುಣ್ಯನಿಧಿಯೂ ಆದ ಅಲಾಹನ ನಾಮದಿಂದ. ಹೇಳು: ನಾನು ಸೃಷ್ಟಿ ಜಾಲಗಳ ಪ್ರಬುವಿನ ಅಭಯವನ್ನು ಯಾಚಿಸುತ್ತೇನೆ. ಅವನ ಸೃಷ್ಟಿಗಳ ದೋಷಗಳಿಂದೆಲ್ಲ. ಅಂಧಕಾರ ಆವರಿಸುವಾಗ ಉಂಟಾಗುವ ದೋಷದಿಂದಲೂ. ಗಂಟುಗಳ ಮೇಲೆ ಊದುವವರ ಉಪದ್ರವಿಂದಲೂ. ಮತ್ಸರಿ ಮತ್ಸರಪಡುವಾಗ ಉಂಟಾಗುವ ಅವನ ಉಪದ್ರವದಿಂದಲೂ (ನಾನು ಅಲ್ಲಾಹನ  ಅಭಯ ಯಾಚಿಸುತ್ತೇನೆ)

**ಅಧ್ಯಾಯ ಅನ್ನಾಸ್ ಅನುವಾದ:**

ಪರಮ ದಯವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಹೇಳು: ನಾನು ಅಭಯ ಯಾಚಿಸುತ್ತೇನೆ–ಮನುಷ್ಯರ ಪ್ರಭುವಿನ. ಮನುಷ್ಯರ ಸಾರ್ವಭೌಮನ. (ಮತ್ತು) ಮನುಷ್ಯರ ಆರಾಧ್ಯನ. (ದುರ್ಬೋಧನೆ ಮಾಡಿ) ಹಿಂದೆ ಸರಿಯುವ ದುರ್ಬೋಧಕನ ಉಪದ್ರವದಿಂದ (ನಾನು ಅಭಯ ಯಾಚಿಸುತ್ತೇನೆ). ಅವನು (ಆ ದುರ್ಬೋಧಕನು) ಮನುಷ್ಯ ಹೃದಯಗಳಲ್ಲಿ ಸಂಶಯ ಮೂಡಿಸುತ್ತಾನೆ. ಅವನು ಜಿನ್ನ್ (ಅಸಾಮಾನ್ಯ) ಮತ್ತು ಇನ್ಸ್ (ಸಾಮಾನ್ಯ) ವರ್ಗದಲ್ಲಿ ಸೇರಿದವನಾಗಿರುತ್ತಾನೆ.

ಅಂದರೆ ಅಲ್ಲಾಹನು ತನ್ನ ವ್ಯಕ್ತಿತ್ವದಲ್ಲಿ ಮತ್ತು ಗುಣಗಳಲ್ಲಿ ಮತ್ತು ಪ್ರತಾಪದಲ್ಲಿ ಏಕನಾಗಿರುವನು. ಅವನ ಸರಿಸಮಾನ ಯಾರೂ ಇಲ್ಲ. ಎಲ್ಲರೂ ಅವನ ಆಶ್ರಯದಾತರೇ.  ಅಣು ಅಣುವು ಅವನಿಂದ ಸೃಷ್ಟಿಸಲ್ಪಟ್ಟಿದೆ. ಸರ್ವ ವಸ್ತುಗಳಿಗೆ ಅವನೇ ಮೂಲ. ಸ್ವಯಂ ಯಾರಿಂದಲೂ ಸಹಕಾರ ಪಡೆದಿಲ್ಲ. ಲೋಕದ ಎಲ್ಲಾ ವಸ್ತುಗಳಿಗೆ ಅವನು ಆಶ್ರಯ ನೀಡುವನು. ಲೋಕದ ಎಲ್ಲ ವಸ್ತುಗಳು ಅವನಿಂದಲೇ ಆಶ್ರಯ ಪಡೆಯುತ್ತಿವೆ. ಆದರೆ ಸ್ವಯಂ ಅವನಿಗೆ ಯಾರ ಆಶ್ರಯ ಪಡೆಯುವ ಅಗತ್ಯ ಹೊಂದಿರುವುದಿಲ್ಲ. "ಅವನು ಯಾರ ಪುತ್ರನೂ ಅಲ್ಲ, ಯಾರ ಪಿತನೂ ಅಲ್ಲ. ಏಕೆಂದರೆ ಅವನಿಗೆ ಸರಿ ಸಮಾನ ಯಾರೂ ಇಲ್ಲ. ಖುರ್‌ಆನ್ ಪದೇ ಪದೇ ಅಲ್ಲಾಹನ ಮಹೋನ್ನತೆಯನ್ನು ಪ್ರಸ್ತಾಪಿಸಿದೆ. ಮತ್ತು ಅವನ ಮಹೋನ್ನತ ಗುಣಗಳ ಮೂಲಕ ಗಮನ ಸೆಳೆದಿದೆ. ನೋಡಿರಿ. ಇಂತಹ ದೇವನು ಮಾತ್ರ ನಮ್ಮ ಹೃದಯಗಳನ್ನು ಸೆಳೆಯಬಲ್ಲನೇ ಹೊರತು ಶವ, ದುರ್ಬಲ, ಅಲ್ಪ ಕರುಣೀಕ ಹಾಗೂ ಅಲ್ಪ ಶಕ್ತಿಯುಳ್ಳವನಲ್ಲ." (ಇಸ್ಲಮಿ ಉಸೋಲ್ ಕಿ ಫಿಲಾಸಫಿ, ರೂಹಾನಿ ಖಝಾಯೀನ್, ಸಂಪುಟ–10, ಪುಟ–417)

ಮತ್ತೆ ಅಲ್ಲಾಹನ ನಾಮ ವಿವರಣೆ ನೀಡುತ್ತ ಅವರು ಹೇಳಿದರು. "ಖುರ್‌ಆನಿನ ದೃಷ್ಟಿಕೋನದ ಮೇರೆಗೆ ಅಲ್ಲಾಹನೆಂದರೆ ಅವನ ಹೆಸರಿನಲ್ಲಿ ಎಲ್ಲ ಒಳಿತುಗಳು ಅದರ ಭವ್ಯತೆ ಮತ್ತು ಉಪಕಾರ ಒಳಗೊಂಡು ಚರವಸೀಮೆಗೆ ತಲುಪಿಸಬೇಕು. ಯಾವ ನ್ಯೂನತೆಯೂ ಅವನಲ್ಲಿ ಇರಕೂಡದು."  ಪವಿತ್ರ ಖುರ್‌ಆನಿನಲ್ಲಿ ಸರ್ವ ಸಂಪನ್ನ ಗುಣ ಹೊಂದಿದವನು ಅಲ್ಲಾಹನು ಮಾತ್ರನಾಗಿದ್ದಾನೆ." ಅಂದರೆ ಈ ಎಲ್ಲಾ ಗುಣಗಳು ಅಲ್ಲಾಹನ ನಾಮದಲ್ಲಿ ಅಡಗಿರುತ್ತದೆ. ಖುರ್‌ಆನ್‌ನ ನಾಮದಲ್ಲಿ ಇವೆಲ್ಲ ಗುಣಗಳನ್ನು ಒದಗಿಸಿದೆ ಏಕೆಂದರೆ ಸರ್ವಸಂಪನ್ನ ಗುಣಹೊಂದಿದವನು ಮಾತ್ರ ತನ್ನೆಡೆ ಸೆಳೆಯಬಲ್ಲನು." (ಅಯ್ಯಾಮುಸ್ಸುಲಹ್, ರೂಹಾನಿ ಖಝಾಯೀನ್ ಸಂಪುಟ–14ಮ, ಪುಟ–247)

ಅಲ್ಲಾಹನ ನಾಮವು ಎಲ್ಲ ಗುಣಗಳನ್ನು ತನ್ನೊಳಗೆ ಒಳಗೊಂಡಿದೆ ಎಂಬುದಕ್ಕೆ ಈ ಮಾತು ಸಂಕೇತ ನೀಡುತ್ತದೆ.  ಅವನು ಪರಿಪೂರ್ಣನು. ಯಾವ ದುರ್ಬಲತೆಯೂ ಅವನಲ್ಲಿ ಇಲ್ಲ. ಅಲ್ಲಾಹನೆ ಆದಿ, ಅಲ್ಲಾಹನೇ ಅಂತ್ಯ ಮತ್ತು ಅವನು ಸದಾ ಜೀವಂತನೂ (ಅಲ್‌ಹಯ್ಯು) ಸ್ವತ: ನೆಲೆ ನಿಂತಿರುವವನೂ, ನೆಲೆನಿಲ್ಲಿಸುವವನೂ ಆಗಿದ್ದಾನೆ. ಮಾಲೀಕನು, ಸೃಷ್ಟಿಕರ್ತನು ಮತ್ತು ಸರ್ವಸೃಷ್ಟಿಗಳ ಪರಿಪಾಲಕನಾಗಿದ್ದಾನೆ. ಆದುದರಿಂದ ಅಲ್ಲಾಹನು ಎಲ್ಲಾ ಗುಣಗಳನ್ನು ಹೊಂದಿದ ವ್ಯಕ್ತಿತ್ವಯುಳ್ಳವನಾಗಿದ್ದಾನೆ. ಅಲ್ಲಾಹ್ ದೇವನ ವ್ಯಕ್ತಿಗತ ನಾಮವಾಗಿದೆ. ಯಾವ ಧರ್ಮವು ಈ ಹೆಸರು ಕೊಟ್ಟಿಲ್ಲ. ಕೇವಲ ಇಸ್ಲಾಮಿನಲ್ಲಿ ಈ ಹೆಸರು ಕಾಣಬಹುದಾಗಿದೆ. ಅಲ್ಲಾಹ್ ಎಂಬ ಹೆಸರು ಕೇವಲ ಪವಿತ್ರ ಖುರ್‌ಆನಿನಲ್ಲಿದೆ. ಇನ್ನಾವ ಗ್ರಂಥದಲ್ಲಿಯೂ ಈ ವ್ಯಕ್ತಿಗತ ನಾಮ

ಕಂಡುಬರುವುದಿಲ್ಲ. ಎಲ್ಲೂ ಸಿಗುವುದಿಲ್ಲ. ತನ್ನ ಅಸ್ತಿತ್ವದಲ್ಲಿ ಏಕನು ಆದ ಅವನೇ ಅಲ್ಲಾಹನು, ಅವನ ಸರಿಸಮಾನ ಯಾರೂ ಅಲ್ಲ.

ಖುಲ್ ಹುಅಲ್ಲಾಹು ಅಹದ್ ಹೇಳುವ ಮೂಲಕ ಅಲ್ಲಾಹನು ತನ್ನ ಸತ್ಯ ವಿಶ್ವಾಸಿಗರಿಗೆ ಅಲ್ಲಾಹನು ತನ್ನ ಏಕತ್ವದ ಘೋಷಣೆ ಮಾಡಲು ಹೇಳಿರುತ್ತಾನೆ. ನಾಸ್ತಿಕರು ಭಾವಿಸುವುದೇನೆಂದರೆ ಯಾವ ದೇವನೂ ಇಲ್ಲ. ಈ ಲೋಕವು ತಂತಾನೆ ಸೃಷ್ಟಿಗೊಂಡಿದೆ. ಅದನ್ನು ನಡೆಸುವವನು ಯಾರೂ ಇಲ್ಲ. ಆದರೆ ತನ್ನ ಇಚ್ಛೆ ಅನುಸಾರ ಈ ಲೋಕವನ್ನು ಬಳಕೆ ಮಾಡಬಹುದು. ಬದಲಾವಣೆ ತರಬಹುದು ಎಂದು ಭಾವಿಸುತ್ತಾರೆ. ಅಲ್ಲಾಹನು ಹೇಳುವನು. ನೀವು ಸುಳ್ಳುಗಾರರಾಗಿದ್ದೀರಿ. ಅಲ್ಲಾಹನಿದ್ದಾನೆ. ಅವನು ಎಲ್ಲಾ ನ್ಯೂನತೆಗಳಿಂದ ಮುಕ್ತ, ಪವಿತ್ರ ಅಸ್ತಿತ್ವ ಹೊಂದಿದ್ದಾನೆ ಮತ್ತು ಎಲ್ಲಾ ಗುಣಗಳನ್ನು ಹೊಂದಿದವನಾಗಿದ್ದಾನೆ. ಅವನ ಗುಣಗಳು ಎಲ್ಲ ಸಮಯದಲ್ಲೂ ತನ್ನ ಚಮತ್ಕಾರ ತೋರಿಸುತ್ತದೆ. ಅಲ್ಲಾಹನು ಹೇಳುವನು. ನಿಮ್ಮ ಜೀವನದ ಎಲ್ಲ ಸಾಮಾನುಗಳು ನನ್ನ ಅಧೀನದಲ್ಲಿದೆ. ನೀವು ನನ್ನ ಆಶ್ರಿತರು ಸೂರ್ಯ, ಚಂದ್ರ, ವಾಯು, ಋತುಗಳು, ನೀರು, ಭೂಮಿ ಇವೆಲ್ಲ ನೀವು ಸೃಷ್ಟಿಸುವರೇ? ಇವೆಲ್ಲ ಅಲ್ಲಾಹನು ಸೃಷ್ಟಿಸಿದನು. ನೀವು ಅವನ "ಪರಿಪಾಲಕ" ಗುಣ ಒಂದನ್ನು ತೆಗೆದುಕೊಂಡು ನೋಡಿ. ಅವರ ಪರಿಪಲಾಲಕತ್ವವಿಲ್ಲದೆ ಜೀವಿಸಲು ಸಾಧ್ಯವಿಲ್ಲ. ಅದೇ ರೀತಿ ಅಲ್ಲಾಹನು ಪರಮ ದಯವಂತಿಕೆಯ ಗುಣ ಹೊಂದಿದ್ದಾನೆ. ಈ ಗುಣವಿದ್ದಾಗಲೇ ಮನುಷ್ಯನು ಅಧರ್ಮಿಯಾದರೂ ಅವನಿಗೆ ಜೀವಿಸುವ ಎಲ್ಲ ವಸ್ತುಗಳನ್ನು ಒದಗಿಸಿದನು. ಅಲ್ಲದೇ ಜೀವನ ನೆಲೆ ನಿಲ್ಲಲು ಕೋಟ್ಯಾನು ವರ್ಷಗಳ ಹಿಂದೆಯೇ ವಸ್ತುಗಳನ್ನು ದಯಪಾಲಿಸಿದನು. ಈಗ ನೀರನ್ನೇ ತೆಗೆದುಕೊಳ್ಳಿ. ನೀರು ಮುಗಿದರೆ ಜೀವನ ಮುಗಿದಂತೆಯೇ ಸರಿ. ಇವರುಗಳು ನೀರು ತರಬಲ್ಲರೇ, ಅಲ್ಲಾಹನು ಹೇಳಿದನು

**ಖುಲ್ ಅರಯ್‌ತುಮ್ ಇನ್ ಅಸ್‌ಬಹ ಮಾಉಕುಮ್ ಗೌರನ್ ಫಮನ್ ಯತೀಕುಮ್ ಬಿಮಾಯಿನ್ ಮಯೀನ್** (ಅಲ್‌ಕುಲ್ಕ್: 31)

ಹೇಳು, ಯೋಚಿಸಿ ನೋಡಿರಿ. ನಿಮ್ಮ ನೀರು (ಭೂಮಿಯ ತಳಕ್ಕೆ) ಇಂಗಿ ಹೋಗಿದೆ. ಹರಿಯುವ ಶುದ್ಧ ಜಲವನ್ನು ನಿಮಗೆ ಒದಗಿಸುವವರು ಯಾರು? ಅದರಿಂದ ಆಧ್ಯಾತ್ಮಿಕ ಜಲದ ಅರ್ಥವೂ ಕಲ್ಪಿಸಬಹುದಾಗಿದೆ ಮತ್ತು ಇಹ ಜಲದ ಅರ್ಥವು ಕಲ್ಪಿಸಬಹುದಾಗಿದೆ. ಆಧ್ಯಾತ್ಮಿಕ ನೆಲೆಯಿಂದ ನಾವು ನೋಡಿದರೆ ಅಲ್ಲಾಹನನ್ನು ಮರೆತು ಅವರ ಆಧ್ಯಾತ್ಮಿಕ ಜಲವು ಕೊನೆಗೊಂಡಿರುತ್ತದೆ. ಐಹಿಕ ಜಲವು ಕೊನೆಗಾಣಬಹುದೆಂದು ಅಲ್ಲಾಹನು ನುಡಿಯುತ್ತಾನೆ. ನನ್ನ ದಯವಂತಿಕೆಯ ಗುಣ ಆಗಿದೆ. ನನ್ನ ಘೋಷಣೆಯ ಗುಣವಾಗಿದೆ. ಅದರ ಫಲವಾಗಿ ನೀವು ಧಿಕ್ಕಾರಿಗಳಾದರೂ, ತನ್ನ ಸಹಭಾಗಿಗಳಾಗಿ ಮಾಡಿದರೂ, ತನ್ನ ಅಸ್ತಿತ್ವದ ಮೇಲೆ ವಿಶ್ವಾಸವಿಲ್ಲದವರಾದರೂ ನಿಮಗೆ ಎಲ್ಲವು ಒದಗಿಸುತ್ತಿದ್ದೇವೆ. ಅನಾವೃಷ್ಟಿ ಉಂಟಾದರೆ ಬೊಬ್ಬೆಯಿಡುವಿರಿ. ಆದರೆ ವಿಶ್ವಾಸಯುಳ್ಳವರು ತಮ್ಮ ದೇವನ ಶಕ್ತಿಯನ್ನು ಕಾಣುತ್ತಾರೆ. ಹಲವು ದೃಷ್ಟಾಂತಗಳಿವೆ. ಎಷ್ಟೋ ಸಲ ಅದನ್ನು ವಿವರಿಸಿಯೂ ಆಗಿದೆ. ಮಳೆಯಿಲ್ಲ. ಬರ ಪರಿಸ್ಥಿತಿ ಇದೆ. ಮತ್ತೆ ಮಳೆಯ ಅವಶ್ಯಕತೆ ಉಂಟಾಯಿತು. ನಮ್ಮ ಮತಪ್ರಚಾರಕರು (missionery) ಬರೆದರು. ನಾನೂ ಪಾರ್ಥಿಸಿದೆ. ಅವರಿಗೂ ಹೇಳೀದೆ. ಜನರನ್ನು ಒಟ್ಟುಗೂಡಿಸಿ. "ನಮಾಝ್ ಇಸ್ತಸ್‌ದಾಅ" ನಿರ್ವಹಿಸಿರಿ. ಆಗ ಜನರು ಈ ದೃಶ್ಯಗಳನ್ನು ನೋಡಿದರು. "ಅಲ್ಲಾಹನು ಮಳೆ ಬರುವಂತೆ ದಯಪಾಲಿಸಿದನು. ಅದನ್ನು ಕಂಡು ಜನರ ವಿಶ್ವಾಸ ಹೆಚ್ಚಾಯಿತು. ಅಲ್ಲಾಹನ ಅಸ್ತಿತ್ವದ ಮೇಲೆ ವಿಶ್ವಾಸ ಬಂದಿತು. ಅಲ್ಲಾಹನು ಮತ್ತೆ ನುಡಿಯುವನು. ಅವನು ನಿರಪೇಕ್ಷನು. ಅವನು ಸ್ವತ: ನೆಲೆ ನಿಂತವನು. ಅವನಿಗೆ ಯಾರ ಸಹಕಾರದ ಅಗತ್ಯವಿಲ್ಲ. ಅಗತ್ಯವೇನಾದರೂ ಇದ್ದರೆ ಅವನ ದಾಸರಿಗೆ ಇದೆ. ಪವಿತ್ರ ಖುರ್‌ಆನನ ಒಂದು ಸ್ಥಳದಲ್ಲಿ ಅಲ್ಲಾಹನು ಹೇಳಿದನು.

**ಖುಲ್ ಮನ್ ರಬ್ಬಿಸ್ಸಮಾವಾತಿ ವಲ್‌ಅರ್‌ಝ್ ಖುಲಿಲ್ಲಾಹ್ ಖುಲ್ ಅಫತ್ತಖಝ್‌ತುಮ್ಮಿನ್ ದೂನಿಹೀ ಔಲಿಯಾಅ ಲಾಯುವ್‌ಲಿಕೂನ ಲಿಅನ್‌ಫುಸಿಹಿಮ್ ನಫ್‌ಅನ್ ವ ಝುರ್ರನ್ ಖುಲ್ ಹಲ್ ಯಸ್ತವಿಲ್ ಅಮಾ ವಲ್‌ಬಸೀರು ಅಮ್‌ಹಲ್ ತಸ್ತವಿಝ್ಝುಲುಮಾತು ವನ್ನೂರು ಅಮ್ ಜಲು ಲಿಲ್ಲಾಹಿ ಶುರಕಾಅ ಖಲಖೂ ಕಖಲ್‌ಖಿಹೀ ಫತಶಾಬಹಲ್‌ಖಲ್‌ಖು ಅಲೈಹಿಮ್ ಖುಲಿಲ್ಲಾಹು ಖಾಲಿಖು ಕುಲ್ಲಿ ಶೈಯಿನ್ ವಹುವಲ್ ವಾಹಿದುಲ್ ಖಹ್ಹಾರ್. (ಅರ್ರಅ್‌ದ್: 17)**

"ಕೇಳು: 'ಆಕಾಶಗಳ ಮತ್ತು ಭೂಮಿಯ ಪ್ರಭು ಯಾರು?' ಹೇಳು: 'ಅಲ್ಲಾಹನೇ'. 'ಹಾಗಿರುವಾಗ ಅವನ ಹೊರತು, ತಮಗೆಯೇ ಗುಣವನ್ನಾಗಲಿ ದೋಷನವನಾಗಲಿ, ಮಾಡಲಶಕ್ಯರಾದವರನ್ನು ನೀವು ನಿಮ್ಮ ರಕ್ಷಕರನ್ನಾಗಿಸಿದ್ದೀರಾ?' (ಎಂದು ನೀನು ಅವರೊಡನೆ) ಕೇಳು: 'ಕುರುಡನೂ ದೃಷ್ಟಿಯುಳ್ಳವನೂ ಸಮಾನರೇ? ಅಥವಾ ಅಂಧಕಾರ ಮತ್ತು ಪ್ರಕಾಶ ಸಮಾನವೇ? ಅಥವಾ ಅಲ್ಲಾಹನ ಸೃಷ್ಟಿಯಂತಹವುಗಳನ್ನು ಸೃಷ್ಟಿಸಿದವರನ್ನು ಅವರು ಅವನಿಗೆ ಸರಿಸಾಟಿ ಮಾಡಿರುವರೇ? ಹಾಗೆ ಆ ಸೃಷ್ಟಿಗಳು ಅವರಿಗೆ ಸರಿಸಮಾನವಾಗಿ ತೋರಿ ಬಂದುವೇ? (ಎಂದೂ ಅವರೊಡನೆ) ಕೇಳು. ಹೇಳು: 'ಸರ್ವವಸ್ತುಗಳ ಸೃಷ್ಟಿಕರ್ತನು ಅಲ್ಲಾಹನೆ ಆಗಿದ್ದಾನೆ. ಅವನು ಏಕನು, ಪರಮಾಧಿಕಾರ ಹೊಂದಿದವನು.' ಮತ್ತೆ ಅಲ್ಲಾಹನು ನುಡಿದನು.

**ಖುಲ್ ಅರಯ್‌ತುಮ್ ಇನ್‌ಜಅಲಲ್ಲಾಹು ಅಲೈಕುಮುಲ್ಲೈಲ ಸರ್‌ಮದನ್ ಇಲಾ ಯೌಮಿಲ್‌ಖಿಯಾಮತಿ ಮನ್ ಇಲಾಹುನ್ ಗೌರುಲ್ಲಾಹಿ ಯತೀಕುಮ್ ಬಿಝಿಯಾಇನ್ ಅಫಲಾ ತಸ್‌ಮೂನ್. (ಅಲ್‌ಖಸಸ್: 72)**

ಹೇಳು: 'ನೀವು ಯೋಚಿಸಿ ನೋಡಿದ್ದೀರಾ? ಪುನರುತ್ಥಾನ ದಿನದವರೆಗೆ ಅಲ್ಲಾಹನು ನಿಮ್ಮ ಮೇಲೆ ಇರುಳನ್ನೇ ಮುಂದುವರೆಸಿದರೆ ಅಲ್ಲಾಹನ ಹೊರತು ನಿಮಗೆ ಬೆಳಕನ್ನು ಒದಗಿಸುವ ಬೇರೆ ಯಾವ ದೇವನಿದ್ದಾನೆ? ಏನು ನೀವು ಆಲಿಸುವುದಿಲ್ಲವೇ?' ಮತ್ತೆ ಅಲ್ಲಾಹನು ಹೇಳುತ್ತಾನೆ.

**ಖುಲ್ ಅರಯ್‌ತುಮ್ ಇನ್‌ಜಅಲಲ್ಲಾಹು ಅಲೈಕುಮುಲ್ಲೈಲ ಸರ್‌ಮದನ್ ಇಲಾ ಯೌಮಿಲ್‌ಖಿಯಾಮತಿ ಮನ್ ಇಲಾಹುನ್ ಗೌರುಲ್ಲಾಹಿ ಯತೀಕುಮ್ ಬಿಲ್ಲೈಲಿನ್ ತಸ್‌ಕುನೂನ ಫೀಹಿ ಅಫಲಾ ತುಬ್‌ಸಿರೂನ್. (ಅಲ್‌ಖಸಸ್:73)**

ಹೇಳು: 'ನೀವು ಯೋಚಿಸಿ ನೋಡಿದ್ದೀರಾ? ಪುನರುತ್ಥಾನ ದಿದನವರೆಗೆ ಅಲ್ಲಾಹನು ನಿಮ್ಮ ಮೇಲೆ ಹಗಲನ್ನು ಮುಂದುವರೆಸಿದರೆ ಅಲ್ಲಾಹನ ಹೊರತು ನಿಮಗೆ ವಿಶ್ರಾಂತಿಯನ್ನು ಪಡೆಯಲು ಅನುಕೂಲವಾದ ರಾತ್ರಿಯನ್ನು ಒದಗಿಸುವ ಬೇರೆ ಯಾವ ದೇವನಿದ್ದಾನೆ? ನೀವು ಕಾಣುವುದಿಲ್ಲವೇ?' ಮತ್ತೆ ಮುಂದುವರೆದು ಹೇಳಿದನು.

**ವಮಿನ್ ರಹ್‌ಮತಿಹಿ ಜಅಲ ಲಕುಮುಲ್ ಲೈಲ ವನ್ನಹಾರ ಲಿತಸ್‌ಕುನೂ ಫೀಹಿ ವಲಿತಬ್‌ತಗೂ ಮಿನ್ ಫಝ್‌ಲಿಹಿ ವಲಅಲ್ಲಕುಮ್ ತಶ್ಕುರೂನ್. (ಅಲ್‌ಖಸಸ್: 74)**

ನಿಮ್ಮ ವಿಶ್ರಾಂತಿಗೋಸ್ಕರವೂ ನೀವು ಅಲ್ಲಾಹನ ಅನುಗ್ರಹಗಳನ್ನು ಪಡೆಯಲಿಕ್ಕೋಸ್ಕರವು ಅವನಿಗೆ ನೀವು ಕೃತಜ್ಞರಾಗಲಿಕ್ಕೋಸ್ಕರವೂ ಅವನು (ಅಲ್ಲಾಹನು) ತನ್ನ ಕೃಪೆಯಿಂದ ರಾತ್ರಿಯನ್ನೂ ಹಗಲನ್ನೂ ನಿಮಗೋಸ್ಕರ ಸೃಷ್ಟಿಸಿದ್ದಾನೆ. ಅಂದರೆ ನೀವು ಕಾರ್ಯನಿರತರಾಗಿರಿ. ಐಹಿಕ ಸಂಪತ್ತು ಗಳಿಸಿರಿ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಿರಿ. ಆದರೆ ಜೊತೆಯಲ್ಲಿ ಇನ್ನೊಂದು ಸ್ಥಳದಲ್ಲಿ ಹೀಗೂ ನುಡಿದಿರುವನು. ಅಲ್ಲಾಹನನ್ನು ಮರೆಯದಿರಿ. ಅವನ ಸ್ಮರಣೆಯನ್ನು ಮರೆಯದಿರಿ. ಹಗಲಿನಲ್ಲಿ ನೀವು ಕಾರ್ಯನಿರತರಾದಾಗಲೂ ಅಲ್ಲಾಹನನ್ನು ಸ್ಮರಿಸಿರಿ.

ಮತ್ತು ಅಲ್ಲಾಹನು ಸ್ವಯಂಪೂರ್ಣನು ಎಂಬುದರ ಕುರಿತು ಹೇಳಿದನು.

**ಲಹೂ ಮಾಫಿಸ್ಸಮಾವಾತಿ ವಮಾ ಫಿಲ್ ಅರ್‌ಝಿ ವ ಇನ್ನಲ್ಲಾಹ ಲಹುವಲ್ ಗನಿಯ್ಯುಲ್ ಹಮೀದ್. (ಅಲ್‌ಹಜ್ಜ: 65)**

ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ನಿಶ್ಚಿತವಾಗಿಯೂ ಅಲ್ಲಾಹನು ಸ್ವಯಂಪೂರ್ಣನೂ ಸ್ತುತ್ಯರ್ಹನೂ ಆಗಿದ್ದಾನೆ. ಮತ್ತೆ ನುಡಿದನು.

**ಅಲಮ್ ತರ ಅನ್ನಲ್ಲಾಹ ಸಖ್ಖರಲಕುಮ್ ಮಾ ಫಿಲ್‌ಅರ್‌ಝಿ ವಲ್‌ಫುಲ್‌ಕ ತಜ್‌ರೀ ಫಿಲ್ ಬಹ್‌ರಿ ಬಿಅಮ್‌ರಿಹೀ ವಯಮ್‌ಸಿಕುಸ್ಸಮಾಇ ಅನ್ ತಖ ಅಲಲ್ ಅರ್‌ಝಿ ಇಲ್ಲ ಬಿಇಝ್‌ನಿಹೀ ಇನ್ನಲ್ಲಾಹ ಬಿನ್ನಾಸಿ ಲರೂಫುನ್ ರಹೀಮ್** (ಅಲ್‌ಹಜ್ಜ್: 66)

ನೀನು ಕಂಡಿಲ್ಲವೇ? ಅಲ್ಲಾಹನು ಭೂಮಿಯಲ್ಲಿರುವ ಎಲ್ಲವನ್ನೂ, ಅವನ ಆಜ್ಞಾನುಸಾರ ಸಮುದ್ರದಲ್ಲಿ ಸಂಚರಿಸುವ ಹಡಗುಗಳನ್ನು ನಿಮಗೆ ಅಧೀನಪಡಿಸಿಕೊಟ್ಟಿರುವನು. ಅವನ ಆಜ್ಞೆಯ ಹೊರತು ಆಕಾಶ ಕಾಯಗಳು ಭೂಮಿಯ ಮೇಲೆ ಬೀಳದಂತೆ ಅವನು ತಡೆದಿಟ್ಟಿರುವನು. ದಿಟವಾಗಿಯೂ ಅಲ್ಲಾಹನು ಮನುಷ್ಯರ ಮೇಲೆ ಅತಿ ಹೆಚ್ಚು ದಯೆಯುಳ್ಳವನೂ, ಕಾರುಣ್ಯನಿಧಿಯೂ ಆಗಿದ್ದಾನೆ.

ಇದು ಅಲ್ಲಾಹನ ದಯೆ ಮತ್ತು ಕಾರುಣ್ಯವೇ ಆಗಿದೆ. ಅವನು ದೈವಿಕ ಆಪತ್ತುಗಳಿಂದ ರಕ್ಷಿಸುತ್ತಾನೆ. ಇಲ್ಲವಾದರೆ ಮನುಷ್ಯನು ತೋರುತ್ತಿರುವ ಚಟುವಟಿಕೆಗಳು ವಿಶೇಷವಾಗಿ ಈ ಕಾಲದ ಧಿಕ್ಕಾರಿಯುತ ನಡವಳಿಕೆಗಳು, ಅಲ್ಲಾಹನನ್ನು ಮರೆತು ಬಿಟ್ಟಿರುವವರು. ಒಂದು ಅಲ್ಲಾಹನ ಸಹಭಾಗಿಗಳಾಗಿ ಮಾಡಿರುವರು ಎರಡನೆಯದಾಗಿ ಅಲ್ಲಾಹನ ಅಸ್ತಿತ್ವದ ಮೇಲೆಯೂ ವಿಶ್ವಾಸವಿಲ್ಲ. ಅಲ್ಲಾಹನು ಬಯಸಿದರೆ ತಕ್ಷಣದಿಂದ ಹಿಡಿಯಬಹುದಾಗಿದೆ. ಆದರೆ ಅಲ್ಲಾಹನು ಅವಕಾಶ ನೀಡುತ್ತಾನೆ. ಅವನಿಗೆ ಅವಸರವಿಲ್ಲ. ಅವರು ಹೇಳುತ್ತಾರೆ. ಪ್ರಶ್ನೆ ಮಾಡುತ್ತಾರೆ. ಅಲ್ಲಾಹನು ಏಕೆ ಹಿಡಿಯುವುದಿಲ್ಲ? ಅಲ್ಲಾಹನು ಹೇಳುವನು. ನಾನು ಅವಕಾಶಗಳನ್ನು ನೀಡುತ್ತೇನೆ. ನಾನು ಹಿಡಿಯಬಯಸುವುದಾದರೆ ಹಿಡಿಯಬಹುದು. ಲೋಕವನ್ನು ನಾಶ ಮಾಡಬಹುದು. ಆದರೆ ಅವನ ರಹ್ಮಾನಿಯತ್ (ದಯವಂತಿಕೆಯ ಗುಣ) ಗುಣಗಳಿಂದಾಗಿ ಅವನು ಅವಕಾಶ ನೀಡುವನು. ಅವಸರಪಡುವುದಿಲ್ಲ. ಏಕೆಂದರೆ ಅವನ ಸರ್ವ ಶಕ್ತಿಗಳನ್ನು ಹೊಂದಿದವನಾಗಿದ್ದಾನೆ. ಅವನು ಹಿಡಿಯ ಬಯಸಿದಾಗ ಹಿಡಿಯಬಹುದಾಗಿದೆ.

ಅವನಿಗೆ ತಡೆಯುವವರು ಯಾರೂ ಇಲ್ಲ. ಅವನ ಹಿಡಿತದಿಂದ ಯಾರಿಗೂ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಅಲ್ಲಾಹನು ಹೇಳುವನು. ನೀವು ಯಾವ ನೆಲೆಯಲ್ಲಿ ನೋಡಿದರೂ ನನ್ನ ಅಧೀನದಲ್ಲಿದ್ದೀರಿ. ನಿಮಗೆ ನನ್ನ ಅಗತ್ಯವಿದೆ. ಇದು ನನ್ನ ದಯವಂತಿಕೆಯ ಗುಣವಾಗಿದೆ. ಘೋಷಣೆಯ ಗುಣವಾಗಿದೆ. ಅದು ನಿಮಗೆ ಸ್ಪಷ್ಟಪಡಿಸ ಬಯಸುತ್ತೇವೆ. ನಿಮ್ಮಲ್ಲಿ ಯಾರು ಯಾರಿದ್ದಾರೆ. ನಾನು ಬಯಸಿದರೆ ಸೂರ್ಯನ ಬೆಳಕು ತರುವೆನು ಎಂದು ಹೇಳುವರು ಅಥವಾ ಇರುಳನ್ನು ಹಗಲಿನಲ್ಲಿ ಮತ್ತು ಹಗಲನ್ನು ಇರುಳಿನಲ್ಲಿ ಪರಿವರ್ತಿಸುವೆನು ಎಂದು ಹೇಳುವರು ಅಥವಾ ಬಿರುಗಾಳಿಯನ್ನು ನಿಲ್ಲಿಸುವೆನು ಎಂದು ಹೇಳುವರು. ಜಪಾನ್, ಅಮೇರಿಕಾ, ಲೋಕದ ಎಲ್ಲ ಸಂಪನ್ಮೂಲಗಳನ್ನು ಹೊಂದಿದರೂ ನಾವು ಅಭಿವೃದ್ಧಿಶೀಲರು ಎಂದು ಹೇಳಿಕೊಂಡವರು. ಅವರುಗಳು ಬಯಸಿದರೂ ಬಿರುಗಾಳಿಯನ್ನು ನಿಲ್ಲಿಸಲು ಸಾಧ್ಯವಿಲ್ಲ. ಹೌದು ಅಲ್ಲಾಹನು ಬಯಸಿದರೆ ಮಾತ್ರ ಚಂಡಮಾರುತಗಳ ದಿಕ್ಕನ್ನು ಬದಲಾಯಿಸಬಹುದಾಗಿದೆ.

ಫಿಜಿಯಲ್ಲಿ ನಾವು ಪ್ರವಾಸಕ್ಕೆ ಹೋದಾಗ ಅಲ್ಲಿ ಒಂದು ದಿನ ಮುಂಜಾನೆ ಫಜ್ರ್ ನಮಾಝಿಗಿಂತ ಮುಂಚೆ ಪಾಕಿಸ್ತಾನದಿಂದ ನಾಝಿರ್ ಸಾಹಿಬ್ ಆಲಾ ಅವರ ಫೋನ್ ಬಂತು. ಹೇಳಿದರು. ಬಿ.ಬಿ.ಸಿ ಯಲ್ಲಿ ಸುದ್ದಿ ಬರುತ್ತಿದೆ. ತೀವ್ರತರ ಸುನಾಮಿ ಫಿಜಿಗೆ ಅಪ್ಪಳಿಸಲಿದೆ. ಎಲ್ಲಾ ಕಡೆಯಿಂದ ಭಯಭೀತ ದೃಶ್ಯ ಕಂಡು ಬರುತಿತ್ತು. ಹಲವು ಸಂಬಧಿಕರ ಫೋನ್‌ಗಳು ಬರತೊಡಗಿದವು. ನಮಾಝಿನ ಸಮಯವಾಗಿತ್ತು. ನಾವು ತಮ್ಮ ವಸತಿ ನಿಲಯದಿಂದ ಮಸೀದಿಗೆ ಹೊರಟಿದ್ದೆವು. ಮಸೀದಿಯಲ್ಲಿ ನಮಾಝಿಗಿಂತ ಮುಂಚೆ ನಾನು ನಮಾಝ್ ಮಾಡಲು ಬಂದರೊಡನೆ ಹೇಳಿದೆನು. ನಾವು ಈ ಚಂಡಮಾರುತದ ದಿಕ್ಕು ಬದಲಾಯಿಸಲು ತನ್ನ ಸಾಷ್ಟಾಂಗ ಅವಸ್ಥೆಯಲ್ಲಿ ಪ್ರಾರ್ಥಿಸುವೆವು. ನಾನು ಪ್ರಾರ್ಥಿಸುವೆನು. ನೀವೂ ತನ್ನ ಜೊತೆಗೂಡಿರಿ ಎಂದು ಹೇಳಿ ದುಆ ಮಾಡಿದರು. ಅಲ್ಲಾಹನು ಆಗಲೇ ನೆಮ್ಮದಿಯ ಸಾಮಗ್ರಿಗಳನ್ನು ಒದಗಿಸಿದನು. ಮರಳಿ ಬಂದಾಗ ತಿಳಿಯಿತು. ಚಂಡಮಾರುತ ಬೇರೆಡೆಗೆ ತಿರುಗಿದೆ. ಇದಾಗಿದೆ ಅಲ್ಲಾಹನ ಕಾರ್ಯಕ್ಷಮತೆ. ಲೋಕದ ಯಾವ ಶಕ್ತಿಯೂ ಚಂಡಮಾರುತ ತಡೆಯುವ ಶಕ್ತಿ ಹೊಂದಿರುವುದಿಲ್ಲ. ಆದರೆ ಅಲ್ಲಾಹನು ಬಯಸಿದಾಗಲೆಲ್ಲ ತನ್ನ ದಾಸರ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ನಿಷ್ಠೆಯಿಂದ ಅವನನ್ನು ನಂಬುವವರಿಗೆ ಅವನ ಆರಾಧನೆ ಮಾಡುವವರ ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಆ ಪ್ರಾರ್ಥನೆಗಳ ಫಲವಾಗಿ ಮಳೆಯು ದಯಪಾಲಿಸುತ್ತಾನೆ. ಚಂಡಮಾರುತಗಳ ದಿಕ್ಕು ಬದಲಿಸುತ್ತಾನೆ. ಬಾಕಿ ಎಲ್ಲಾ ಆಪತ್ತುಗಳಿಂದಲೂ ರಕ್ಷಿಸುತ್ತಾನೆ. ಆ ಮೂಲಕ ಅಲ್ಲಾಹು ಹೇಳುವನು. ಇದೋ ಇದು ನಾನಾಗಿದ್ದೇನೆ. ಇದು ನನ್ನ ಅಸ್ತಿತ್ವ ಆಗಿದೆ. ನನ್ನ ಅಸ್ತಿತ್ವದ ಗುರುತಾಗಿದೆ. ಆದ್ದರಿಂದ ಅಲ್ಲಾಹನು ರಹ್ಮಾನ್ ಆಗಿದ್ದಾನೆ. ರಹೀಮ್ ಆಗಿದ್ದಾನೆ. ಅನೇಕ ಗುಣಗಳ ಮಾಲಿಕನಾಗಿದ್ದಾನೆ. ಅವನು ತನ್ನ ವೈಭವ ತೋರಿಸುತ್ತಾನೆ. ಆದರೆ ನಾಸ್ತಿಕರಿಗೆ ಮತ್ತು ಬಹುದೇವಾರಾಧಕರಿಗೆ ಅದು ಅರ್ಥವಾಗುವುದಿಲ್ಲ. ಆದುದರಿಂದ ಅಲ್ಲಹನು ಹಝ್ರತ್ ರಸೂಲುಲ್ಲಾಹ್[ಸ] ಅವರ ಮೂಲಕ ಸತ್ಯವಿಶ್ವಾಸಿಗರಿಗೆ ಹೇಳಿದನು. ಈ ಬಹುದೇವಾರಾಧಕತೆಯ ಕಾಲದಲ್ಲಿ ಈ ನಾಸ್ತಿಕತೆ ಕಾಲದಲ್ಲಿ ಅಲ್ಲಾಹನ ವ್ಯಕ್ತಿತ್ವ ಮತ್ತು ಅವನ ಅಸ್ತಿತ್ವ ಕುರಿತು ಲೋಕಕ್ಕೆ ಎಚ್ಚರಿಸಿರಿ. ಈಗ ಈ ಕೆಲಸ ಮುಹಮ್ಮದಿ ಮಸೀಹರ ಶಿಷ್ಯರ ಕೆಲಸವಾಗಿದೆ. ಈ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಪ್ರಯತ್ನ ಮಾಡಿರಿ.

ಮುಂದಿನ ಅಧ್ಯಾಯ ಅಲ್-ಫಲಖ್‌ಯಿದೆ. ಹಝುರತ್ ಮಸೀಹ್ ಮೌಊದ್[ಅ] ಒಂದು ಸ್ಥಳದಲ್ಲಿ ಆ ಕುರಿತು ಹೇಳಿದರು.

**ಓ ಮುಸ್ಲಿಮರೇ!** ನೀವು ಮನಪೂರ್ವಕವಾಗಿ ಅಲ್ಲಾಹನನ್ನು ಮತ್ತು ಅವನ ಪವಿತ್ರ ಪ್ರವಾದಿ[ಸ] ಅವರ ಮೇಲೆ ವಿಶ್ವಾಸ ಹೊಂದಿದವರಾದರೆ ಮತ್ತು ದೈವಿಕ ಸಹಕಾರ ಬಯಸುವುದಾದರೆ ನಿಶ್ಚಯವಾಗಿಯೂ ತಿಳಿದುಕೊಳ್ಳಿರಿ. ಅವನ ಸಹಾಯದ ಸಮಯವು ಬಂದಿರುತ್ತದೆ ಮತ್ತು ಕಾರ್ಯವು ಮಾನವನಿಂದಾಗುವುದಿಲ್ಲ ಅಥವಾ ಯಾವುದೇ ಮಾನವ ಯೋಜನೆಯು ಇದರ ಅಡಿಪಾಯ ಹಾಕಿಲ್ಲ. ಬದಲು ಇದು ವಾಗ್ದತ್ತ ಪ್ರಭಾತೋದಯವಾಗಿದೆ. ಹೇಳಿದರು. ಈ ಪ್ರಭಾತೋದಯವು ಆ ಹಿಂದಿನ ಗ್ರಂಥಗಳಲ್ಲಿ ನೀಡಿದ ಭವಿಷ್ಯವಾಣಿಗಳ ಸಾಕ್ಷ್ಯವಾಗಿದೆ." ಅಲ್ಲಾಹನು ಹೇಳಿದನು. ಅಲ್ಲಾಹನು ತಕ್ಕುದಾದ ಸಮಯದಲ್ಲಿ ನಿಮಗೆ ನೆನಪಿಸಿದನು." (ಇಝಾಲಾ ಔಹಾಮ್, ರೂಹಾನಿ ಖಝಾಯೀನ್, ಸಂಪುಟ-3, ಪುಟ-104)

ಅಗತ್ಯಕ್ಕನುಗುಣವಾಗಿ ಅಲ್ಲಾಹನ ಸಹಾಯ ಬಂದೊದಗಿದೆ. ಅವನು ಸಹಾಯ ಹಸ್ತ ತೋರಿದನು. ತನ್ನ ಧರ್ಮೋನ್ನತಿಗಾಗಿ ಒಬ್ಬನನ್ನು ಕಳುಹಿಸಿದನು. ಆದ್ದರಿಂದ ಆ ಸ್ತಭಾತೋದಯವಾಯಿತು. ಇಮಾಮ್ ರಾಘಿಬ್ ತನ್ನ ಮುಫರಾದಾತ್ ಗ್ರಂಥದಲ್ಲಿ ಬರೆದಿರುವವರು. ಅದು ಅವರ ಪುರಾತನ ನಿಘಂಟಾಗಿದೆ. ಅದರಲ್ಲಿ ಫಲಖ್ ಎಂಬುದಕ್ಕೆ ಒಂದು ಅರ್ಥ "ಪ್ರಭಾತ" ಎಂದಾಗಿದೆ. (ಮುಫ್‌ರದಾತ್ ಇಮಾಮ್‌ರಾಗಿಬ್)

ಆದುದರಿಂದ ಹಝ್ರತ್ ಮಸೀಹ್ ಮೌಊದ್[ಅ] ರವರ ಆಗಮನದಿಂದ ಪ್ರಭಾತೋದಯ ಆಗಿದೆ. ಆದರೆ ಈ ಕಾಲದ ದಜ್ಜಾಲಿ ಶಕ್ತಿಗಳಿಂದ ರಕ್ಷಣೆ ಪಡೆಯಲು, ತನ್ನ ಶರಣ ಪಡೆಯಲು ಅಲ್ಲಾಹನು ಒಂದು ಪ್ರಾರ್ಥನೆಯು ಕಲಿಸಿಕೊಟ್ಟಿದ್ದಾನೆ. ಈ ಪ್ರಭಾತೋದಯವಂತೂ ಆಯಿತು. ಆದರೆ ದಜ್ಜಾಲಿ (ದುಷ್ಟ ಶಕ್ತಿಗಳು) ಪ್ರಯತ್ನಗಳು ಮುಂದುವರೆದಿವೆ. ನಿಮಗೆ ಈ ಪ್ರಭಾತದಿಂದ, ಈ ಪ್ರಭಾತದ ಬೆಳಕಿನಿಂದ ಸೂರ್ಯದ ಅನುಗ್ರಹಿತದಿಂದ ನಿಮ್ಮನ್ನು ತಡೆಯುವ ಪ್ರಯತ್ನ ಮಾಡುವುದು. ಆದರೆ ಇವೆಲ್ಲ ಪ್ರಯತ್ನಗಳ ನಡುವೆಯೂ ಇನ್‌ಶಾಅಲ್ಲಾಹ್ ಈ ಪ್ರಭಾತದಿಂದ ಉಂಟಾದ ದಿನವು ಹೆಚ್ಚೆಚ್ಚು ಬೆಳಕು ಪಡೆಯುವುದು.

ಹಝ್ರತ್ ರಸೂಲುಲ್ಲಹ್[ಸ] ಸಿರಾಜೆ ಮುನೀರ್ ಆಗಿರುವವರು. ಅವರ ಪ್ರಕಾಶ ಲೋಕದಲ್ಲೆಲ್ಲ ಬೀರುವುದು. ಆದರೆ ನಾನು ಹೇಳಿದಂತೆ ದುಷ್ಟಶಕ್ತಿಗಳು ಸುಮ್ಮನೆ ಕೂರಲಾರವು. ಅವು ಇನ್ನೂ ಹೆಚ್ಚಿನ ಬಲದಿಂದ ಆಕ್ರಮಣ ಮಾಡುವರು. ಇತ್ತೀಚೆಗೆ ನಾವು ನೋಡುತ್ತಿದ್ದೇವೆ. ಬಹು ಆವೇಶಭರಿತರಾಗಿ ಯಾವುದೇ ನೆಪದಿಂದ ಈ ಜನರು ಇಸ್ಲಾಮ್ ಮತ್ತು ಹಝ್ರತ್ ರಸೂಲುಲ್ಲಾಹ್[ಸ] ರವರ ಆಗಮನದಿಂದ ಪ್ರಭಾತೋದಯ ಆಗಿದೆ. ಆದರೆ ಈ ಕಾಲದ ದಜ್ಜಾಲಿ ಶಕ್ತಿಗಳಿಂದ ರಕ್ಷಣೆ ಪಡೆಯಲು, ತನ್ನ ಶರಣ ಪಡೆಯಲು ಅಲ್ಲಾಹನು ಒಂದು ಪ್ರಾರ್ಥನೆಯು ಕಲಿಸಿಕೊಟ್ಟಿದ್ದಾನೆ. ಈ ಪ್ರಭಾತೋದಯವಂತೂ ಆಯಿತು. ಆದರೆ ದಜ್ಜಾಲಿ (ದುಷ್ಟ ಶಕ್ತಿಗಳು) ಪ್ರಯತ್ನಗಳು ಮುಂದುವರೆದಿವೆ. ನಿಮಗೆ ಈ ಪ್ರಭಾತದಿಂದ, ಈ ಪ್ರಭಾತದ ಬೆಳಕಿನಿಂದ ಸೂರ್ಯನ ಅನುಗ್ರಹದಿಂದ ನಿಮ್ಮನ್ನು ತಡೆಯುವ ಪ್ರಯತ್ನ ಮಾಡುವುದು. ಆದರೆ ಇವೆಲ್ಲ ಪ್ರಯತ್ನಗಳ ನಡುವೆಯೂ ಇನ್‌ಶಾಲ್ಲಾಹ್ ಈ ಪ್ರಭಾತದಿಂದ ಉಂಟಾದ ದಿನವು ಹೆಚ್ಚೆಚ್ಚು ಬೆಳಕು ಪಡೆಯುವುದು.

ಹಝುರತ್ ರಸೂಲುಲ್ಲಾಹ್[ಸ] ಸಿರಾಜೆ ಮುನೀರ್ ಆಗಿರುವವರು. ಅವರ ಪ್ರಕಾಶ ಲೋಕದಲ್ಲೆಲ್ಲ ಬೀರುವುದು. ಆದರೆ ನಾನು ಹೇಳಿದಂತೆ ದುಷ್ಟಶಕ್ತಿಗಳು ಸುಮ್ಮನೆ ಕೂರಲಾರವು. ಅವು ಇನ್ನೂ ಹೆಚ್ಚಿನ ಬಲದಿಂದ ಆಕ್ರಮಣ ಮಾಡುವರು. ಇತ್ತೀಚೆಗೆ ನಾವು ನೋಡುತ್ತಿದ್ದೇವೆ. ಬಹು ಆವೇಶಭರಿತರಾಗಿ ಯಾವುದೇ ನೆಪದಿಂದ ಈ ಜನರು ಇಸ್ಲಾಮ್ ಮತ್ತು ಹಝುರತ್ ರಸೂಲುಲ್ಲಾಹ್[ಸ] ರವರ ವ್ಯಕ್ತಿತ್ವದ ಮೇಲೆ ಆರೋಪ ಮಾಡುತ್ತಿವೆ. ಮುಸಲ್ಮಾನರಿಗೆ ಮುಸಲ್ಮಾನರಿಂದ ಜಗಳ ಹಚ್ಚುತ್ತಿದ್ದಾರೆ. ಮುಸ್ಲಿಮರು ಹಝುರತ್ ಮಸೀಹ್ ಮೌಊದ್[ಅ] ರವರ ಈ ಎಚ್ಚರಿಕೆಯ ಮೇಲೆ ಯೋಚನೆ ಮಾಡುವುದಿಲ್ಲ. ಪ್ರಭಾತೋದಯವಾಗಿದೆ. ಅದನ್ನು ನೋಡಿರಿ. ತಕ್ಕುದಾದ ಸಮಯದಲ್ಲಿ ಅಲ್ಲಾಹನು ನಿಮಗೆ ವಿರಿಸಿರುವನು. ಈ ಕಾಲ ಬರುವುದು ನಿಶ್ಚಿತವಾಗಿತ್ತು. ಆದರೂ ನಿಮಗೆ ಅರ್ಥವಾಗುತ್ತಿಲ್ಲ. ಅಲ್ಲಾಹನು ನಮ್ಮನ್ನು ಸ್ಮರಿಸುವಾಗಲೂ ಅವನೆಡೆ ಗಮನ ಹರಿಸುವುದಿಲ್ಲವಾದರೆ ಅಲ್ಲಾಹನು ನಿಮ್ಮನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದರ ಪರಿಣಾಮ ನಾವು ಕಾಣುತ್ತಿದ್ದೇವೆ. ಮುಸಲ್ಮಾನರ ಸ್ಥಿತಿ ಎಲ್ಲ ಸರಕಾರಿ ಸಂಪನ್ಮೂಲಗಳನ್ನು ಹೊಂದಿದವರಾದರೂ ಸ್ಥಿತಿ ಮಾತ್ರ, ದಿನೇ ದಿನೇ ಹದಗೆಡುತ್ತಾ ಹೋಗುತ್ತಿದೆ. ಇಸ್ಲಾಮ್ ವಿರೋಧಿ ಶಕ್ತಿಗಳು ಮುಸಲ್ಮಾನರನ್ನು ದುರ್ಬಲಗೊಳಿಸುತ್ತಿವೆ. ಮುಸಲ್ಮಾನ ಮತ-ಪಂಡಿತರೂ ಹಝ್ರತ್ ಮಸೀಹ್ ಮೌಊದ್[ಅ] ಅವರ ವಿರೋಧದಲ್ಲಿ ಮುಂದುವರೆಯುತ್ತಲೇ ಇದ್ದಾರೆ. ಅಲ್ಲಾಹನು ನೀಡಿದ ಅನುಗ್ರಹಗಳ ಕಡೆ ಅವರ ದೃಷ್ಟಿಯಿಲ್ಲ. ತನ್ನ ಕುತಂತ್ರಗಳಿಂದ ಸೂರ್ಯನ ಈ ಬೆಳಕನ್ನು ಮಂದವಾಗಿಸ ಬಯಸುತ್ತಾರೆ. ಅದರಲ್ಲಿ ಇಬ್ಬರೂ ಭಾಗಿದಾರರಾಗಿದ್ದಾರೆ. ಅದನ್ನೇ ಒಂದು ಕಡೆ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು. ಒಂದು ಇದು ದಜ್ಜಾಲಿ ಶಕ್ತಿಗಳಿವೆ. ಇನ್ನೊಂದು ಈ ನಾಮಧಾರಿ ಮತಪಂಡಿತರಿದ್ದಾರೆ. ಇಂತಹ ಪರಿಸ್ಥಿತಿಗಳಲ್ಲಿ ಅಲ್ಲಾಹನ ಶರಣನಲ್ಲಿ ಬಂದು ದೈವದ ಏಕತ್ವದ ಮೇಲೆ ದೃಢತೆ ಹೊಂದಿ. ಆಕ್ರಮಣಗಳಿಂದ ರಕ್ಷಿಸಿಕೊಳ್ಳಬಹುದಾಗಿದೆ. ಅಲ್ಲಾಹನ ಆದೇಶಗಳನ್ನು ಪಾಲಿಸಿ ಆಕ್ರಮಣಗಳಿಂದ ರಕ್ಷಿಸಿಕೊಳ್ಳಬಹುದಾಗಿದೆ. ಇಲ್ಲವಾದರೆ ಮುಕ್ತಿಯ ಬೇರೆ ಮಾರ್ಗ ಯಾವುದೂ ಇಲ್ಲ. ಅಲ್ಲಾಹನು ನೀಡಿದ ಅನುಗ್ರಹಗಳನ್ನು ಸದ್ಬಳಕೆ ಮಾಡಿಕೊಂಡರೆ ಅವರ ದುಷ್ಪರಿಣಾಮಗಳಿಂದ ಉಳಿಯಬಹುದಾಗಿದೆ. ತೈಲ ಸಂಪತ್ತನ್ನು ತನ್ನ ಐಶ್ವರ್ಯಕ್ಕಾಗಿ ಬಳಸಿಕೊಂಡರೆ, ತನ್ನ ಮನೆಗಳನ್ನು, ತನ್ನ ಅರಮನೆಗಳನ್ನು ಸುವರ್ಣಮಯಗೊಳಿಸಲು ಹೊರಟರೆ, ಅಲ್ಲಾಹನ ಹಕ್ಕುಗಳನ್ನು ಕರ್ತವ್ಯಗಳನ್ನು ನಿರ್ಲಕ್ಷಿಸುವವರಾದರೆ ಅಥವಾ ಅದರ ಗಮನವೇ ಬಿಟ್ಟು ಬಿಟ್ಟರೆ, ಅಥವಾ ಅದನ್ನು ರದ್ದುಗೊಳಿಸುತ್ತ ಹೋದರೆ ಅಥವಾ ಸರಿಯಾದ ರೀತಿಯಲ್ಲಿ ನಿರ್ವಹಿಸದಿದ್ದರೆ, ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸದಿದ್ದರೆ ಈ ಸಂಪತ್ತು ಯಾವ ಉಪಯೋಗಕ್ಕೆ ಬಾರದು. ದಜ್ಜಾಲಿನ (ದುಷ್ಟಶಕ್ತಿಗಳ) ಮಾತುಗಳನ್ನು ಕೇಳಿ ಆ ಸಂಪತ್ತನ್ನು ಒಬ್ಬನು. ಇನ್ನೊಬ್ಬನ ವಿರೋಧಕ್ಕೆ ಬಳಸಿಕೊಳ್ಳಲು ಹೊರಟರೆ ಅದರ ನಕಾರಾತ್ಮಕ ಪರಿಣಾಮ ಏನಾಗಬಹುದೋ ಅದು ಆಗುತ್ತಿವೆ.

ಮತ್ತೆ ಅಲ್ಲಾಹನು ನುಡಿದನು. ಇಂತಹ ಸ್ಥಿತಿ ಉಂಟಾದರೆ ನೀವು ನನ್ನ ಅಭಯವನ್ನು ಪಡೆಯಲಾರಿರಿ. ನಿಮ್ಮ ವ್ಯಾಮೋಹಗಳಿಂದಾಗಿ ಮತ್ತು ದುರ್ಬಲತೆಗಳಿಂದಾಗಿ ದುಷ್ಕರ್ಮಗಳಿಗೆ ಒಳಗಾಗುವಿರಿ. ಮೋಹ ಆವರಿಸುವುದು ಮೋಹಗಳು ಆವರಿಸಲ್ಪಟ್ಟಾಗ ಮನುಷ್ಯನು ದುಷ್ಕರ್ಮಿಗಳಿಗೆ ಬಲಿಯಾಗುತ್ತಾನೆ. ಅದು ಮನುಷ್ಯನಿಗೆ ಹಾನಿ ಉಂಟು ಮಾಡುತ್ತದೆ. ಮತ್ತೆ ಮನುಷ್ಯನು ಅಲ್ಲಾಹನ ಅಭಯದಿಂದ ಹೊರ ನಡೆಯುವಂತಾಗುತ್ತದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್[ಅ] ಒಂದು ಸಂದರ್ಭದಲ್ಲಿ ನುಡಿದರು. ದಯವಂತನಾದ (ರಹ್ಮಾನ್) ಅಲ್ಲಾಹನಿಂದ ಸಂಬಂಧ ಕಡಿತಗೊಂಡರೆ ಶೈತಾನನೊಂದಿಗೆ ಸಂಬಂಧ ಹೊಂದುವಂತಾಗುತ್ತದೆ. (ಮಲ್ಫೂಝಾತ್, ಸಂಪುಟ–1, ಪುಟ–12)

ಶೈತಾನನೊಂದಿಗೆ ಸಂಬಂಧ ಏರ್ಪಟ್ಟ ಪರಿಣಾಮ ಶೈತಾನನದ್ದೆ ಆಗಬಹುದಲ್ಲವೇ. ಇಂದು ನಾವು ಅದೇ ಪರಿಸರವನ್ನು ಕಾಣುತ್ತಿದ್ದೇವೆ. ಪ್ರತಿಯೊಬ್ಬ ಸತ್ಯ ವಿಶ್ವಾಸಿ ಈ ಮಾತನ್ನು ತಮ್ಮ ಮುಂದಿರಿಸಬೇಕು. ಅಲ್ಲಾಹನ ಅನುಗ್ರಹಗಳನ್ನು ಸದ್ಬಳಕೆ ಮಾಡಿಕೊಳ್ಳಬಯಸುವುದಾದರೆ ಜನರ ಉಪದ್ರವಗಳಿಂದ ರಕ್ಷಣೆ ಪಡೆಯಲು ಅಲ್ಲಾಹನ ಅಭಯ ಯಾಚಿಸುವುದು ಅನಿವಾರ್ಯವಾಗಿರುತ್ತದೆ. ಅಲ್ಲಾಹನು ಈ ಕಾಲಕ್ಕೆ ತನ್ನ ಅಭಯವನ್ನು ನೀಡಿದ್ದಾನೆ. ಅದರ ಆಶ್ರಯವಹಿಸುವುದು ಅವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್[ಅ] ಅವರ ಆಗಮನದಿಂದ ಉಂಟಾದ ಪ್ರಭಾತದಿಂದ ಅನುಗ್ರಹ ಪಡೆಯ ಬಯಸುವುದಾದರೆ ಅಲ್ಲಾಹನ ದಯದಿಂದ ಅವನು ನೀಡಿದ ಅನುಗ್ರಹವನ್ನು ಏಕದೇವತ್ವದ ಪ್ರಚಾರ ಮಾಡಲು ಮತ್ತು ಭಯಭಕ್ತಿ ಹೊಂದಲು ಉಪಯೋಗಿಸಬೇಕು. ಅವನು ನೀಡಿದ ಸಂಪತ್ತನ್ನು ಕೇವಲ ಐಶ್ವರ್ಯಗಳಲ್ಲಿ ವ್ಯಯ ಮಾಡುವುದಾದರೆ ಅವನು ನೀಡಿದ ಸಂಪತ್ತನ್ನು ಕೇವಲ ಐಶ್ವರ್ಯಗಳಲ್ಲಿ ವ್ಯಯ ಮಾಡುವುದಾದರೆ ನಾವು ನೋಡುತ್ತಿದ್ದೇವೆ. ಹಲವು ಮುಸ್ಲಿಂ ರಾಷ್ಟ್ರಗಳಂತೆ ಶೈತಾನನ ವಶವಾಗಿ ಅಲ್ಲಾಹನ ಅನುಗ್ರಹಗಳಿಂದ ವಂಚಿತರಾಗುವಿರಿ. ಇಸ್ಲಾಮ್ ವಿರೋಧಿ ಶಕ್ತಿಗಳು ತಮ್ಮೆಲ್ಲ ಆಸ್ತಿಗಳನ್ನು ಬಳಕೆ ಮಾಡಿವೆ ಮತ್ತು ಮಾಡುತ್ತಿವೆ. ಹೀಗೆ ಮುಸ್ಲಿಮರನ್ನು ದುರ್ಬಲಗೊಳಿಸಬೇಕು. ಅವರ ಒಗ್ಗಟ್ಟು ಮುರಿಯಬೇಕು ಮತ್ತು ಅವರಲ್ಲಿ ಒಡಕು ಸೃಷ್ಟಿ ಮಾಡಬೇಕು. ಇವರು ಕೇವಲ ಐಹಿಕ ದೃಷ್ಟಿಯಿಂದ ನೋಡುವವರಾಗಿದ್ದಾರೆ. ಅವರ ಆಧ್ಯಾತ್ಮಿಕ ದೃಷ್ಟಿ ಕುರುಡಾಗಿದೆ. ಅವರು ಎಂದೂ ಇಸ್ಲಾಮಿ ರಾಷ್ಟ್ರಗಳು ಬೆಳೆಯಲು ಇಷ್ಟಪಡುವುದಿಲ್ಲ. ಆದರೆ ದುರಾದೃಷ್ಟವೇನೆಂದರೆ ಇಸ್ಲಾಮಿಕ್ ರಾಷ್ಟ್ರಗಳ ನಡವಳಿಕೆ ಅಲ್ಲಾಹನ ಆದೇಶಗಳಿಗೆ ವಿರುದ್ಧವಾಗಿವೆ. ಹಾಗಾಗಿ ಇಸ್ಲಾಮ್ ವಿರೋಧಿ ಶಕ್ತಿಗಳಿಗೆ ತಾವಾಗಿ ಯಶಸ್ಸು ನೀಡುತ್ತಿದ್ದಾರೆ. ಅವರು ಹೇಗಾದರೂ ಮಾಡಿ ಇಸ್ಲಾಮಿ ರಾಷ್ಟ್ರಗಳ ಸಂಪತ್ತು ಮತ್ತು ಅವರ ಶಕ್ತಿಗಳನ್ನು ತನ್ನ ವಶದಲ್ಲಿ ಇರಿಸಿ ಕೊಳ್ಳಬಯಸುತ್ತಾರೆ.

ನಾನು ಹೇಳಿದಂತೆ ದುರಾದೃಷ್ಟವಾಗಿ ಮುಸ್ಲಿಮ್ ಸರಕಾರಗಳಿಗೆ ಅಲ್ಲಾಹನು ಎಚ್ಚರ ನೀಡಿದರೂ. ಪ್ರಾರ್ಥನೆ ಕಲಿಸಿಕೊಟ್ಟರಾದರೂ, ಈ ಪ್ರಾರ್ಥನೆಯನ್ನು ಕಲಿಸಲಾಗಿದೆ. **"ವ ಮಿನ್ ಶರ್ರಿ ಗಾಸಿಖಿನ್ ಇಝಾ ವಖಬ್"** ಅಂಧಕಾರ ಆವರಿಸುವಾಗ ಉಂಟಾಗುವ ದೋಷದಿಂದ ರಕ್ಷಣೆ ಪಡೆಯಲು ನಿನ್ನ ಅಭಯ ಯಾಚಿಸುತ್ತೇನೆ. ಇದು ಅಲ್ಲಾಹನು ಕಲಿಸಿಕೊಟ್ಟ ಪ್ರಾರ್ಥನೆಯಾಗಿದೆ. ಮತ್ತು ಅಲ್ಲಾಹನು ಹೇಳಿದನು. **ವ ಮಿನ್ ಶರ್ರಿನ್ ನಫಾಸಾತಿ ಫಿಲ್ ಉಖದ್"** ಗಂಟುಗಳ ಮೇಲೆ ಊದುವವರ ಉಪದ್ರಗಳಿಂದ ಸಂಬಂಧವನ್ನು ಬೇರ್ಪಡಿಸುವ ಉಪದ್ರವದಿಂದ ನಾವು ನಿನ್ನ ಅಭಯವನ್ನು ಯಾಚಿಸುತ್ತೇವೆ. ಈ ಪ್ರಾರ್ಥನೆಯನ್ನು ಅಲ್ಲಾಹನು ಕಲಿಸಿಕೊಟಿದ್ದಾನೆ. ಆದರೂ ನಾವು ನೋಡುವುದೇನೆಂದರೆ ಮುಸ್ಲಿಮರು ಈ ದುಆ ಅವಶ್ಯವಾಗಿ ಓದುತ್ತಾರೆ. ಹೌದು. 'ನಾವು ಶೈತಾನನಿಂದ ರಕ್ಷಣೆ ಪಡೆಯಲು ನಿನ್ನ ಅಭಯವನ್ನು ಯಾಚಿಸುತ್ತೇವೆ. ಆದರೆ ಅದೇ ದುಷ್ಟ ದಜ್ಜಾಲಿ ಬಾಹುಗಳಲ್ಲಿ ಸಿಲುಕಿಕೊಂಡಿದ್ದಾರೆ. ಅಮುಸ್ಲಿಮ್ ಸರಕಾರಗಳಿಂದ ಸಹಾಯ ಬೇಡುತ್ತಿದ್ದಾರೆ. ಆ ಇಸ್ಲಾಮ್ ವಿರೋಧಿ ಶಕ್ತಿಗಳು ಆ ದೇಶಗಳಲ್ಲಿ ಉಗ್ರವಾದಿಗಳಿಗೆ ಸಹಾಯ ನೀಡುತ್ತಿವೆ. ಅಷ್ಟಕ್ಕೆ ಮಾತು ನಿಲ್ಲಲಿಲ್ಲ. ಇವೆಲ್ಲ ಕುತಂತ್ರಗಳಿಂದ ಮನಸ್ಸು ಸಮಾಧಾನಪಟ್ಟಿಲ್ಲ. ಅವರು ಯೋಚಿಸಿದಂತೆ ಕೆಲವು ರಾಷ್ಟ್ರಗಳು ಅವರ ಕೈ ಸೇರಲಿಲ್ಲ. ಅವರು ಬಯಸಿದಂತೆ ಅವರ ಮೇಲೆ ಹಿಡಿತ ಸಾಧಿಸಲಿಲ್ಲ. ಅವರ ಆರ್ಥಿಕತೆಯನ್ನು ಕುಂದಿಸಿಯೂ ಸಮಾಧಾನ ದೊರೆಯಲಿಲ್ಲ. ಮತ್ತೆ ಅವರು ಮೆಟ್ಟಲು ಬದಲಾಯಿಸಿದರು. ಮುಸಲ್ಮಾನರೊಂದಿಗೆ ಸಂಬಂಧ ಏರ್ಪಡಿಸುವ ನೆಪದಿಂದ ತಥಾಕಲ್ಪಿತ ಖಿಲಾಫತ್ ಅಸ್ತ್ರ ಉಪಯೋಗಿಸಿದರು. ಇದು ಮುಸಲ್ಮಾನರ ಭಾವನೆಯಾಗಿರಲಿಲ್ಲ. ಇದು ಸಹ ದುಷ್ಟಶಕ್ತಿಗಳು ಹುಟ್ಟಿಸಿದ ಸಮಸ್ಯೆಯಾಗಿದೆ. ಆ ಮೂಲಕ ಅವರು ಮುಸ್ಲಿಮರನ್ನು ಏಕತ್ರಗೊಳಿಸ ಬಯಸುತ್ತಿದ್ದರು. ಅವರನ್ನು ಶೋಷಣೆಗೆ ಒಳಪಡಿಸ ಬಯಸುತ್ತಿದ್ದರು. ಅವರು ಹೇಳಿದಂತೆ ಇವರನ್ನು ಉಪಯೋಗಿಸ ಬಯಸುತ್ತಿದ್ದರು. ಆ ಕಾರಣದಿಂದ ತಥಾಕಥಿತ ಖಿಲಾಫತ್ ಅಸ್ತ್ರ ಉಪಯೋಗಿಸಿದರು. ಅದಕ್ಕಾಗಿ ಒಂದು ವೇದಿಕೆ ನಿರ್ಮಿಸಿಕೊಟ್ಟರು. ಅವರಿಗೆ ಆಯುಧಗಳನ್ನು ಸರಬರಾಜು ಮಾಡಿದರು. ಎಲ್ಲ ರೀತಿಯ ಸಹಾಯ ನೀಡಿದರು. ಸಾಂಪತ್ತಿಕ ಸಹಾಯ ನೀಡಿದರು. ಕೋಟ್ಯಾನುಗಟ್ಟಲೆ ಡಾಲರ್ ಸುರಿಸಿದರು. ಆದರೆ ಅವರು ತಿಳಿದಿರಲಿಲ್ಲ. ಖಿಲಾಫತ್ ಅಲ್ಲಾಹನು ಸ್ಥಾಪಿಸುತ್ತಾನೆ. ಕೊನೆಗೆ ಅವರು ಯಥೇಚ್ಛ ಡಾಲರ್‌ಗಳು ಸುರಿಸಿಯೂ ಬಯಸಿದ ಫಲ ದೊರೆಯದ್ದರಿಂದ ಅವರಿಗೆ ಸಹಾಯ ನಿಲ್ಲಿಸಿದರು. ಹಲವು ರಾಜತಾಂತ್ರಿಕರು ಹೇಳುತ್ತಾರೆ. ಘಟನೆಗಳ ಮೇಲೆ ಸೂಕ್ಷ್ಮ ದೃಷ್ಟಿ ಹೊಂದಿದವರು ಹೇಳುತ್ತಾರೆ. ದಾಯಿಶ್ ಎಂಬ ಸಂಘಟನೆ ಮೂಲಕ ಖಿಲಾಫತ್ ವ್ಯವಸ್ಥೆಯನ್ನು ನಡೆಸುವ ಹುನ್ನಾರ ಹಾಕಿದ್ದರು. ಅದು ಅವರದ್ದೆ ಕುತಂತ್ರವಾಗಿತ್ತು. ಏಕೆಂದರೆ ಅವರ ಸಹಾಯವಿಲ್ಲದೆ ಈ ಜನರು ಸರಕಾರಗಳ ವಿರುದ್ಧ ಇಷ್ಟೊಂದು ದೀರ್ಘವಾದ ಯುದ್ಧಗಳು ಮಾಡಲು ಸಾಧ್ಯವಿರಲಿಲ್ಲ.

ಅವರ ಉದ್ದೇಶಿತ ಆಸೆಗಳು ಈಡೇರದಿದ್ದಾಗ, ಅವರ ದೇಶಗಳ ಮೇಲೆಯೂ ಅದರ ದುಷ್ಪರಿಣಾಮ ಬೀರುವಂತಹ ಸನ್ನಿವೇಶ ಕಂಡಾಗ ಇದನ್ನು ಅಂತ್ಯಗೊಳಿಸಬೇಕು ಎಂದು ನಿರ್ಧರಿಸಿದರು. ಅಂತೂ ಅವರ ಮುಖ್ಯ ಉದ್ದೇಶ ಮುಸ್ಲಿಮ್ ರಾಷ್ಟ್ರಗಳನ್ನು ದುರ್ಬಲಗೊಳಿಸುವುದಾಗಿತ್ತು. ಅವರ ಆರ್ಥಿಕತೆಯ ಮೇಲೆ ತಮ್ಮ ಅಂಕುಶ ಸಾಧಿಸುವುದಾಗಿತ್ತು. ಅವರಿಗೆ ತಮ್ಮ ಅಧೀನಕ್ಕೆ ಒಳಪಡಿಸಿಕೊಳ್ಳುವುದಾಗಿತ್ತು. ಹೇಗೂ ಮಾಡಿ ತಮ್ಮ ಪ್ರಭುತ್ವ ಸ್ಥಾಪಿಸುವುದಾಗಿತ್ತು. ನಾನು ಹೇಳಿದಂತೆ ಈ ಕಾರ್ಯ ಅವರು ಮೊದಲಿನಿಂದ ಮಾಡಿಕೊಂಡು ಬಂದಿದ್ದಾರೆ. ಈಗಲೂ ಮಾಡಿದ್ದಾರೆ. ಮತ್ತು ಮಾಡುತ್ತಿರುವರು. ಒಮ್ಮೆ ಸರಕಾರದ ನಡುವೆ ಜಗಳ ಹಚ್ಚುವ ಮೂಲಕ ಮುಸಲ್ಮಾನರು ಎಂದೂ ಹೇಗೂ ಒಟ್ಟಾಗದಂತೆ ನೋಡಿಕೊಳ್ಳುವ ಮೂಲಕ ಐರ್‌ಲ್ಯಾಂಡ್ ಪ್ರವಾಸದಲ್ಲಿದ್ದ ಒಬ್ಬ ಜರ್ನಲಿಸ್ಟ್ ನನ್ನಲ್ಲಿ ಪ್ರಶ್ನಿಸಿದ.

ಮೊದಲು ಉಗ್ರವಾದಿಗಳು ಅಥವಾ ಸರಕಾರ ವಿರೋಧಿ ಗುಂಪುಗಳು ಸರಕಾರಗಳ ವಿರುದ್ಧ ದಂಗೆ ಏಳುತ್ತಿದ್ದರು. ಆದುದರಿಂದ ಯಶಸ್ವಿಯಾಗುತ್ತಿರಲಿಲ್ಲ. ಈಗ ಖಿಲಾಫತ್ ವ್ಯವಸ್ಥೆ ಸ್ಥಾಪಿಸಿಕೊಂಡಿದ್ದಾರೆ. ಮುಸಲ್ಮಾನರು ಖಿಲಾಫತ್ ಹೆಸರಿನಲ್ಲಿ ಒಗ್ಗೂಡುತ್ತಿದ್ದಾರೆ. ಅಂದ ಮೇಲೆ ನಿಮ್ಮ ವಿಚಾರವೇನು? ಆಗ ನಾನು ಇದೇ ಹೇಳಿದ್ದೆ. ಇವರು ಸಹ ಉಳಿದ ಉಗ್ರವಾದಿ ಗುಂಪುಗಳಂತೆ ಅಥವಾ ಉಗ್ರವಾದಿಗಳಂತೆ ಹೇಗೆ ಮೊದಲು ಅವರ ಕಾರ್ಯ ಅಶಾಂತಿ ಹುಟ್ಟಿಸುವುದು ಬಿಟ್ಟು ಬೇರೆ ಏನೂ ಆಗಿರಲಿಲ್ಲ. ಇವರಿಗೆ ಏನೂ ಮಾಡಲು ಸಾಧ್ಯವಾಗುವುದಿಲ್ಲ. ಇದರ ಪರಿಣಾಮ ಅವರಿಗಿಂತ ಭಯಂಕರವಾಗುವುದು ಮತ್ತು ತಾವಾಗಿ ನಾಶಹೊಂದುವರು. ಏಕೆಂದರೆ ಖಿಲಾಫತ್ ಸ್ಥಾಪಿಸುವುದು ಅಲ್ಲಾಹನ ಕಾರ್ಯವಾಗಿದೆ. ಅದಾಗ್ಯೂ ನಾವು ನೋಡಿ ಆಗಿದೆ. ಮೂರು ನಾಲ್ಕು ವರ್ಷಗಳ ಒಳಗೆಯೇ ಉತ್ತುಂಗಕ್ಕೆ ಏರಿದ ಅವರ ಖಿಲಾಫತ್ ಈಗ ಅಂತ್ಯ ಕಂಡಿದೆ. ಮೂರು ನಾಲ್ಕು ವರ್ಷಗಳ ಹಿಂದಿನ ಮಾತಾಗಿದೆ. ಅಲ್ಲಿಂದ ಇಲ್ಲಿಂದ ಒಂದಿಷ್ಟು ಸ್ವರಗಳು ಕೇಳಿ ಬರುತ್ತಿವೆ. ಅವರ ಬಗ್ಗೆ ಟಿಪ್ಪಣಿ ದೊರೆಯುತ್ತಿರುತ್ತವೆ. ಅಲ್ಲಿ ಹೀಗಾಗಿದೆ, ಇಲ್ಲಿ ಹೀಗಾಗಿದೆ ಎಂದು ಇದು ಕೂಡ ಅವರ ಸಂಚು ಆಗಿದೆ. ಆ ಮೂಲಕ ಅವರು ಆ ರಾಷ್ಟ್ರಗಳಲ್ಲಿ ಭಯ ಉಳಿಸಬೇಕು ಎಂದು ಬಯಸುತ್ತಾರೆ. ಈ ನಾಮಧಾರಿ ಗುಂಪುಗಳನ್ನು ತಮ್ಮ ವಶದಲ್ಲಿ ಇಟ್ಟುಕೊಂಡಿದ್ದಾರೆ. ಇಲ್ಲವಾದರೆ ಅವರ ಸಹಾಯ ದೊರೆಯದೆ ಇವರು ಏನೂ ಮಾಡಲು ಸಾಧ್ಯವಿಲ್ಲ.

ಅಂತೂ ಅಲ್ಲಾಹನು ಎಚ್ಚರಿಸಿದ್ದಾನೆ ಮತ್ತು ದುಆ ಸಹ ಕಲಿಸಿಕೊಟ್ಟಿದ್ದಾನೆ. ಅಂತಿಮ ಕಾಲದಲ್ಲಿ ಖಾತಮಲ್ ಖುಲಫಾರ ಕಾಲ ಬಂದಾಗ ಅಂಧಕಾರ ಕತ್ತಲೆ ಹರಡುವ ಶಕ್ತಿಗಳಿಂದ ರಕ್ಷಣೆ ಪಡೆಯಲು ತನ್ನನ್ನು ತಾನು ಅಲ್ಲಾಹನಿಗೆ ಸಮರ್ಪಿಸಲು ಪ್ರಯತ್ನ ಮಾಡಬೇಕು ಮತ್ತು ದುಆ ಮಾಡಬೇಕು. ಮುಸಲ್ಮಾನರ ಅಸ್ತಿತ್ವ, ಐಕ್ಯತೆಯನ್ನು ಮುರಿಯುವ ಪ್ರಯತ್ನಗಳಾಗುವುವು. ನಾನು ಹೇಳಿದಂತೆ ನಾವು ನೋಡುತ್ತಿದ್ದೇವೆ. ಆ ಪ್ರಯತ್ನಗಳು ನಡೆಯುತ್ತಿವೆ. ಆಗ ಅಲ್ಲಾಹನಲ್ಲಿ ಶರಣ ಹೊಂದಲು ದುಆ ಮಾಡಬೇಕು. ಆ ಪ್ರಭಾತ ಇಸ್ಲಾಮಿನ ಪುನರುತ್ಥಾನದ ಪ್ರಭಾತ ಆಗಿರುವುದು. ಅದು ಮಸೀಹ್ ಮೌಊದ್[ಅ] ರವರ ಆಗಮನದಿಂದ ಉದಯವಾಗಿದೆ. ಆ ಮೂಲಕ ಸಿರಾಜೆ ಮುನೀರ್ ಪುನಃ ಲೋಕದಲ್ಲಿ ಪ್ರಕಾಶಿಸುವುದು. ಅದು ಲೋಕವನ್ನು ಪ್ರಕಾಶಮಯಗೊಳಿಸಲು ಹದಿನಾಲ್ಕು ನೂರು ವರ್ಷಗಳ ಹಿಂದೆ ಆಗಮಿಸಿತ್ತು. ಆ ಸಮಯ ಅಲ್ಲಾಹನು ಹೇಳಿದನು. ನನ್ನ ಅಭಯವನ್ನು ಬೇಡುತ್ತ, ನನ್ನ ಅಭಯದ ಮೇರೆಗೆ ಆಗಮಿಸುವ ಖಾತಮಲ್ ಖುಲಫಾಅರೊಡನೆ ಸಂಬಂಧ ಹೊಂದಬೇಕು. ಆದರೆ ದುರಾದೃಷ್ಟ ಮುಸಲ್ಮಾನರ ಬಾಹುಳ್ಯವು ಈ ದೈವಿಕ ಎಚ್ಚರಿಕೆಯನ್ನು ಲೆಕ್ಕಿಸುತ್ತಿಲ್ಲ. ಅಲ್ಲಾಹನು ಹೇಳಿಕೊಟ್ಟ ಪ್ರಾರ್ಥನೆಗಳ ಮೇಲೆ ಯೋಚನೆ ಮಾಡುತ್ತಿಲ್ಲ. ಬದಲು ಶತ್ರುಗಳ ಜಾಲದಲ್ಲಿ ಸಿಲುಕಿ ಅಂಧಕಾರಗಳಲ್ಲಿ ಬೀಳುತ್ತಿದ್ದಾರೆ. ಶೈತಾನನು ಎಲ್ಲಾ ಸಮಯ ಅವರ ದಾರಿ ತಪ್ಪಿಸುತ್ತಿದ್ದಾನೆ.

ಅಹ್ಮದಿಯರೂ ಸಹ ಕೇವಲ ನಾವು ನಂಬಿದವರಾಗಿದ್ದೇವೆ. ಸುರಕ್ಷಿತರಾಗಿದ್ದೇವೆ ಎಂದು ಭಾವಿಸಬಾರದು. ಹಝ್ರತ್ ರಸೂಲುಲ್ಲಾಹ್[ಸ] ರವರು ಮೂರು 'ಖುಲ್' ರಾತ್ರಿ ಮಲಗುವ ಸಮಯದಲ್ಲಿ ಪಠಿಸಲು ಉಪದೇಶ ನೀಡಿರುತ್ತಾರೆ. ಆದುದರಿಂದ ತನ್ನನ್ನು ತಾನು ಅಲ್ಲಾಹನ ಶರಣು ಹೊಂದಲು

ಪ್ರಾರ್ಥಿಸುತ್ತಿರಬೇಕು. ಖಿಲಾಫತ್ತಿನ ಅನುಗ್ರಹಗಳನ್ನು ಪಡೆಯಲು ಸದಾ ಖಿಲಾಫತ್ತಿನೊಂದಿಗೆ ಹೊಂದಿಕೊಂಡಿರಬೇಕು. ಮತ್ತು ಅದರ ಅನುಪಾಲನೆಯಲ್ಲಿ ಪರಿಪೂರ್ಣತೆ ಸಾಧಿಸಲು ಪ್ರಯತ್ನಿಸಬೇಕು. ಆದಷ್ಟು ಮಟ್ಟಿಗೆ ಅನುಷ್ಠಾನ ಮಾಡಿರಿ. ನಿಷ್ಠರಾಗಿರಿ, ಇಲ್ಲವಾದರೆ ಮತ್ಸರಿಗಳು ನಿಮ್ಮ ಮೇಲೆಯೂ ಆಕ್ರಮಣ ಮಾಡುವ ಸಾಧ್ಯತೆ ಇದೆ. ದುಷ್ಕರ್ಮಿಗಳು ನಿಮಗೆ ಮಹದಿ ಮೌಊದ್(ಅ) ರ ಕಾಲಗಳ ಪ್ರಗತಿ ಮತ್ತು ಖಿಲಾಫತ್ ಅನುಗ್ರಹಗಳಿಂದ ವಂಚಿಸುವ ಪ್ರಯತ್ನ ಮಾಡುವರು. ಅವರು ಏಕೆ ಪ್ರಗತಿ ಹೊಂದುತ್ತಿದ್ದಾರೆ ಎಂಬುದು ಅವರ ಮತ್ಸರಕ್ಕೆ ಕಾರಣವಾಗಿದೆ. ಅವರು ಏಕೆ ನಮ್ಮ ಜಾಲದಲ್ಲಿ ಬರುವುದಿಲ್ಲ. ಹಲವು ಕಡೆ ಕೆಲವು ರಾಜತಾಂತ್ರಿಕರು ಹೇಳುತ್ತಾರೆ. ನಾವು ಮುಸಲ್ಮಾನರ ಗುಂಪುಗಳ ಬೇರೆ ನೇಕಾರರ ಮೇಲೆ ಹಿಡಿತ ಸಾಧಿಸಿದ್ದೇವೆ. ಆದರೆ ಅಹ್ಮದಿಯರೊಂದಿಗೆ ನಾವು ಬಯಸಿದಂತೆ ಹಿಡಿತ ಸಾಧಿಸಲು ಆಗುತ್ತಿಲ್ಲ. ಯಾವೊಬ್ಬ ದುರ್ಬಲ ದುಷ್ಕರ್ಮಿಯಾಗಿರಲಿ ಅಥವಾ ದುರ್ಬಲನು ವಿಶ್ವಾಸ ತಂದರೂ ಅದು ಯಾವ ಲೆಕ್ಕಕ್ಕೂ ಇಲ್ಲ. ಏಕೆಂದರೆ ಅವರಿಂದ ಏನೂ ಮಾಡಲಾಗುವುದಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಅಲ್ಲಾಹನು ತನ್ನ ದಿವ್ಯವಾಣಿಯ ಮೂಲಕ ಹೇಳಿದನು. ಈ ದಜ್ಜಾಲಿ ಶಕ್ತಿಗಳು ನಿಮ್ಮ ಮೇಲೆ ಹಿಡಿತ ಸಾಧಿಸಲು ಸಾಧ್ಯವಿಲ್ಲ. ಆ ಕಾಲದಲ್ಲಿ ಫ್ರೀ ಮೆಸ್ಸನ್ ಅವರ ಬಾಹುಳ್ಯವಿತ್ತು. ಅವರ ಪ್ರಭಾವವೂ ಬೀರದು. (ತಝ್‌ಕಿರಹ್, ಪುಟ–336, ನಾಲ್ಕನೇ ಮುದ್ರಣ)

ಆದುದರಿಂದ ಅವರ ಹಿಡಿತ ಸಾಧ್ಯವೇ ಇಲ್ಲ. ಆದರೆ ತೆರೆಮರೆಯಲ್ಲಿ ಅವರ ಪ್ರಯತ್ನಗಳು ಜಾರಿಯಲ್ಲಿದ್ದವು. ಯಾವುದೇ ಮಾರ್ಗದಿಂದ ಮುಸಲ್ಮಾನರೆಂದು ನಟಿಸಿ ಜಮಾಅತಿನಲ್ಲಿ ಒಡಕು ಮೂಡಿಸಲು ಪ್ರಯತ್ನಪಡುವರು. ಆದುದರಿಂದ ಇವೆಲ್ಲ ಗೊಂದಲಗಳಿಂದ ರಕ್ಷಿಸುವವನೊಬ್ಬನಿದ್ದಾನೆಂದರೆ ಅದು ಅಲ್ಲಾಹನು ಮಾತ್ರ. ಆ ಪರಿಪಾಲಕನು ನಮ್ಮನ್ನು ರಕ್ಷಿಸುವನು. ಅವನೇ ಈ ಪ್ರಭಾತ ಉದಯಿಸಿದ್ದಾನೆ. ಅವನೇ ಮಸೀಹ್ ಮೌಊದ್(ಅ) ರನ್ನು ಕಳುಹಿಸಿದ್ದಾನೆ. ಅವರು ನಮಗೆ ಹೇಳಿದರು. ಅವನೇ ಸರ್ವಲೋಕಗಳ ಪರಿಪಾಲಕನಾಗಿದ್ದಾನೆ. ಜನರ ಪರಿಪಾಲಕನಾಗಿದ್ದಾನೆ. ಆದುದರಿಂದ ನೀನು ರಕ್ಷಣೆ ಬಯಸುವುದಾದರೆ ಅವನನ್ನೇ ತನ್ನ ಪರಿಪಾಲಕನೆಂದು ನಂಬಿ.

ಆತ್ಮಾವಲೋಕನ ಮಾಡಿಕೊಳ್ಳಿರಿ. ವಾಸ್ತವದಲ್ಲಿ ನಾವು ಆ ದೇವನು. ಏಕನಾದ ದೇವನು. ಜನರ ಪರಿಪಾಲಕನಾದ ದೇವನು. ಸರ್ವಲೋಕಗಳ ಪರಿಪಾಲಕನು. ಅವನ ಶರಣ ಹೊಂದಲು ನಾವು ಪ್ರಯತ್ನಿಸುತ್ತಿದ್ದೇವೆಯೇ? ನಿಸ್ಸಂಶಯವಾಗಿ ಅಲ್ಲಾಹನು ವಿವಿಧ ಪರಿಸ್ಥಿತಿಗಳನ್ನು ನಮ್ಮ ಪೋಷಣೆಗಾಗಿ ಹಲವು ಮಾರ್ಗಗಳನ್ನು ತೆರೆದಿದ್ದಾನೆ. ಆದರೆ ಇವರೆಲ್ಲರೂ ಆ ಪರಿಪಾಲಕನಾದ ಅಲ್ಲಾಹನ ಸೃಷ್ಟಿಯಾಗಿದೆ. ಅನ್ನಾಸ್ ಅಧ್ಯಾಯದಲ್ಲಿ ಆ ಕುರಿತು ಸ್ಪಷ್ಟನೆಯಿದೆ. ನಮ್ಮ ಪೋಷಣೆ ಮಾಡಿದ ಮಾರ್ಗದಲ್ಲಿ ನಮ್ಮ ಹೆತ್ತವರಿದ್ದಾರೆ ಅಥವಾ ಬೇರೆಯವರಿದ್ದಾರೆ. ಅವರಿಗೂ ಕೃತಜ್ಞರಾಗುವ ಆದೇಶ ಅಲ್ಲಾಹನು ನಮಗೆ ನೀಡಿರುತ್ತಾನೆ. ಸರಕಾರ ನ್ಯಾಯಬದ್ಧವಾಗಿದ್ದರೆ ಅದು ನಮ್ಮ ಅಗತ್ಯಗಳನ್ನು ಪೂರೈಸುವುದಾದರೆ, ನಮಗೆ ಸ್ವಾತಂತ್ರ್ಯ ನೀಡುವುದಾದರೆ ಅದಕ್ಕೂ ನಾವು ಕೃತಜ್ಞರಾಗಬೇಕಾಗಿದೆ ಏಕೆಂದರೆ ಅದು ಅಲ್ಲಾಹನ ಆಜ್ಞೆ ಆಗಿದೆ. ಆದರೆ ನಿಜವಾದ ಪರಿಪಾಲಕನು ಅಲ್ಲಾಹ್ ಮಾತ್ರನಾಗಿದ್ದಾನೆ. ಅವನು ಏಕನಾಗಿದ್ದಾನೆ. ಅವನು ಹೇಳಿದನು. ನಿಮ್ಮ ವಾಸ್ತವ ಪರಿಪಾಲಕರನ್ನು ಎಂದೂ ಮರೆಯಬೇಡಿರಿ.

ಮತ್ತು ನುಡಿದನು. ಮನುಷ್ಯರ ಸಾರ್ವಭೌಮನ ಅಭಯ ಯಾಚಿಸಿರಿ. ಅವನು ಎಲ್ಲಾ ರಾಜರುಗಳ ರಾಜನಾಗಿದ್ದಾನೆ. ಅವನು ಸರ್ವ ಶ್ರೇಷ್ಠನು. ಆಕಾಶ ಭೂಮಿಗಳ ಏಕೈಕ ಮಾಲೀಕನು. ಈ ಅನುಗ್ರಹಗಳು ನಿಮಗೆ ಲೌಕಿಕ ರಾಜರುಗಳು ನೀಡುತ್ತಿಲ್ಲ. ಈ ಅನುಗ್ರಹಗಳು ಅಲ್ಲಾಹನು ನಿಮಗೆ ನೀಡುತ್ತಿದ್ದಾನೆ. ಅಲ್ಲದೇ ಲೌಕಿಕ ರಾಜರಾಗಿ ಕುಳಿತವರಿಗೂ ಅಲ್ಲಾಹನೇ ಇವೆಲ್ಲ ನೀಡುತ್ತಿದ್ದಾನೆ. ಅಲ್–ಇಖ್‌ಲಾಸ್ ಅಧ್ಯಾಯದಲ್ಲಿ ಅದರ ವಿವರಣೆ ಇದೆ ಅಲ್ಲಾಹನು ಸರ್ವ ಸಂಪನ್ನಗಳ ಮಾಲೀಕನಾಗಿದ್ದಾನೆ. ಅವನಲ್ಲಿ ಎಲ್ಲಾ ಗುಣಗಳು ಪರಿಪೂರ್ಣವಾಗಿವೆ. ಅವನ ಆಸರೆಯಿಲ್ಲದೆ ಯಾವ ರಾಜನಿಗೂ ಇರಲು ಸಾಧ್ಯವಿಲ್ಲ. ಈ ಲೌಕಿಕ ರಾಜರುಗಳು ಅಸತುಂಷ್ಟರಾದರೆ ಅಥವಾ ತಮ್ಮ ಅಣತಿಗೆ ವಿರುದ್ಧವಾದರೆ ನ್ಯಾಯವನ್ನು ಬಿಟ್ಟುಬಿಡುತ್ತಾರೆ. ಅಲ್ಲದೇ ದೌರ್ಜನ್ಯಕ್ಕೆ ಇಳಿಯುತ್ತಾರೆ. ಅಲ್ಲಾಹನು ನುಡಿದನು. ಒಂದು ಕಾಲ ಬರಲಿದೆ. ಸರಕಾರಗಳು ಅಥವಾ ರಾಜರುಗಳು ದೌರ್ಜನ್ಯ ಎಸಗುವವರು. ಆಗ ವಾಸ್ತವವಾಗಿ ಮಾಲಿಕನಾದ ಅಲ್ಲಾಹನ ಶರಣು ಹೊಂದಿರಿ. ಅದಕ್ಕಾಗಿ ಪ್ರಾರ್ಥಿಸಿರಿ. ಅಹ್ಮದಿಯರು ನಿಶ್ಚಯವಾಗಿ ಈ ಕಡೆ ಗಮನ ಹರಿಸಬೇಕಾಗಿದೆ. ಮುಸ್ಲಿಮ್ ರಾಷ್ಟ್ರಗಳ ನೇತಾರರಾದವರು. ಸರಕಾರಗಳು ತಮ್ಮನ್ನು ತಾವು ಸಾರ್ವಭೌಮ ಎಂದು ಭಾವಿಸುತ್ತಾರೆ. ಅಹ್ಮದಿಯರ ವಿರುದ್ಧ ಎಂತಹ ಉಪದ್ರವಕಾರಿ ಕಾನೂನುಗಳನ್ನು ಮಾಡುತ್ತಿದ್ದಾರೆಂದರೆ ಆ ಮೂಲಕ ಅಹ್ಮದಿಯರನ್ನು ನಿಜವಾದ ಇಸ್ಲಾಮಿನ ಮೇಲೆ ಖಾಯಂ ಆಗಿರದಂತೆ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಬೈಅತ್‌ನಲ್ಲಿ ಇರುವಂತೆ ತಡೆಯ ಬಯಸುತ್ತಾರೆ. ಆಗ ಅಲ್ಲಾಹನು ಹೇಳಿದನು. ಇಂತಹ ಪರಿಸ್ಥಿತಿಗಳಲ್ಲಿ ಅಭಯವೇನಾದರೂ ಇದ್ದರೆ ನಿಜವಾದ ಅರಸನ ಅಭಯ ಯಾಚಿಸುವುದಾದರೆ ಅದು ಕೇವಲ "ಮಲಿಕಿನ್ನಾಸ್–ಮನುಷ್ಯನ ಸಾರ್ವಭೌಮನ ಅಭಯವಾಗಿದೆ. ಅಲ್ಲಾಹನ ಅಸ್ತಿತ್ವವಾಗಿದೆ. ಅವನ ಶರಣಲ್ಲಿ ಬರಲು ಪ್ರಯತ್ನ ಮಾಡಿರಿ. ಅವನು ಎಲ್ಲಾ ಮನುಷ್ಯರ ರಾಜಾಧಿರಾಜನಾಗಿದ್ದಾನೆ. ರಾಜರು ಮತ್ತು ಸರಕಾರಗಳು ಅವನ ಅಧೀನದಲ್ಲಿವೆ. ಅವರ ಉಪದ್ರವಗಳಿಂದ ರಕ್ಷಿಸುವನು ಅವನೇ ಆಗಿದ್ದಾನೆ.

ಮತ್ತೆ ಅಲ್ಲಾಹನು ಹೇಳುತ್ತಾನೆ. ನಿಮಗೆ ಇಲಾಹಿನ್ನಾಸ್ (ಮನುಸ್ಯ) ಆರಾಧ್ಯನು ಶರಣದಲ್ಲಿ ಬರಲು ಪ್ರಯತ್ನಿಸಬೇಕಾಗಿದೆ. ಅವನೆ ನಿಜವಾದ ಆರಾಧ್ಯನಾಗಿದ್ದಾನೆ. ಆಗ ಹೀಗೆ ಪ್ರಾರ್ಥಿಸಿರಿ. "ಓ ಅಲ್ಲಾಹನೆ ನನಗೆ ನನ್ನ ಶರಣರಲ್ಲಿ ಅಭಯ ನೀಡಿ. ಎಲ್ಲಾ ಸುಳ್ಳು ಆರಾಧ್ಯಗಳ ಉಪದ್ರವಗಳಿಂದ ರಕ್ಷಿಸು. ತನ್ನ ನಿಜವಾದ ಆರಾಧ್ಯನಿಂದ ಬೇರ್ಪಡಿಸಿ ಅವರ ಮಾರ್ಗದಲ್ಲಿ ನಡೆಸ ಬಯಸುತ್ತಾರೆ. ಅವರು ತೋರಿಕೆಗೆ ಅಲ್ಲವಾದರೂ ತಮ್ಮ ನಡತೆಯಿಂದ ತನ್ನನ್ನು ಆರಾಧ್ಯನೆಂದು ಭಾವಿಸುತ್ತಾರೆ ಅಥವಾ ಅವರ ಹಿಂಬಾಲಕರು ಅವರು ಬಯಸಿದಂತೆಯೇ ತಾವು ಆರಾಧಿಸ ಬಯಸುತ್ತಾರೆ. ಅಂದರೆ ಅಹ್ಮದಿಯರ ಆರಾಧನೆಗಳೂ ಅವನಂತೆ ಆಗಿರಬೇಕು. ಅವರು ಹೇಳಿದಂತೆ ನಡೆಯಬೇಕು. ಪಾಕಿಸ್ತಾನದಲ್ಲಿ ಇದೆ ಪ್ರಚಲಿತವಿದೆ. ಕೆಲವು ಇನ್ನಿತರ ಮುಸ್ಲಿಮ್ ರಾಷ್ಟ್ರಗಳಲ್ಲಿ ಇದೆ. ಸೌದಿ ರಾಜರು ಇದೇ ಬಯಸುತ್ತಾರೆ. ತಮ್ಮನ್ನು ಆರಾಧ್ಯನನ್ನಾಗಿ ಮಾಡಬೇಕು. ರಾಜನಾಗಿಯೂ ಒಪ್ಪಬೇಕು. ಆರಾಧನೆಗಳೂ ಅವರು ಹೇಳಿದಂತೆ ಮಾಡಬೇಕು.

ಇಸ್ಲಾಮ್ ವಿರೋಧಿಗಳು ಬಹಿರಂಗವಾಗಿ ಆರಾಧ್ಯನನ್ನಾಗಿ ಸೃಷ್ಟಿ ಮಾಡಿದ್ದರು. ಅವರನ್ನು ಸೃಷ್ಟಿಸಿ ಅವರು ಸೃಷ್ಟಿಕರ್ತನ ಭಾಗಿದಾರರು ಎನ್ನುತ್ತಿದ್ದರು. ಆದರೆ ಈ ಜನರು ಬಹು ದೊಡ್ಡ ರೀತಿಯಲ್ಲಿ ತನ್ನ ಪ್ರಜೆಗಳನ್ನು ತನ್ನ ಅನುಮತಿ ಇಲ್ಲದೆ ಅಥವಾ ಅವರು ಹೇಳಿದ ವಿಧಾನಗಳನ್ನು ಅನುಸರಿಸದೆ ಏಕದೇವನ ಆರಾಧನೆ ಮಾಡದಂತೆ, ಅಂದರೆ ಅಲ್ಲಾಹನ ಆದೇಶವನ್ನು ಅನುಸರಿಸಬಾರದು. ಬದಲಾಗಿ ಇವರ ಆದೇಶಗಳನ್ನು ಮನ್ನಿಸಬೇಕು. ಲೌಕಿಕ ರೀತಿಯಲ್ಲೂ ಮತ್ತು ಧಾರ್ಮಿಕ ರೀತಿಯಲ್ಲೂ ಅದಕ್ಕಾಗಿ ಅವಶ್ಯವಿರುವುದೇನೆಂದರೆ ಅಲ್ಲಾಹನು ಕಳುಹಿಸಿದವನನ್ನು, ಅಲ್ಲಾಹನು ಉದಯಿಸಿದ ಪ್ರಭಾತನನ್ನು ತ್ಯಜಿಸಿರಿ. ಮುಂದೆ ಹೇಳಿದರು: ಇಂತಹ ಸಮಯದಲ್ಲಿ ನಿಜವಾದ ಆರಾಧ್ಯನ ಮುಂದೆ ತಲೆ ಬಾಗಿರಿ. ಅವನ ಶರಣ ಹೊಂದಿರಿ. ಆಗ ನಿಮ್ಮ ಪ್ರಾರ್ಥನೆಗಳು ಮತ್ತು ನಿಮ್ಮ ದುಃಖಗಳು ಕೇಳಿ ಅಲ್ಲಾಹನು ನಿಮಗೆ ಆ ನಾಮಧಾರಿ ಆರಾಧ್ಯರಿಂದ ಮುಕ್ತಿ ನೀಡುವನು. ನಮ್ಮನ್ನು ಆ ನಾಮಧಾರಿ ಧಾರ್ಮಿಕ ಮುಖಂಡರಿಂದ ರಕ್ಷಿಸಿ ನಿನ್ನ ಅಭಯ ನೀಡು. ಅವರು ತಮ್ಮ ಅಣತಿಯ ಮೇರೆಗೆ ನಮ್ಮನ್ನು ಆರಾಧಿಸಬೇಕು ಎನ್ನುವರು. ಮತ್ತು ಅಲ್ಲಾಹನು ನುಡಿಯುತ್ತಾನೆ.

**"ಮಿನ್ ಶರ್‌ರಿಲ್ ವಸ್‌ವಾಸಿಲ್ ಖನ್ನಾಸ್"** ಅಂದರೆ " (ದುರ್ಭೋಧನೆ ಮಾಡಿ) ಹಿಂದೆ ಸರಿಯುವ ದುರ್ಬೋಧಕನ ಉಪದ್ರವದಿಂದ ನಾನು ಅಭಯ ಯಾಚಿಸುತ್ತೇನೆ. **ಅಲ್ಲಝಿ ಯುವಸ್‌ವಿಸು ಫೀ ಸುದೂರಿನ್ನಾಸ್"** ಅವನು(ಆ ದುರ್ಬೋಧಕನು) ಮನುಷ್ಯ ಹೃದಯಗಳಲ್ಲಿ ಸಂಶಯ ಮೂಡಿಸುತ್ತಾನೆ. **"ಮಿನಲ್ ಜಿನ್ನತಿ ವನ್ನಾಸ್"** ಅವನು ಜಿನ್ನ್ (ಅಸಾಮಾನ್ಯ) ಮತ್ತು ಇನ್ಸ್ (ಸಾಮಾನ್ಯ) ವರ್ಗದಲ್ಲಿ ಸೇರಿದವನಾಗಿದ್ದಾನೆ. ಅಲ್ಲಾಹನ ಶರಣನಲ್ಲಿ ಬಂದಾಗ ಮಾತ್ರ ಜನರ ಆಕ್ರಮಣಗಳಿಂದಲೂ ಬಹಿರಂಗ ಆಕ್ರಮಣಗಳಿಂದಲೂ ಮತ್ತು ಗುಪ್ತವಾದ ಆಕ್ರಮಣಗಳಿಂದಲೂ ರಕ್ಷಿಸಿಕೊಳ್ಳಬಹುದಾಗಿದೆ. ಕುಟಿಲ ವಿಶ್ವಾಸಿಗಳಿಂದಲೂ ರಕ್ಷಣೆ ಪಡೆಯಬಹುದಾಗಿದೆ. ಅಲ್ಲಾಹನು ಈ ಪ್ರಾರ್ಥನೆ ಕಲಿಸಿ ಕೊಟ್ಟಿದ್ದಾನೆ. ಅದಕ್ಕೆ ಕಾರಣ ಆಕ್ರಮಣಕಾರರ ಆಕ್ರಮಣವಾದಾಗ ಅದು ಬಹಿರಂಗವಾಗಿರಲಿ, ಗೌಪ್ಯವಾಗಿರಲಿ ಆಗ ಆ ಸಮಯ ನೀವು ಅಲ್ಲಾಹನಿಗೆ ಶರಣು ಹೋಗಿರಿ. ಆ ಜನರು ಗೌಪ್ಯವಾಗಿದ್ದುಕೊಂಡು ವಿವಿಧ ವಿಧಾನಗಳಿಂದ ಸಂಶಯಗಳನ್ನು ಹುಟ್ಟಿಸಿ ಆಕ್ರಮಣ ಮಾಡುವರು. ಆ ಜನರು ದೊಡ್ಡ ನೇತಾರರಾಗಲಿ ನಾಮಧಾರಿ ಮತಪಂಡಿತರಾಗಲಿ ಅಥವಾ ಸಾಮಾನ್ಯ ಜನರಾಗಲಿ, ಅವರ ಹಿಂಬಾಲಕರಾಗಲಿ ಅವರ ಉಪದ್ರವಗಳಿಂದ ಕೇವಲ ಅಲ್ಲಾಹನ ಅಭಯ ಯಾಚಿಸಿಯೇ ರಕ್ಷಿಸಿಕೊಳ್ಳಬಹುದಾಗಿದೆ.

ಮತ್ತೆ ಈ ಶೈತಾನನ ಗುಣ ಹೊಂದಿದ ಜನರು ಸಾಮಾನ್ಯ ಮುಸ್ಲಿಮರ ಹೃದಯಗಳಲ್ಲಿ ಸಂಶಯಗಳನ್ನು ಮೂಡಿಸುತ್ತಾರೆ. ಅಹ್ಮದಿಯರು ಹೀಗೆ ಹೇಳುತ್ತಾರೆ. ಅಹ್ಮದಿಯರು ಹಾಗೆ ಹೇಳುತ್ತಾರೆ ಎಂದು ಮತ್ತು ಅಹ್ಮದಿಯರ ಕಲ್ಪನೆಯಲ್ಲಿಯೂ ಇಲ್ಲದಂತಹ ಮಾತುಗಳನ್ನು ಜನರಲ್ಲಿ ಪ್ರಚಾರ ಮಾಡುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳಿದರು. ಖನ್ನಾಸ್ ಎಂಬುದು ಶೈತಾನನ ಹೆಸರುಗಳಲ್ಲಿ ಒಂದು ಹೆಸರಾಗಿದೆ. ವಿವಿಧ ಸಂಶಯಗಳನ್ನು ಹುಟ್ಟಿಸಿ ಪ್ರಮಾದಗಳ ಮೂಲಕ ಕಾರ್ಯವೆಸಗುತ್ತಾನೆ.

(ತೊಹ್‌ಫ ಗೊಲಡ್‌ವಿಯ, ರೂಹಾನಿ ಖಝಾಯಿನ್, ಸಂಪುಟ–17, ಪುಟ–273 ಅಡಿ ಟಿಪ್ಪಣಿ) ಇಂದು ಆ ಜನರ ಇದೇ ಕೆಲಸವಾಗಿದೆ. ಇಸ್ಲಾಮಿನ ಶತ್ರುವಾದವರು ಇಸ್ಲಾಮಿನ ವಿರುದ್ಧ ಸಂಶಯಗಳನ್ನು ಮೂಡಿಸುತ್ತಿದ್ದಾರೆ. ಆ ಕಾರಣದಿಂದ ನಾವು ನೋಡುತ್ತಿದ್ದೇವೆ. ಲೋಕದಲ್ಲಿ ಮುಸ್ಲಿಮರ ಬಗ್ಗೆ ದ್ವೇಷವಿದೆ. ಮುಸ್ಲಿಮರ ನಡವಳಿಕೆಯ ಅಡಕದಂತಿದೆ. ಆ ಮಾತು ಬೇರೆ, ಅದೇ ಈ ನಾಮಧಾರಿ ಮತಪಂಡಿತರ ಕೆಲಸವಾಗಿದೆ. ಅವರು ಮಸೀಹ್ ಮೌಊದ್(ಅ) ರವರನ್ನು ತಿರಸ್ಕರಿಸಲು, ಜನಸಾಮಾನ್ಯರಿಗೆ ಅಹ್ಮದಿಯರ ವಿರುದ್ಧ ಉತ್ತೇಜಿಸಲು ವಿವಿಧ ಸಂಶಯಗಳನ್ನು ಮೂಡಿಸುತ್ತಾರೆ. ಅವರು ಇಸ್ಲಾಮ್ ಧರ್ಮವನ್ನು ನಂಬುವುದಿಲ್ಲ ಎಂದು. ನಊಝುಬಿಲ್ಲಾಹ್ ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ಹಝ್ರತ್ ರಸೂಲುಲ್ಲಾಹ್(ಸ) ರವರಿಗಿಂತ ಉನ್ನತರು ಎಂದು ನಂಬುತ್ತಾರೆ. ಅವರಿಗಿಂತ ಉನ್ನತ ಸ್ಥಾನ ನೀಡುತ್ತಾರೆ. ಖತಮೆ ನುಬುವ್ವತ್ ಮೇಲೆ ವೇಗ ಕಂಡು ಬರುತ್ತಿದೆ. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ನಮಗೆ ಅಲ್ಲಾಹನು ನುಡಿದಂತೆ “ನನ್ನ ಅಭಯವನ್ನು ಯಾಚಿಸಿರಿ” ಅದರಂತೆ ನಡೆದುಕೊಳ್ಳಬೇಕು. ಪ್ರಾರ್ಥಿಸಬೇಕು. ಅಲ್ಲಾಹನು ಅವರ ಉಪದ್ರವಗಳಿಂದ ರಕ್ಷಿಸುವಂತಾಗಲಿ ಈ ಕಾಲದ ಉಪದ್ರವಗಳಿಂದ ರಕ್ಷಣೆ ಪಡೆಯಲು ಏಕದೇವತ್ವದ ಮೇಲೆ ಸ್ಥಿರವಾಗಿದ್ದು ಅಲ್ಲಾಹನ ಅನುಗ್ರಹಗಳನ್ನು ಪಡೆಯಲು ಯಥೇಚ್ಛ ಪ್ರಾರ್ಥನೆಗಳ ಅವಶ್ಯಕತೆ ಇದೆ. ಅಲ್ಲಾಹನು ಎಲ್ಲಾ ಅಹ್ಮದಿಯರಿಗೂ ದಯಪಾಲಿಸುವಂತಾಗಲಿ.

ಈಗ ದುಆ ಮಾಡಿಸುವ ಮೊದಲು ಕೆಲ ಪ್ರಾರ್ಥನೆಗಳ (ದುಆ) ಬಗ್ಗೆ ಹೇಳುವೆನು. ನಮಗೆ ಈ ಮಾತುಗಳನ್ನು ತಮ್ಮ ಪ್ರಾರ್ಥನೆ ಸಮಯದಲ್ಲಿ ನೆನಪಿಸಬೇಕಾಗಿದೆ. ಪ್ರಪ್ರಥಮವಾಗಿ ನಾವು ದುಆ ದುರೂದ್ ಮೂಲಕ ಪ್ರಾರಂಬಿಸುತ್ತೇವೆ.

**ಸುಬ್‌ಹಾನಲ್ಲಾಹಿ ವ ಬಿಹಮ್‌ದಿಹಿ ವ ಸುಬ್‌ಹಾನಲ್ಲಾಹಿಲ್ ಅಝೀಮ್, ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್**

ಹಝ್ರತ್ ರಸೂಲುಲ್ಲಾಹ್(ಸ) ರವರ ವಂಶಕ್ಕಾಗಿ ಪ್ರಾರ್ಥಿಸಬೇಕು. ಮತ್ತು ಮುಸಲ್ಮಾನರು ಹಝ್ರತ್ ಮಸೀಹ್ ಮೌಊದ್(ಅ) ರವರ ಆಗಮನ ನಿಜವಾದ ಉದ್ದೇಶವನ್ನು ಅರಿಯುವಂತಾಬೇಕು ಮತ್ತು ಸ್ವೀಕರಿಸುವಂತಾಗಬೇಕು. ಎಲ್ಲಾ ಅಹ್ಮದಿಯರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಎಲ್ಲಾ ರೀತಿಯ ಉಪದ್ರವಗಳಿಂದ ರಕ್ಷಿಸುವಂತಾಗಲಿ. ಇಸ್ಲಾಮಿಕ್ ಲೋಕದ ಐಕ್ಯತೆ ಮತ್ತು ಪರಸ್ಪರ ಸೌಹಾರ್ದತೆಗಾಗಿ ಪ್ರಾರ್ಥಿಸಿರಿ. ಇದೀಗ ನಾನು ಹೇಳಿದಂತೆ ಅವರ ಒಡಕಿನಿಂದ ಶತ್ರುಗಳು ಲಾಭ ಪಡೆಯುತ್ತಿದ್ದಾರೆ. ಆದರೆ ಈ ಮಾತನ್ನು ಈ ಜನರು ಅರ್ಥ ಮಾಡಿಕೊಳ್ಳುತ್ತಿಲ್ಲ. ಅಲ್ಲಾಹನು ಅವರೊಡನೆ ವರ್ತಿಸುತ್ತಿರುವ ಪರಿ ನೋಡಿಯೇ ಅವನೆಡೆಗೆ ಮರಳುವ ಪ್ರಯತ್ನ ಮಾಡುತ್ತಿಲ್ಲ. ಅವರು ಅಲ್ಲಾಹನನ್ನು ಅರಿಯುವಂತಾಗಲಿ, ಅಲ್ಲಾಹನ ಮುಂದೆ ಶರಣು ಹೊಂದುವಂತಾಗಲಿ. ಕ್ಷಮೆಯನ್ನು ಯಾಚಿಸುತ್ತ ಅವರ ದಯೆ ಯಾಚಿಸುವಂತಾಗಲಿ.

ಜಮಾಅತ್ತಿನ ಜಾಗತಿಕ ವ್ಯವಸ್ಥೆ ಕುರಿತು ಎಲ್ಲ ಜಮಾಅತ್ ಬಾಂಧವರಿಗಾಗಿ, ಸ್ತ್ರೀಯರಿಗೆ, ಜಾಗತಿಕ ಜಮಾಅತ್‌ಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರೆಲ್ಲರನ್ನು ರಕ್ಷಿಸುವಂತಾಗಲಿ, ಎಲ್ಲ ಉಪದ್ರವಗಳಿಂದ ರಕ್ಷಿಸಲಿ, ಸ್ಥಿರತೆ ನೀಡುವಂತಾಗಲಿ, ಎಲ್ಲರೂ ಖಿಲಾಫತ್ ವ್ಯವಸ್ಥೆಯಿಂದ ಹೊಂದಿಕೊಂಡಿರುವಂತೆ ಮಾಡಲಿ. ಅದೇ ರೀತಿ ಜಮಾಅತಿನ ಅಧಿಕಾರಿಗಳಿದ್ದಾರೆ ಮತ್ತು ಸಾಮಾನ್ಯ ಅಹ್ಮದಿಯರಿದ್ದಾರೆ. ಅವರ ಬಳಿ ಜಮಾಅತಿನ ಯಾವ ಸೇವಾ ಕಾರ್ಯವಿಲ್ಲ. ಆದರೆ ಒಬ್ಬ ಅಹ್ಮದಿಯಾದ ನೆಲೆಯಲ್ಲಿ ಅವನು ಅಧಿಕಾರಿಗಳನ್ನು ಗೌರವಿಸುವವರಾಗಬೇಕು ಮತ್ತು ಅಧಿಕಾರಿಗಳು ಕೇವಲ ತನ್ನ ಅಧಿಕಾರಕ್ಕೆ ಅಂಟಿಕೊಂಡಿರುವವರಾಗಬಾರದು, ಬದಲು ನಿಜವಾದ ಅರ್ಥದಲ್ಲಿ ಅದರ ಹಕ್ಕುಗಳನ್ನು ಪಾಲಿಸುವವರಾಗಬೇಕು. ಈ ವರ್ಷ ಹೊಸ ಚುನಾವಣೆಗಳು ನಡೆಯಲಿವೆ. ವಿವಿಧ ಸ್ಥಳಗಳಲ್ಲಿ ಹೊಸ ಅಧಿಕಾರಿಗಳು ಬರಲಿದ್ದಾರೆ. ಅಲ್ಲಾಹನು ಎಂತಹ ಅಧಿಕಾರಿ ವರ್ಗವನ್ನು ನೀಡುವಂತಾಗಲಿ ಎಂದರೆ ಅವರು ನಿಜ ಅರ್ಥದಲ್ಲಿ ಅಲ್ಲಾಹನ ಭಯ ಹೊಂದಿದವರಾಗಬೇಕು. ನಿಷ್ಠೆಯಿಂದ ಕೆಲಸ ಮಾಡುವವರಾಗಬೇಕು ಮತ್ತು ಸೇವಾ ಮನೋಭಾವನೆಯಿಂದ ಎಲ್ಲಾ ಅಹ್ಮದಿಯರ ಹಕ್ಕುಗಳನ್ನು ಪಾಲಿಸುವವರಾಗಬೇಕು.

ದಜ್ಜಾಲ್ ಸಂಕಟಗಳ, ಉಪದ್ರವಗಳಿಂದ ರಕ್ಷಿಸಿಕೊಳ್ಳಲು ಪ್ರಾರ್ಥಿಸಿರಿ. ಅಲ್ಲಾಹನು ಅವರ ಸಂಚುಗಳಿಂದ ಮತ್ತು ಭಯಂಕರವಾದ ಯೋಜನೆಗಳಿಂದ ನಮ್ಮನ್ನು ರಕ್ಷಿಸಲಿ. ಅವರ ದುಷ್ಟ ಭಾವನೆಗಳಿಂದ ರಕ್ಷಿಸಲಿ. ಯುದ್ಧಗಳ ಅಪಾಯವು ಹೆಚ್ಚಾಗತೊಡಗಿದೆ. ಅಲ್ಲಾಹನು ಲೋಕಕ್ಕೆ ಸದ್ಬುದ್ಧಿ ನೀಡುವಂತಾಗಲಿ ಮತ್ತು ಬೃಹತ್ ಶಕ್ತಿಗಳು ಅವು ಕೇವಲ ತಮ್ಮ ಸ್ವಾರ್ಥ ಸಾಧನೆಗಳಿಗಾಗಿ ಲೋಕದ ಮೇಲೆ ಯುದ್ಧವನ್ನು ಹೇರುವ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಾಹನು ಅವರಿಗೆ ಸದ್ಬುದ್ಧಿ ನೀಡಲಿ ಮತ್ತು ಯುದ್ಧಗಳ ನಷ್ಟಗಳಿಂದ ರಕ್ಷಿಸಲಿ. ಇಸ್ಲಾಮಿನ ಪ್ರಚಾರ ಮತ್ತು ಅಹ್ಮದಿಯತ್‌ಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ನಮಗೆ ಹಝ್ರತ್ ಮಸೀಹ್ ಮೌವೂದ್(ಅ) ರವರ ಆಗಮನದ ಯಥಾರ್ಥ ಉದ್ದೇಶಗಳಿಂದ ಪ್ರಚಾರದ ಪರಿಪೂರ್ಣತೆ, ಮಾರ್ಗದರ್ಶನ ಅದರ ಹಕ್ಕುಗಳನ್ನು ಪಾಲಿಸುವ ಸಾಮರ್ಥ್ಯ ನಮಗೆ ನೀಡುವಂತಾಗಲಿ.

ಅಹ್ಮದಿ ಹುತಾತ್ಮರಿಗೋಸ್ಕರ ಪ್ರಾರ್ಥಿಸಿರಿ. ಅವರಿಂದ ಅಗಲಿ ಹೋದ ಕುಟುಂಬ ಸದಸ್ಯರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಸ್ವಯಂ ಅವರನ್ನು ರಕ್ಷಿಸುವಂತಾಗಲಿ ಮತ್ತು ಎಲಾ ಆತಂಕಗಳನ್ನು ದೂರ ಮಾಡಲಿ. ಅಸೀರಾನೆ ರಾಹ ಮೌಲಾ (ಅಲ್ಲಾಹನ ಮಾರ್ಗದಲ್ಲಿ ಬಂಧಿಯಾದವರು) ಬೇಗ ಬಿಡುಗಡೆ ಹೊಂದಲು ಪ್ರಾರ್ಥಿಸಿರಿ. ತಾತ್ಕಾಲಿಕವಾಗಿ ಅವರ ಆಶ್ರಯದಿಂದ ವಂಚಿತರಾದ ಅವರ ಕುಟುಂಬಸ್ಥರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರ ಸುಖಗಳನ್ನು ಅವರಿಗೆ ಮರಳಿಸುವಂತಾಗಲಿ, ಮತ್ತು ಅವರ ವಿಮುಕ್ತಿಗಾಗಿ ಯಾರು ವಿವಿಧ ಸಮಸ್ಯೆಗಳಿಗೆ ಗುರಿಯಾಗಿದ್ದರೆ ಅವರಿಗಾಗಿಯೂ ಪ್ರಾರ್ಥಿಸಿರಿ. ಅಲ್ಲಾಹನು ಅವರ ಸಮಸ್ಯೆಗಳನ್ನು ಪರಿಹರಿಸುವಂತಾಗಲಿ. ಪ್ರತಿನಿಧಿಗಳ ರೋಗಗಳಿಗೆ ತುತ್ತಾದವರ ಆರೋಗ್ಯಕ್ಕಾಗಿ ಪ್ರಾರ್ಥಿಸಿರಿ. ಆ ಜನರಿಗಾಗಿ ವಿವಿಧ ರೀತಿಯ ಅವರದ್ದೇ ಬುದ್ಧಿ ಶೂನ್ಯತೆಯಿಂದಾಗಿ ಅಥವ ಅನರ್ಹತೆಯ ಕಾರಣಗಳಿಂದಾಗಿ ಸಾಲಗಳ ಸುಳಿಯಲ್ಲಿ ಸಿಲುಕಿದವರಿಗಾಗಿಯೂ ಪ್ರಾರ್ಥಿಸಿರಿ. ಅಲ್ಲಾಹನು ಅವರ ಮೇಲೆಯೂ ದಯೆ ತೋರಲಿ ದಿನಾಲು ಈ ಕುರಿತು ಪತ್ರಗಳು ಬರುತ್ತಿರುತ್ತವೆ. ಅಲ್ಲಾಹನು ಅವರ ಸಂಕಟಗಳನ್ನು ದೂರ ಮಾಡಲಿ.

ಆಪತ್ತುಗಳಿಗೆ ಗುರಿಯಾದವರಿಗಾಗಿ ಅದು ರಾಜಕೀಯ ಹಿಂಸೆಗೆ ಗುರಿಯಾದವರಾಗಲಿ ಅಥವಾ ಧಾರ್ಮಿಕ ಹಿಂಸೆಗೆ ಗುರಿಯಾದವರಾಗಲಿ ಅಥವಾ ಸಾಮುದಾಯಿಕ ದ್ವೇಷಗಳ ಕುರಿತಾಗಲಿ, ಅವರೆಲ್ಲರಿಗಾಗಿಯೂ ಪ್ರಾರ್ಥಿಸಿರಿ. ಇತ್ತೀಚೆಗೆ ಅರಬ್ ದೇಶಗಳಲ್ಲಿಯೂ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯತ್ ಪ್ರಗತಿ ಪಥದಲ್ಲಿದೆ. ಅಲ್ಲಿಯೂ ಅವರನ್ನು ಧಾರ್ಮಿಕ ಹಿಂಸೆಗೆ ಗುರಿಪಡಿಸುತ್ತಿದ್ದಾರೆ ಮತ್ತು ಕೆಲವರು ಬಂಧನದ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅವರಿಗಾಗಿಯೂ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಅತಿ ಬೇಗ ಬಿಡುಗಡೆಯ ಮಾರ್ಗ ದೊರೆಯುವಂತೆ ಮಾಡಲಿ. ಜಾತಿ ಮತಭೇದವಿಲ್ಲದೆ ಆರ್ಥಿಕ ಸಂಕಷ್ಟಗಳಿಗೆ ಗುರಿಯಾದ ಮುಗ್ಧರಿಗೋಸ್ಕರವು ಪ್ರಾರ್ಥಿಸಿರಿ. ವಿವಿಧ ಪುರುಷ ಮಹಿಳೆಯರ ದಾಂಪತ್ಯ ಜೀವನ ಮತ್ತು ಕೌಟುಂಬಿಕ ಕಲಹಗಳ ನಿವಾರಣೆಗಾಗಿ ಪ್ರಾರ್ಥಿಸಿರಿ. ಅದರಲ್ಲಿಯೂ ಸಂಖ್ಯೆ ಹೆಚ್ಚುತ್ತಿದೆ. ಅಲ್ಲಾಹನು ಪುರುಷರಿಗೂ ಮಹಿಳೆಯರಿಗೂ ತಮ್ಮ ಮನೆಗಳನ್ನು ಸುಧಾರಿಸಿಕೊಳ್ಳುವ ಸದ್ಬುದ್ಧಿ ನೀಡುವಂತಾಗಲಿ. ವಿಧವೆಗಳ ಮತ್ತು ತಬ್ಬಲಿಗಳ ಹಕ್ಕುಗಳಿಗಾಗಿ ಮತ್ತು ತನ್ನ ಹಕ್ಕುಗಳಿಂದ ವಂಚಿತರಾದ ಜನರಿಗಾಗಿಯೂ ಪ್ರಾರ್ಥಿಸಿರಿ.

ವಿವಾಹ ಸಂಬಂಧದಲ್ಲಿ ತಡವಾಗುತ್ತಿರುವ ಹುಡುಗಿಯರಿಗಾಗಿಯೂ ಪ್ರಾರ್ಥಿಸಿರಿ. ಆ ಬಡವರಲ್ಲಿ ಅವರ ಹೆತ್ತವರು ಚಿಂತಿತರಾಗಿರುತ್ತಾರೆ. ಮಕ್ಕಳು ಇಲ್ಲದವರಿಗೆ, ವಿದ್ಯಾರ್ಥಿಗಳಿಗೆ ಪರೀಕ್ಷೆಯ ಕುರಿತು ಹಲವು ಜನರ ಪತ್ರಗಳು ಬರುತ್ತಿರುತ್ತವೆ. ಇಂದಿನದು ಪರೀಕ್ಷೆಯು ಸಮಯವಾಗಿದೆ. ನಿರುದ್ಯೋಗಿಯಾದವರಿಗಾಗಿ ಪ್ರಾರ್ಥಿಸಿರಿ. ಎಲ್ಲ ವ್ಯಾಪಾರಸ್ಥರಿಗಾಗಿ, ಕಾರ್ಮಿಕರಿಗಾಗಿ ಪ್ರಾರ್ಥಿಸಿರಿ. ಅದೇ ರೀತಿ ವಿವಿಧ ಉದ್ಯೋಗದಲ್ಲಿ ಜನರು ತೊಡಗಿಸಿಕೊಂಡಿದ್ದಾರೆ. ಕೃಷಿಕರಿಗಾಗಿಯೂ ಪ್ರಾರ್ಥಿಸಿರಿ. ವಿವಿಧ ಮೊಕದ್ದಮೆಗಳಲ್ಲಿ ಸಿಲುಕಿಕೊಂಡ ಜನರಿದ್ದಾರೆ ಅವರಿಗಾಗಿಯೂ ಪ್ರಾರ್ಥಿಸಿರಿ.

ಖಾದಿಯಾನ್ ದರವೇಶರಿಗಾಗಿ ಮತ್ತು ರಬ್ವಾದವರಿಗಾಗಿ ಪ್ರಾರ್ಥಿಸಿರಿ. ಅಲ್ಲಾಹನು ಅಲ್ಲಿಯೂ ಹೋಗಿ ಬರುವುದಕ್ಕೆ ಮಾರ್ಗಗಳು ತೆರೆಯುವಂತಾಗಲಿ, ಲಂಡನ್‌ನಿಂದ ಇಸ್ಲಾಮಾಬಾದ್ ಹಿಜರತ್ ಆದದ್ದಕ್ಕೆ ಮಸ್ಜಿದ್ ಫಝಲ್ ಅಕ್ಕಪಕ್ಕದಲ್ಲಿದ್ದವರು ಗೋಳಿಟ್ಟರು. ನಾವು ಪ್ರತ್ಯೇಕವಾದೆವು ಮೌನ ಆವರಿಸಿದೆ ತುಂಬ ದುಃಖವಾಗುತ್ತಿದೆ ಎಂದು ಹಾಗಾದರೆ ರಬ್ವಾದವರ ದುಃಖ ಏಕೆ ಗ್ರಹಿಸುತ್ತಿಲ್ಲ. ಅಲ್ಲಿಂದ ಪ್ರತ್ಯೇಕವಾಗಿ 35 ವರ್ಷಗಳೆ ಕಳೆದಿವೆ. ಅವರು ಈಗ ಪರಿಸ್ಥಿತಿಯ ಸರಿಯಾಗಬಹುದು. ಆಗ ಸರಿಯಾಗಬಹುದು ಎಂದು ಯೋಚಿಸುತ್ತ ಖಲೀಫರ ಮರಳುವಿಕೆಯನ್ನು ನಿರೀಕ್ಷಿಸುತ್ತಿದ್ದಾರೆ. ಅವರಿಗಾಗಿ ವಿಶೇಷವಾಗಿ ಪ್ರಾರ್ಥಿಸಿರಿ.

ಇಸ್ಲಾಮಿನ ಹೆಸರಿನಲ್ಲಿ ಹಿಂಸೆಗೆ ಒಳಗಾದವರಿಗಾಗಿ ಪ್ರಾರ್ಥಿಸಿರಿ. ಅವರಲ್ಲಿ ಮೊದಲನೆಯ ಸ್ಥಾನ ಜಮಾಅತ್ ಅಹ್ಮದಿಯಾದ ಜನರಿಗಿದೆ. ಆದರೂ ಇನ್ನಿತರ ಕ್ಷೇತ್ರಗಳಲ್ಲಿರುವ ಜನರಿಗಾಗಿಯೂ ಪ್ರಾರ್ಥಿಸಿರಿ. ಇಸ್ಲಾಮಿಕ್ ಜಗತ್ತಿಗಾಗಿ ನಾನು ಮೊದಲೇ ಹೇಳಿದ್ದೇನೆ. ಇಸ್ಲಾಮಿಕ್ ಜಗತ್ತು ಹಲವು ಸಮಸ್ಯೆಗಳಿಗೆ ತುತ್ತಾಗಿವೆ.. ದಜ್ಜಾಲಿನ ಆದಿಪತ್ಯಕ್ಕೆ ಒಳಗಾಗುತ್ತಿದ್ದಾರೆ. ಅವರಿಗಾಗಿ ಪ್ರಾರ್ಥಿಸಿರಿ. ಅಲ್ಲಾಹು ಅವರಿಗೆ ನೇರವಾದ ಮಾರ್ಗದಲ್ಲಿ ಸನ್ಮಾರ್ಗದಲ್ಲಿ ನಡೆಯುವ ಪ್ರಕಾಶ ದಯಪಾಲಿಸಲಿ. ಅದಲ್ಲದೇ ಮುಕ್ತಿಗೆ ಬೇರೆ ದಾರಿಯಿಲ್ಲ. ಮತ್ತು ಸಾಮಾನ್ಯ ರೂಪದಲ್ಲಿ ದುಃಖಿತರಿಗಾಗಿ ಪ್ರಾರ್ಥಿಸಿರಿ. ಜಮಾಅತಿನ ಪರೀಕ್ಷೆ ಕಾಲ ಕೊನೆಗೊಳ್ಳಲು ವಿಶೇಷವಾಗಿ ಪ್ರಾರ್ಥಿಸಿರಿ.

ತಹಿರೀಕ್ ಜಹೀದ್ ಮತ್ತು ವಕ್ಫೆ ಜದೀದ್ ಹಾಗೂ ಇನ್ನಿತರ ಸಾಂಪತ್ತಿಕ ತ್ಯಾಗ ಮಾಡುವ ನಿಷ್ಠರಿಗಾಗಿ ಪ್ರಾರ್ಥಿಸಿರಿ. ಪ್ರಯತ್ನಪಟ್ಟು ಚಂದ ನೀಡಿದವರ ಪಟ್ಟಿಗಳು ಬರುತ್ತಿವೆ. ಜಮಾಅತ್ತಿನ ಸೇವೆಯಲ್ಲಿ ತೊಡಗಿದ ಎಲ್ಲಾ ಕಾರ್ಯಕರ್ತರು, ಕಾರ್ಯಕರ್ತೆಯರಿಗಾಗಿ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ. M.T.A ಯ ಕಾರ್ಯಕರ್ತರು ಇಲ್ಲಿಯೂ ಮತ್ತು ಲೋಕದ ವಿವಿಧ ದೇಶಗಳಲ್ಲಿ ಹರಡಿಕೊಂಡಿದ್ದಾರೆ. ಅವರೆಲ್ಲರಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ. ಸತ್ಕರ್ಮಗಳಲ್ಲಿ ಸ್ಥಿರತೆ ನೀಡಿ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಭಾಗ್ಯ ನೀಡಲಿ. MTA ಆಫ್ರಿಕಾ ಮೊದಲು ಕೇವಲ MTA 3 ಅಲ್-ಅರಬಿಯಾಗಿತ್ತು ಈಗ ಆಫ್ರಿಕಾದಲ್ಲಿಯೂ ಘಾನಾದಲ್ಲಿ Studio ಚೆನ್ನಾಗಿ ಕೆಲಸ ಮಾಡುತ್ತಿದೆ. ಅದಲ್ಲದೆ ಬರ್ಕಿನಾಫಾಸುನಲ್ಲಿ ಈಗ ಪ್ರಾರಂಭವಾಗಿದೆ. ಮತ್ತು ಅಮೇರಿಕಾ, ಕೆನಡಾದಲ್ಲಿಯೂ ನಯವಾಗಿ ಸಂಘಟಿಸಲಾಗಿದೆ. ಇಂಡೋನೇಷಿಯಾದಲ್ಲಿಯೂ, ಜರ್ಮನಿಯಲ್ಲಿಯೂ ಹೊಸತಾಗಿ MTA ಕಾರ್ಯ ಪ್ರಾರಂಬಿಸಿದೆ. ಒಳ್ಳೆಯವರಿಗಾಗಿ ನಡೆಯುತ್ತಿದೆ. ಅವರೆಲ್ಲರಿಗೂ ಅಲ್ಲಾಹನು ತಮ್ಮ ತಮ್ಮ ದೇಶಗಳಲ್ಲಿ ಮತ್ತು ವಿವಿಧ ಭಾಷೆಗಳಲ್ಲಿ ನಿಜವಾದ ಇಸ್ಲಾಮಿನ ಸಂದೇಶವನ್ನು ತಲುಪಿಸುವ ಹಾಗೂ ಶೀಘ್ರ ಅತಿ ಶೀಘ್ರವಾಗಿ ಇಡೀ ಲೋಕವನ್ನು ಇಸ್ಲಾಮಿನೆಡೆ ಸೆಳೆಯುವ ಭಾಗ್ಯ ದಯಪಾಲಿಸಲಿ. ಅಲ್ಲಾಹನು ಅವರ ಪ್ರಯತ್ನಗಳನ್ನು ಅನುಗ್ರಹಿಸಲಿ.

ಲೋಕದ ಯಾವುದೇ ಕ್ಷೇತ್ರಗಳಲ್ಲಿ ಆದಷ್ಟು ವಿವಿಧ ಆಪತ್ತುಗಳಿಗೆ ಗುರಿಯಾದ ಜನರಿಗಾಗಿ ಪ್ರಾರ್ಥಿಸಿರಿ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸೊಲ್ಲಯತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವಅಲಾ ಮುಹಮ್ಮದಿನ್ ಕಮಾ ಬಾರಕ್‌ತ ಅಲಾ ಇಬ್ರಾಹೀಮ ವಅಲಾ ಇಬ್ರಾಹೀಮ ಇನ್ನಕ ಹಮೀದುಮ್ ಮಜೀದ್**

ಇಂದಿನ ಪರಿಸ್ಥಿತಿಗಳಲ್ಲಿ ಈ ಪ್ರಾರ್ಥನೆಯು ಹೆಚ್ಚಾಗಿ ಮಾಡುತ್ತಿರಿ.

**ಅಲ್ಲಾಹುಮ್ಮ ಇನ್ನಾ ನಜ್‌ಅಲೂಕ ಫೀ ಸುಹೂರಿಹಿಮ್ ವನೌಝುಬಿಕ ಮಿನ್ ಶುರೂರಿಹಿಮ್.** (ಸುನನ್ ಅಬೂದಾವೂದ್, ಕಿತಾಬುಲ್ ವಿತರ್, ಹದೀಸ್-1537)

ಓ ಅಲ್ಲಾಹನೇ! ನಾವು ನಿನಗೆ ಅವರ ಹೃದಯದಲ್ಲಿ ಒಪ್ಪಿಸುತ್ತೇವೆ. ನಿನ್ನ ಪ್ರತಾಪದಿಂದ ಅವರ ಹೃದಯಗಳು ತುಂಬಿರಲಿ ಮತ್ತು ನಾವು ಅವರ ಉಪದ್ರವಗಳಿಂದ ಸುರಕ್ಷಿತವಾಗುವೆವು.

ಮತ್ತೆ ಇದೊಂದು ಪ್ರಾರ್ಥನೆ ಇದೆ.

**ಲಾ ಇಲಾಹ ಇಲ್ಲಲ್ಲಾಹುಲ್ ಅಝೀಮುಲ್ ಹಲೀಮ್ ಲಾ ಇಲಾಹ ಇಲ್ಲಲ್ಲಾಹು ರಬ್ಬಿಲ್ ಅರ್‌ಅಶಿಲ್ ಅಝೀಮ್ ಲಾ ಇಲಾಹ ಇಲ್ಲಲ್ಲಾಹು ರಬ್ಬಿಸ್ಸಮಾವಾತಿ ವರಬ್ಬುಲ್ ಅರ್‌ಝಿ ವ ರಬ್ಬುಲ್ ಅರ್‌ಶಿಲ್ ಕರೀಮ್** (ಸಹೀಹ್ ಬುಖಾರಿ, ಕಿತಾಬುದ್ದಅವ. ಬಾಬು ದ್ದುಆ, ಇಂದಲ್‌ಕರ್‌ಬ್, ಹದೀಸ್-6346)

ಅಲ್ಲಾಹನ ಹೊರತು ಯಾರೂ ಆರಾಧ್ಯರಲ್ಲ. ಅವನು ಮಹಾ ಮಹಿಮನು ಮತ್ತು ಸಹನಶೀಲನೂ ಆಗಿದ್ದಾನೆ. ಅಲ್ಲಾಹನ ಹೊರತು ಯಾರೂ ಆರಾಧ್ಯರಿಲ್ಲ. ಅವನೇ ಆಕಾಶದ ಒಡೆಯನಾಗಿದ್ದಾನೆ. ಅಲ್ಲಾಹನ ಹೊರತು ಯಾರೂ ಆರಾಧ್ಯರಿಲ್ಲ, ಅವನೇ ಭೂಮಿ, ಆಕಾಶ ಮತ್ತು ಆಕಾಶಗಳ ಸೃಷ್ಟಿಕರ್ತನಾಗಿದ್ದಾನೆ. ಅಲ್ಲಾಹನು ನಮಗೆ ತನ್ನ ನಿಜವಾದ ಆರಾಧ್ಯನ ಆರಾಧನೆ ಮಾಡುವ ಭಾಗ್ಯ ದಯಪಾಲಿಸಲಿ.

ಮತ್ತೆ ಒಂದು ಪ್ರಾರ್ಥನೆ ಹಝ್ರತ್ ರಸೂಲುಲ್ಲಾಹ್

**ಅಲ್ಲಾಹುಮ್ಮ ಇನ್ನಿ ಅಸ್‌ಅಲುಕ ಹುಬ್ಬಕ ವ ಹುಬ್ಬ ಮನ್ ಯುಹಿಬ್ಬುಕ ವಲ್‌ಅಮಲಲ್ಲಝೀ ಯುಬಲ್ಲಿಗುನೀ ಹುಬ್ಬಕ ಅಲ್ಲಾಹುಮ್ಮಜ್‌ಅಲ್ ಹುಬ್ಬಕ ಅಹಬ್ಬ ಇಲೈಯ ಮಿನ್ ನಫ್‌ಸಿ ವ ಅಹ್‌ಲಿ ವಮಿನಲ್ ಮಾಇಲ್ ಬಾರಿದ್**

(ಸುನನ್ ತಿರ್‌ಮಿಝಿ, ಅಬ್ವಾಬುದ್ದಾವಾತ್, ಹದೀಸ್3490)

ಓ ನನ್ನ ಅಲ್ಲಾಹನೇ! ನಾನು ನಿನ್ನಿಂದ ನಿನ್ನ ಪ್ರೀತಿಯನ್ನು ಬಯಸುವನು ಮತ್ತು ನಿನ್ನನ್ನು ಪ್ರೀತಿಸುವ ಜನರ ಪ್ರೀತಿಯೂ ಮತ್ತು ನಿನ್ನ ಪ್ರೀತಿಯವರೆಗೆ ತಲುಪಿಸುವ ಕಾರ್ಯವಿಧಾನದ ಪ್ರೀತಿ, **ಓ ನನ್ನ ಅಲ್ಲಾಹನೇ!** ನಿನ್ನ ಸಂಪ್ರೀತಿ ನನ್ನ ಜೀವ, ನನ್ನ ಕುಟುಂಬ ಮತ್ತು ಶೀತಲ ಜಲಕ್ಕಿಂತ ಮಿಗಿಲಾದ ಸಂಪ್ರೀತಿ ನನಗೆ ದಯಪಾಲಿಸು.

ಹಝ್ರತ್ ರಸೂಲುಲ್ಲಾಹ್[ಸ] ರವರ ಮತ್ತೊಂದು ದುಆ ಹೀಗಿದೆ. **"ಯಾ ಮುಖಲ್ಲಿಬುಲ್ ಖುತೂಬ್ ಸಬ್ಬಿತ್ ಖಲ್‌ಬಿ ಅಲಾ ದೀನಿಕ"** (ಸುನನ್ ತಿರ್‌ಮಿಝಿ, ಅಬ್ವಾಬುಲ್ ಖದರ್, ಹದೀಸ್:2140)

ಓ ಹೃದಯಗಳನ್ನು ವಶಪಡಿಸಿಕೊಳ್ಳಬಲ್ಲನೇ! ನನ್ನ ಹೃದಯವನ್ನು ಧರ್ಮದ ಮೇಲೆ ದೃಢವಾಗಿ ನಿಲ್ಲುವಂತೆ ಮಾಡು.

ಹಝ್ರತ್ ರಸೂಲುಲ್ಲಾಹ್[ಸ] ರವರ ಮತ್ತೊಂದು ಪ್ರಾರ್ಥನೆ ಹೀಗೆ ಮಾಡುತ್ತಿದ್ದರು.

**ಅಲ್ಲಾಹುಮ, ಲಾ ತಖ್‌ತುಲ್ನಾ ಬಿಗಝುಬಿಕ ವಲಾ ತುಹ್‌ಲಿಕ್‌ನಾ ಬಿಅಝಾಬಿಕ ವ ಆಫಿನಾ ಖಬ್‌ಲ ಝಾಲಿಕ** (ಸುನನ್ ತಿರ್‌ಮಿಝಿ, ಅಬ್ವಾಬುದ್ದಾಅವಾತ್, ಹದೀಸ್-3450)

ಓ ಅಲ್ಲಾಹನೇ! ನಮಗೆ ನಿನ್ನ ಪ್ರಕೋಪದಿಂದ ಕೊಲ್ಲಬೇಡ, ತನ್ನ ಶಿಕ್ಷೆಯಿಂದ ನಮಗೆ ನಾಶಗೊಳಿಸಬೇಡ. ಅದಕ್ಕಿಂತ ಮೊದಲೇ ನಮ್ಮನ್ನು ರಕ್ಷಿಸು.

ಅವರ ಇನ್ನೊಂದು ದುಆ ಹೀಗಿದೆ.

**ಅಲ್ಲಾಹಿಮ್ಮ ಇನ್ನಿ ಅಊಝುಬಿಕ ಮಿನ್ ಝುವಾಲಿ ನಿಮತಿಕ ವತಹವ್ವುಲಿ ಆಫಿಯತಿಕ ವಫುಜಾಅತಿ ನಿಖ್‌ಮತಿಕ ವಜಮೀಇ ಸಖತಿಕ** (ಸಹೀಹ್ ಮುಸ್ಲಿಮ್, ಕಿತಾಬುರ್ರಿಫಾಖ್, ಹದೀಸ್-2739)

ಓ ಅಲ್ಲಾಹ್ ! ನಾನು ನಿನ್ನ ಅನುಗ್ರಹಗಳನ್ನು ವ್ಯರ್ಥಗೊಳ್ಳುವುದರಿಂದ, ನಿನ್ನ ಅಭಯ ವಂಚನೆಯಿಂದ, ನಿನ್ನ ತಕ್ಷಣದ ಶಿಕ್ಷೆಯಿಂದ ಹೀಗೆ ನೀನು ಅಸಂತುಷ್ಟನಾಗುವ ಎಲ್ಲ ಕಾರ್ಯಗಳಿಂದ ನಿನ್ನ ಅಭಯ ಯಾಚಿಸುತ್ತೇನೆ.

ಮತ್ತೆ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು. ಸದ್ಯ ಅದಮರ ಪ್ರಾರ್ಥನೆ ಹೆಚ್ಚು ಪಠಿಸಬೇಕಾಗಿದೆ. ಈ ಪ್ರಾರ್ಥನೆ ಮೊದಲೇ ಸ್ವೀಕೃತಗೊಂಡಿದೆ. ಅಂದರೆ ಈ ಸ್ವೀಕೃತಗೊಳ್ಳುವ ಪ್ರಾರ್ಥನೆಯು ಅಲ್ಲಾಹನೆ ಕಲಿಸಿಕೊಟ್ಟಿದ್ದನು.

**ರಬ್ಬನಾ ಝಲ್‌ಮ್ನಾ ಅನ್‌ಫುಸಿನಾ ವಿನ್‌ಲಮ್ ತಗ್‌ಫಿರ್‌ಲನಾ ವತರ್‌ಹಮ್‌ನಾ ಲನಕೂನನ್ನಾ ಮಿನಲ್ ಖಾಸಿರೀನ್. (ಅಲ್‌ಅರಾಫ್:24)**

"ಓ ನನ್ನ ಪ್ರಭೂ, ನಾನೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿಬಿಟ್ಟು ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿಯೂ ನಾವು ನಷ್ಟ ಹೊಂದಿದವರಾಗುವೆವು. (ಮಲ್ಫೂಝಾತ್ ಸಂಪುಟ-4, ಪುಟ-275)

ಮತ್ತೊಂದು ಪ್ರಾರ್ಥನೆ ಹಝ್ರತ್ ನವಾಬ್ ಮುಬಾರಕ್ ಬೇಗಂ ಸಾಹಿಬಾ[ರ] ಅವರು ಹಝ್ರತ್ ಮಸೀಹ್ ಮೌಊದ್[ಅ] ರವರ ನಿಧನಗೊಂಡ ನಂತರ ಸ್ವಪ್ನದಲ್ಲಿ ಕಂಡಿದ್ದರು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ. ನನ್ನ ಜಮಾಅತಿಗೆ ಈ ಪ್ರಾರ್ಥನೆಯ ಮೇಲೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಅವರಿಗೆ ಹೇಳಿ ಈ ಪ್ರಾರ್ಥನೆ ಮಾಡಲು.

**ರಬ್ಬನಾ ಲಾತುಝಿಖ್ ಖುಲೂಬನಾ ಬಅದ ಇಝ್‌ಹದೈತನಾ ವ ಹಬ್‌ಲನಾ ಮಿನ್‌ಲದುನ್‌ಕ ರಹ್‌ಮತನ್ ಇನ್ನಕ ಅನ್‌ತಲ್ ವಹಾಬ್.** (ಆಲಿ ಇಮ್ರಾನ್:09)

"ನಮ್ಮ ಪ್ರಭೂ, ನೀನು ನಮಗೆ ಮಾರ್ಗದರ್ಶನವನ್ನು ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರ ಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ತೆಹ್‌ರೀರಾತೆ ಮುಬಾರಕ, ಪುಟ-306, ಶೋಬ ಇಶಾಅತ್ ಲಜ್‌ನಾ ಇಮಾಅಲ್ಲಾಹ್ ಪಾಕಿಸ್ತಾನ್)

ವಿಶೇಷವಾಗಿ ಇಂದಿನ ಲೌಕಿಕ ಹಿಂಸಾಚಾರದಲ್ಲಿ ಬಿದ್ದು ಮನುಷ್ಯನು ಗೊಂದಲಕ್ಕೆ ಬೀಳಬಹುದಾಗಿದೆ. ಆದುದರಿಂದ ವಿಶೇಷವಾಗಿ ಈ ಪ್ರಾರ್ಥನೆ ಮಾಡುತ್ತಿರಬೇಕು.

ಮತ್ತೆ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು. ನಮ್ಮ ಜಮಾಅತ್ ಪ್ರತಿ ನಮಾಝಿನ ಅಂತಿಮ ರಕಾತಿನಲ್ಲಿ ರುಕು ಆದ ಬಳಿಕ ಈ ಪ್ರಾರ್ಥನೆ ಹೆಚ್ಚೆಚ್ಚು ಪಠಿಸಬೇಕು.

**ರಬ್ಬನಾ ಆತಿನಾ ಫಿದ್ದುನ್ಯಾಂ ಹಸತನ್ ವ ಫೀಲ್ ಆಖಿರತಿ ಹಸನತನ್ ವಖಿನಾ ಅಝಾಬನ್ನಾರ್.** (ಅಲ್‌ಬಖರ: 202)

ನಮ್ಮ ಪ್ರಭೂ, ನಮಗೆ ಇಹಲೋಕ ಜೀವನದಲ್ಲಿ ಒಳಿತನ್ನು ಅನುಗ್ರಹಿಸು. ಹಾಗೆಯೇ ಪರಲೋಕ ಜೀವನದಲ್ಲಿ ಸಹ ಒಳಿತನ್ನು ದಯಪಾಲಿಸು. ಮತ್ತು ನರಕಯಾತನೆಯಿಂದ ನಮ್ಮನ್ನು ರಕ್ಷಿಸು.

ಮತ್ತೆ ಅವರ ಕೆಲವು ಪ್ರಾರ್ಥನೆಗಳಿವೆ. ಅವುಗಳಲ್ಲಿ ಇದು ಒಂದಾಗಿದೆ. ಅದನ್ನು ಓದಬೇಕು.

**ರಬ್ಬನಾ ಇನ್ನನಾ ಸಮಿಅನಾ ಮುನಾದಿಐಂ ಯುನಾದಿಲಿಲ್ ಈಮಾನ್ ರಬ್ಬನಾ ಆಮನ್ನಾ ಫಕ್‌ತುಬ್‌ನಾ ಮಾಅಶ್ಯಾಹಿದೀನ್** (ತಝ್‌ಕಿರಹ್, ಪುಟ-197, ನಾಲ್ಕನೇ ಮುದ್ರಣ)

"ನಮ್ಮ ಪ್ರಭೂ, ಸತ್ಯವಿಶ್ವಾಸದೆಡೆಗೆ ಆಹ್ವಾನಿಸುವ, ಓರ್ವ ಉಪದೇಶಕನ ಕರೆಯನ್ನು ನಾವು ಆಲಿಸಬೇಕು. ಹಾಗೆ ನಾವು ಅದರಲ್ಲಿ ವಿಶ್ವಾಸವಿಟ್ಟಿದ್ದೇವೆ. ಸಾಕ್ಷ್ಯ ನೀಡುವವರೊಂದಿಗೆ ನಮ್ಮ ಹೆಸರನ್ನೂ ನೀನು ದಾಖಲಿಸು.

ಇನ್ನೊಂದು ದೈವವಾಣಿಕ ಪ್ರಾರ್ಥನೆ. ಅದರ ಅನುವಾದ ನಾನು ಓದಿಬಿಡುತ್ತೇನೆ. "ನಮ್ಮ ಪ್ರಭೂ! ನಮ್ಮನ್ನು ಕ್ಷಮಿಸು ಮತ್ತು ಆಕಾಶದಿಂದ ದಯೆ ತೋರು. ಓ ನನ್ನ ಪ್ರಭುವೆ, ನನ್ನನ್ನು ಒಬ್ಬಂಟಿಯನ್ನಾಗಿ ಬಿಡಬೇಡ.

ಅತ್ಯುತ್ತಮ ವಾರಸುದಾರ ನೀನಾಗಿದ್ದೀ. ಓ ನನ್ನ ಪ್ರಭುವೇ, ಮುಹಮ್ಮದೀಯ ಉಮ್ಮತನ್ನು (ಜನಾಂಗವನ್ನು) ಸುಧಾರಣೆಗೊಳಿಸು. ಓ ನನ್ನ ಪ್ರಭುವೆ, ನಮ್ಮ ಮತ್ತು ಅವರ ಮಧ್ಯೆ ನೀನು ನಿಖರವಾದ ತೀರ್ಮಾನ ಮಾಡು. ಖಂಡಿತವಾಗಿಯೂ ನೀನೇ ಅತ್ಯುತ್ತಮ ತೀರ್ಪುಗಾರನು.
(ತರ್ಝ್‌ಕಿರ,ಪುಟ– 196–199, ಮುದ್ರಣ–4)

ಮತ್ತೊಂದು ಅವರ ದೈವವಾಣಿಕ ಪ್ರಾರ್ಥನೆ ಅದರ ಅನುವಾದ ಮತ್ತು ಅರಬಿಯು ಓದುತ್ತೇನೆ.

**ಯಾರಬ್ಬಿ ಫಸ್‌ಮ ದುಆಈ ವ ಮಝ್ಝಿಕ್ ಆದಾಅಕ ವ ಆದಾಈ ವ ಅನ್ಝಿಝ್ ವಅದಕ ವನ್‌ಸುರ್ ಅಬ್‌ದಕ ವರಿನಾ ಅಯ್ಯಾಮಕ ವಶಹ್ಹಿರ್‌ಲನಾ ಹುಸಾಮಕ ವಲಾತಝುರ್ ಮಿನಲ್ ಕಾಫಿರೀನ ಶರೀರ.** (ತರ್ಝ್‌ಕಿರ, ಪುಟ–426, ಮುದ್ರಣ–4)

ಓ ನನ್ನ ಮಹಿಮವಂತನಾದ ಪ್ರಭೂ! ನನ್ನ ಪ್ರಾರ್ಥನೆಯನ್ನು ಆಲಿಸು ಮತ್ತು ನನ್ನ ಶತ್ರುಗಳನ್ನು ಛಿದ್ರ ಛಿದ್ರಗೊಳಿಸು ಮತ್ತು ತನ್ನ ವಾಗ್ದಾನವನ್ನು ಈಡೇರಿಸಿಕೊಡು ಮತ್ತು ನಿನ್ನ ದಾಸನಿಗೆ ಸಹಾಯ ನೀಡು. ನಮಗೆ ತನ್ನ ಶಿಕ್ಷೆಯ ದಿನಗಳನ್ನು ತೋರಿಸು, ನಿನ್ನ ಖಡ್ಗವನ್ನು ನಮಗಾಗಿ ಝಳಪಿಸಿ ತೋರಿಸು ಮತ್ತು ಅವಿಶ್ವಾಸಿಗಳಲ್ಲಿ ಯಾರನ್ನೂ ಬಿಡಬೇಡ.

ಮತ್ತೊಂದು ಅವರ ಪ್ರಾರ್ಥನೆಯಿದೆ.

ಓ ಸರ್ವ ಲೋಕಗಳ ಪರಿಪಾಲಕನೆ. ನಾನು ನಿನ್ನ ಉಪಕಾರಗಳಿಗೆ ಕೃತಜ್ಞತೆ ಸಲ್ಲಿಸಲು ಶಕ್ತನಲ್ಲ. ನೀನು ಅತ್ಯಂತ ಕಾರುಣ್ಯನಿಧಿಯೂ ಹಾಗೂ ದಯವಂತನೂ ನಿನ್ನ ಅಸಂಖ್ಯಾತ ಉಪಕಾರಗಳು ನನ್ನ ಮೇಲೆ ಇದೆ.

ನನ್ನ ಪಾಪಗಳನ್ನು ಕ್ಷಮಿಸು. ನನ್ನನ್ನು ತಳ್ಳಬೇಡ. ನನ್ನ ಹೃದಯದಲ್ಲಿ ನಿನ್ನ ಶುದ್ಧ ಸಂಪ್ರೀತಿಯನ್ನು ಹಾಕು. ಅದರಿಂದ ನನಗೆ ಹೊಸ ಜೀವನ ಲಭಿಸುವುದು. ನನ್ನ ಪಾಪಗಳನ್ನು ಕಡೆಗಣಿಸು. ನನಗೆ ನೀನು ರಾಜಿಯಾಗಿರುವಂತಹ ಕೆಲಸಗಳನ್ನು ಮಾಡಿಸು. ದಯವಂತನಾದ ನಿನ್ನಿಂದ ನಿನ್ನ ಪ್ರತಾಪದಿಂದ ಅಭಯ ಯಾಚಿಸುತ್ತೇನೆ. ಕರುಣೆದೋರು! ಕರುಣೆ ದೋರು! ಕರುಣೆ ದೋರು! ಇಹ ಪರ ಆಪತ್ತುಗಳಿಂದ ನನ್ನನ್ನು ರಕ್ಷಿಸು. ಏಕೆಂದರೆ ಎಲ್ಲ ಅನುಗ್ರಹಗಳು ಔದಾರ್ಯಗಳು ನಿನ್ನ ಕೈಯಲ್ಲಿದೆ. ಆಮೀನ್
(ಮಕ್‌ತೂಬಾತೆ ಅಹ್ಮದ್, ಸಂಪುಟ–2, ಪುಟ–159, ಮಕ್‌ತೂಬ್ ಬನಾಮ್ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹೆಬ್, ಮಕ್‌ತೂಬ್–3)

ಇನ್ನೊಂದು ಅವರ ಪ್ರಾರ್ಥನೆಯಿದೆ.

ಓ ನನ್ನ ಪ್ರಭೂ! ನನ್ನ ವ್ಯಥೆ ಕೇಳು. ನಾನು ಒಬ್ಬಂಟಿಯಾಗಿದ್ದೇನೆ. ಓ ನನ್ನ ಆಶ್ರಯದಾತನೇ! ಓ ನನ್ನ ಪುಷ್ಟಿ ನೀಡುವವನೇ! ನಾನು ನಿರಾಶ್ರಿತನಾಗಿದ್ದೇನೆ. ನನ್ನ ಕಡೆ ಗಮನ ಕೊಡು. ಓ ನನ್ನ ಪ್ರೀತಿ! ಓ ನನ್ನ ಪ್ರಿಯರಲ್ಲಿ ಅತ್ಯಧಿಕ ಪ್ರಿಯೆ! ನನ್ನನ್ನು ಒಬ್ಬಂಟಿಯನ್ನಾಗಿ ಬಿಡಬೇಡ. ನಾನು ನಿನ್ನ ಜೊತೆಯಲ್ಲಿದ್ದೇನೆ. ನಿನ್ನ ಸಂಸ್ಥಾನದಲ್ಲಿ ನನ್ನ ಆತ್ಮ ಸಾಷ್ಟಾಂಗ ವಹಿಸಿದೆ.
(ಸೀರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಯಾಖೂಬ್ ಅಲಿ ಇರ್‌ಫಾನಿ, ಭಾಗ–05, ಪುಟ–553)

ಬನ್ನಿ ಈಗ ಎಲ್ಲರೂ ಸೇರಿ ದುಆ ಮಾಡುವ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸವಂತಾಗಲಿ. **(ದುಆ)**

**(ಬಹಾವಾಲಾ ಅಖ್ಬಾರೆ ಬದರ್ ಉರ್ದು 30 ಏಪ್ರಿಲ್ 2020)**

---

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಭಾಷಣವನ್ನು ಕೇಳಿದ್ದೇನೆ. ಆಶ್ಚರ್ಯದ ವಿಷಯವೆಂದರೆ ಅವರು ಎಷ್ಟು ಶಾಂತ ರೀತಿಯಿಂದ ಮತ್ತು ಕ್ರಮಬದ್ಧವಾಗಿ ತಮ್ಮ ದೃಷ್ಟಿಕೋನವನ್ನು ಪ್ರಸ್ತುತಪಡಿಸುತ್ತಾರೆ. ಅವರು ಹೇಳಿದ ವಿಷಯಗಳಿಂದ ಹೆಚ್ಚಾಗಿ ನನಗೆ ಏನೂ ಮಾತಾಡಲು ಸಾಧ್ಯವಿಲ್ಲ.

- ಓರ್ವ ಮುಸ್ಲಿಮ್ ಮಹಿಳೆ ಹೇಳುತ್ತಾಳೆ. ಖಲೀಫರ ಪದಗಳು ತುಂಬ ಪ್ರಭಾವಶಾಲಿಯಾಗಿದ್ದವು. ಇಂದಿನ ಲೋಕದ ಸ್ಥಿತಿಗಳನ್ನು ನೋಡಿದರೆ ಅವರ ಮಾತುಗಳು ತುಂಬ ಮುಖ್ಯವಾಗಿವೆ. ಧರ್ಮದಿಂದ ಇಂದು ಪುನಃ ಶಾಂತಿ ಸ್ಥಾಪಿಸಬಹುದಾಗಿದೆ.

"ಮಸ್ಜಿದ್ ಮುಬಾರಕ್" ವೀಝ್‌ಬಾದಾನ್ ಉದ್ಘಾಟನಾ ಸಮಾರಂಭಕ್ಕೆ ಎಲೆಕ್ಟ್ರಾನಿಕ್ ಮತ್ತು ಪ್ರೆಂಚ್ ಮಾಧ್ಯಮಗಳು ತುಂಬ ಮಹತ್ವ ನೀಡಿವೆ. ಮೂರು ಟಿ. ವಿ. ಮಾಧ್ಯಮಗಳು, ಏಳು ಪತ್ರಿಕೆಗಳು ಮತ್ತು ಐದು ಆನ್‌ಲೈನ್ ಮಾಧ್ಯಮದವರೂ ಸುದ್ದಿ ಪ್ರಸಾರ ಮಾಡಿದ್ದಾರೆ. ಎಲೆಕ್ಟ್ರಾನಿಕ್ ಮತ್ತು ಪ್ರೆಂಚ್ ಮಾಧ್ಯಮಗಳಿಂದ 79,59,970 ಜನರಿಗೆ ಸಂದೇಶ ತಲುಪಿದೆ.

- Wesbademer Tugblutt ಅವರು ಸುದ್ದಿ ಮಾಡುತ್ತಾ ಬರೆದರು. "ಖಲೀಫ ಮಿರ್ಝಾ ಮಸ್ರೂರ್ ಅಹ್ಮದ್ ಹೇಳಿದರು. ನಗರದ ಜನರು ವಿಶಾಲ ಮನೋಭಾವನೆಯಿಂದ ವರ್ತಿಸಿದ್ದು, ಸದಾ ತುಂಬ ಭಯ ಹೊಂದಿದವರಾಗಿರುತ್ತಾರೆ. ಅದರೆ ಮಸೀದಿಗಳಲ್ಲಿ ಉಗ್ರವಾದ ಹರಡಿದರೂ ಅದಕ್ಕೆ ಕಾರಣ ಇಸ್ಲಾಮ್ ಅಲ್ಲ. ಮಾನವೀಯ ಮೌಲ್ಯಗಳನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ. ಪವಿತ್ರ ಖುರ್‌ಆನಿನಲ್ಲಿ ನೆರೆಹೊರೆಯವರ ಹಕ್ಕುಗಳ ವಿವರಗಳಿವೆ."
- "Sat-1 Regional" T. V channel ಎರಡು ನಿಮಿಷ 8 ಸೆಕೆಂಡ್‌ಗಳ ಸುದ್ದಿ ಮಾಡಿತು. ಅದರಲ್ಲಿ ವೀಝ್‌ಬಾದಾನ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹುಝೂರ್(ಅಬಿಅ) ಈ ಅಧ್ಯಾಪನೆ ಪ್ರಸ್ತುತಪಡಿಸಿದರು.ಈ ನಗರವಾಸಿಗಳು ತಮ್ಮ ಹೃದಯಗಳಲ್ಲಿ ಯಾವುದೇ ಭಯ ಹೊಂದುವ ಅಗತ್ಯವಿಲ್ಲ. ಏಕೆಂದರೆ ನಾವು ಒಂದು ಶಾಂತಿ ಬಯಸುವ ಜಮಾಅತ್ ಆಗಿರುವೆವು. ಆದುದರಿಂದ ನಾವು ಇಸ್ಲಾಮಿನ ವಾಸ್ತವ ಶಿಕ್ಷಣಗಳನ್ನು ಪಾಲಿಸುವವರಾಗಿದ್ದೇವೆ.

**15 ಅಕ್ಟೋಬರ್ 2019 (ಮಂಗಳವಾರ)**

ಹುಝೂರ್(ಅಬಿಅ) ಮುಂಜಾನೆ 6 ಗಂಟೆ 50 ನಿಮಿಷಕ್ಕೆ ಆಗಮಿಸಿ ಫಝ್ರ್ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿಯೆಡೆಗೆ ತೆರಳಿದರು. ನಂತರ ಕಚೇರಿಯ ಅಂಚೆಗಳನ್ನು, ವರದಿಗಳನ್ನು ಪರಿಶೀಲಿಸಿ ಕೆಲವು ನಿರ್ದೇಶನಗಳನ್ನು ನೀಡಿದರು.

**ಕೌಟುಂಬಿಕ ಭೇಟಿಗಳು:–**

ಕಾರ್ಯಕ್ರಮದನ್ವಯ 11 ಗಂಟೆಗೆ ಹುಝೂರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿ ಕೌಟುಂಬಿಕ ಭೇಟಿ ಪ್ರಾರಂಭಿಸಿದರು. ಮುಂಜಾನೆಯ ಈ ವಿಭಾಗದಲ್ಲಿ 19 ಕುಟುಂಬಗಳ 76 ಜನರು ಮತ್ತು ಇಬ್ಬರು ವೈಯುಕ್ತಿಕವಾಗಿ ಭೇಟಿಯಾಗುವ ಭಾಗ್ಯ ಪಡೆದರು. ಭೇಟಿಯಾದ ಈ ಕುಟುಂಬಗಳು ಜರ್ಮನಿಯ ವಿವಿಧ 17 ಜಮಾಅತ್ತುಗಳಿಂದ ಬಂದಿದ್ದರು. ಅದಲ್ಲದೇ ಪಾಕಿಸ್ತಾನದಿಂದ ಬಂದ ಒಬ್ಬ ಮಿತ್ರರೂ ಭೇಟಿಯಾಗುವ ಭಾಗ್ಯ ಪಡೆದರು. ಕೆಲವು ಕುಟುಂಬಗಳು ತಮ್ಮ ಪ್ರೀತಿಯ ನೇತಾರರನ್ನು ಭೇಟಿ ಮಾಡಲು ತುಂಬಾ ದೀರ್ಘವಾದ ಪ್ರಯಾಣ ಬೆಳೆಸಿ ಬಂದು ತಲುಪಿದ್ದರು. Putheim ಮತ್ತು Stuttgart ಯಿಂದ ಬಂದವರು 215 ಕಿ.ಮೀ. Freiburg ನಿಂದ 250 ಕಿ.ಮೀ Catw ನಿಂದ 285 ಕಿ.ಮೀ ಮತ್ತು ಮ್ಯುನಿಚ್ (Munchen) ನಿಂದ 405 ಕಿ.ಮೀ ದೂರ ಪ್ರಯಾಣಿಸಿ ಬಂದಿದ್ದರು.

ಅವರೆಲ್ಲರೂ ತಮ್ಮ ಪ್ರೀತಿಯ ನೇತಾರರೊಂದಿಗೆ ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಪ್ರೀತಿಯಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ (Pen) ನೀಡಿದರು. ಮತ್ತು ಸಣ್ಣ ಮಕ್ಕಳಿಗೆ ಚಾಕ್‌ಲೇಟ್ ನೀಡಿದರು. ಭೇಟಿಯ ಈ ಕಾರ್ಯಕ್ರಮವು 12 ಗಂಟೆ 45 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್(ಅಬಿಅ) ತಮ್ಮ ವಸತಿಯೆಡೆಗೆ ತೆರಳಿದರು.

**ಜಾಮಿಯಾ ಅಹ್ಮದಿಯಾ ಜರ್ಮನಿಗೆ ಆಗಮನ**

ಇಂದು ಕಾರ್ಯಕ್ರಮದನ್ವಯ ಜಾಮಿಯಾ ಅಹ್ಮದಿಯಾ ಜರ್ಮನಿಗೆ ತೆರಳಬೇಕಿತ್ತು. 1 ಗಂಟೆ 25 ನಿಮಿಷಕ್ಕೆ ಹುಝೂರ್(ಅಬಿಅ) ಜಾಮಿಯಾ ಅಹ್ಮದಿಯಾ ಜರ್ಮನಿಗೆ ತೆರಳಿದರು. ಜಾಮಿಯಾ ಅಹ್ಮದಿಯಾ ಜರ್ಮನಿ ಬೈತುಸ್ಸುಬೂಹ್‌ನಿಂದ ಸುಮಾರು 50 ಕಿ.ಮೀ ದೂರದ Riedstadt ನಗರದಲ್ಲಿ ಇದೆ. 2 ಗಂಟೆ 10 ನಿಮಿಷಕ್ಕೆ ಹುಝೂರ್(ಅಬಿಅ) ಜಾಮಿಯಾ ಅಹ್ಮದಿಯಕ್ಕೆ ಆಗಮಿಸಿದರು. ಮುಕರ್ರಮ್ ಶಂಶಾದ್ ಅಹ್ಮದ್ ಖಮರ್ ಪ್ರಾಂಶುಪಾಲರು ಜಾಮಿಯಾ ಅಹ್ಮದಿಯಾ ಜರ್ಮನಿ ತನ್ನ ಶಿಕ್ಷಕರೊಂದಿಗೆ ಮತ್ತು ವಿದ್ಯಾರ್ಥಿಗಳೊಂದಿಗೆ ಹುಝೂರ್(ಅಬಿಅ) ರಿಗೆ ಸ್ವಾಗತಿಸಿ ಶುಭ ಕೋರಿದರು. ಅನಂತರ ಹುಝೂರ್(ಅಬಿಅ) ಮಸ್ಜಿದ್ ಬೈತುಲ್ ಅಝೀಝ್‌ಗೆ ಆಗಮಿಸಿ ಝುಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ತಮ್ಮ ಪ್ರೀತಿಯ ಇಮಾಮರ ನೇತೃತ್ವದಲ್ಲಿ ನಮಾಝ್ ನಿರ್ವಹಿಸಲು ಸ್ಥಳೀಯ ಜಮಾಅತ್ Riedstadt ನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ನಮಾಝ್‌ಗಳ ನಿರ್ವಹಣೆಯ ನಂತರ ಹುಝೂರ್(ಅಬಿಅ) Hostel ಗೆ ಭೇಟಿ ನೀಡಿ ಒಂದು ಕೋಣೆಗೆ ತೆರಳಿ ಪರಿಶೀಲಿಸಿದರು. ಆ ಸಂದರ್ಭದಲ್ಲಿ ಪ್ರಾಂಶುಪಾಲರು ವಿವರಿಸುತ್ತಾ ಹೇಳಿದರು ಈ ಕೋಣೆಯಲ್ಲಿ 6 ವಿದ್ಯಾರ್ಥಿಗಳು ಇರುತ್ತಾರೆ. ಆದ್ದರಿಂದ ಕೋಣೆ ಇಕ್ಕಟಾಗುತ್ತದೆ. ಪ್ರತಿಯೊಬ್ಬನಿಗೆ ಪ್ರತ್ಯೇಕ ಕಪಾಟು ಮತ್ತು ಮೇಜು ಒದಗಿಸಲು ಆಗುತ್ತಿಲ್ಲ. Hostel ನ ಮೂರನೇ ಅಂತಸ್ತಿನ ಒಂದು ಭಾಗದ ನಿರ್ಮಾಣ ಕಾರ್ಯ ಪೂರ್ಣಗೊಂಡರೆ ಸ್ಥಳಾಭಾವ ದೂರವಾಗಬಹುದು.

ಆಗ ಹುಝೂರ್(ಅಬಿಅ) ಅಮೀರ್ ಸಾಹಿಬ್ ಜರ್ಮನಿಯವರನ್ನು ಉದ್ದೇಶಿಸಿ ಹೇಳಿದರು. ಇತರ ಜಾಮಾಅತ್ ಗಳಲ್ಲಿಯೂ ಸ್ಥಳಾಭಾವವಿದೆ. ಆದರೆ ವಿದ್ಯಾರ್ಥಿಗಳ ಸಂಖ್ಯೆ ವೃದ್ಧಿಯಾಗಬೇಕಾಗಿದೆ. ಆದುದರಿಂದ ನಿರ್ಮಾಣ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಗಮನ ನೀಡಬೇಕಾಗಿದೆ. Hostel (ವಸತಿಗೃಹ)

ಸ್ವಚ್ಛತೆಯ ಬಗ್ಗೆ ಕೇಳಿದಾಗ ಪ್ರಾಂಶುಪಾಲರು ಹೇಳಿದರು. ಸ್ವಚ್ಛತೆಯ ಕಾರ್ಯ ದಿನಿನಿತ್ಯ ನಡೆಯುತ್ತದೆ.

Hostel (ವಸತಿ ಗೃಹ) ವೀಕ್ಷಿಸಿದ ನಂತರ ಹುಝೂರ್(ಅಬಿಅ) ಅಡುಗೆ ತಯಾರು ಮಾಡುವ ಜಾಗಕ್ಕೆ ಆಗಮಿಸಿ ಅಡುಗೆಯ ವ್ಯವಸ್ಥೆ ಪರಿಶೀಲಿಸಿದರು. ಮಾರ್ಕಿಯನ್ನು ಸುಂದರವಾಗಿ ಶೃಂಗರಿಸಲಾಗಿತ್ತು. ಮಾರ್ಕಿಯ ಒಳಗೆ ವಿಶಿಷ್ಠ ರೀತಿಯಲ್ಲಿ ನಡೆದಾಡುವ ಎರಡೂ ಬದಿಗಳನ್ನು ಹೂವು ಮತ್ತು ಸಸ್ಯಗಳಿಂದ ಶೃಂಗರಿಸಲಾಗಿತ್ತು. ಅದೇ ರೀತಿ ಊಟದ ಮೇಜುಗಳ ಮುಂದೆ ಸಹ ಒಂದು ಸಣ್ಣ ರೀತಿಯ ಸಸ್ಯಗಳನ್ನು ಸುಂದರವಾಗಿ ಇಡಲಾಗಿತ್ತು. ಮಾರ್ಕಿನಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರೀತಿಯ ಖಲೀಫರ ದರ್ಶನ ಪಡೆಯುವ ರೀತಿಯಲ್ಲಿ ಕುಳಿತುಕೊಂಡಿದ್ದರು.

ಹುಝೂರ್(ಅಬಿಅ) ಮಾತುಕತೆಯ ನಡುವೆ ಪ್ರಾಂಶುಪಾಲರಿಗೆ ನಿರ್ದೇಶನ ನೀಡಿದರು. ವಿದ್ಯಾರ್ಥಿಗಳಿಗೆ Brown bread ನೀಡಿರಿ. White bread ಬಂದ್ ಮಾಡಿ ಅದು ಹಾನಿಕಾರಕವಾಗಿವೆ. ಅದೇ ರೀತಿ ಊಟದಲ್ಲಿ ಬಳಸುವ ಪದಾರ್ಥಗಳ ಬಗ್ಗೆ ಕೇಳಿದರು. ಬಝಾರಿನಲ್ಲಿ ಸಿಗುವ ಮಸಾಲಾ ಪಾಕೇಟುಗಳು ಯಾವ ಬ್ರಾಂಡ್‌ನದೇ ಆಗಿರಲಿ ಸರಿ ಇರುವುದಿಲ್ಲ. ಅವು ಆರೋಗ್ಯಕ್ಕೆ ಹಾನಿಕಾರಕವಾಗಿರುತ್ತದೆ. ತಮ್ಮ ಪದಾರ್ಥಗಳನ್ನು ತಾವೆ ಸ್ವಯಂ ಪುಡಿ ಮಾಡಿ ತಯಾರಿಸಬೇಕು.

ಉಪಹಾರದ ನಂತರ ಹುಝೂರ್(ಅಬಿಅ) ವಿದ್ಯಾರ್ಥಿಗಳಿಗೆ ಜಾಮಿಯಾ ಸಭಾಂಗಣಕ್ಕೆ ಹೋಗಲು ಅನುಮತಿ ನೀಡಿದರು. ಹುಝೂರ್ ಸಭಾಂಗಣಕ್ಕೆ ಪ್ರವೇಶಿಸುವ ಮೊದಲು ಪ್ರೀತಿಪೂರ್ವಕವಾಗಿ ಹಾರ್ಪಿಕ್ಯೂ ತಯಾರು ಮಾಡುವ ಒಬ್ಬ ಕಾರ್ಯಕರ್ತರ ಬಳಿಗೆ ತೆರಳಿ ಅವರಿಗೆ ಪ್ರೋತ್ಸಾಹ ನೀಡಿದರು. ಹಾಗೂ ಬಾರ್ಬಿಕ್ಯು ಮಾಡುವ ಕುರಿತು, ಮಸಾಲಗಳನ್ನು ತಯಾರು ಮಾಡುವ ವಿಧಾನಗಳ ಬಗ್ಗೆ ನಿರ್ದೇಶನ ನೀಡಿದರು.

**(ಮುಂದುವರಿಯುವುದು)**

## ಸದಖತುಲ್ ಫಿತರ್ ಪಾಲನೆ:

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ "ಫಿತ್ರಾನ" ಕೊಡಲು ಒಂದು ಸಾಹ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ "ಸದಖತುಲ್ ಫಿತರ್" ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋದಿ, ಅಕ್ಕಿ) ಯ ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳಿಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 55/– ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳಿಯ ಜಮಾಅತ್ತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತ್ತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತ್ತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ.

## ಈದ್ ಫಂಡ್

ಈ ಚಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲದಿಂದ ಖಾಯಮ್ ಆಗಿರುತ್ತದೆ. ಈ ಫಂಡಿನ ಉದ್ದೇಶವೇನಾಗಿತ್ತೆಂದರೆ ಸಂತೋಷದ ಸಮಯಗಳಲ್ಲಿ ಮನುಷ್ಯ ತನ್ನ ಸ್ವಯಂ ಸಂತೃಪ್ತಿಗಾಗಿ, ಬಟ್ಟೆಗಳಿಗಾಗಿ, ಊಟೋಪಚಾರ, ಅತಿಥಿ ಸತ್ಕಾರ ಇತ್ಯಾದಿ ಹಲವು ವಿಧಗಳ ವೆಚ್ಚ ಮಾಡುತ್ತಾನೆ. ಇತರರಿಗೂ ಉಡುಗೋರೆ ಇತ್ಯಾದಿಗಳನ್ನು ನೀಡುತ್ತಾನೆ ಅದೇ ರೀತಿ ಈ ಸುಸಂದರ್ಭದಲ್ಲಿ ಧರ್ಮ ಕಾರ್ಯಗಳ ಬಗ್ಗೆಯು ಗಮನವಿರಬೇಕು. ಅಹ್ಮದಿ ಸದಸ್ಯರು ಬೈಅತ್ ಮಾಡುವಾಗಲೇ ಈ ಕರಾರು ಒಪ್ಪಿರುತ್ತಾರೆ. ಧರ್ಮವನ್ನು ಲೋಕದ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು ಎಂದು. ಆದುದರಿಂದ ಪ್ರತಿ ಅಹ್ಮದಿಯರಿಂದ ನಿರೀಕ್ಷಿಸಲಾಗಿರುವುದು ಏನೆಂದರೆ ಅವರು ಸಂತೋಷ ಸಂಭ್ರಮದ ಹಬ್ಬಗಳಲ್ಲಿ ಧರ್ಮಕಾರ್ಯಗಳ ಬಗ್ಗೆಯು ಲಕ್ಷ್ಯವಹಿಸುವರು. ಈ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಕಾಲದಲ್ಲಿ ಈ ಖಾತೆಗೆ ಪ್ರತಿಯೊಬ್ಬ ಆದಾಯವುಳ್ಳ ಅಹ್ಮದಿ ಒಬ್ಬರಿಗೆ ಒಂದು ರೂಪಾಯಿಯಂತೆ "ಈದ್ ಫಂಡ್" ಕೊಡಬೇಕು. ಇಂದು ಒಂದು ರೂಪಾಯಿಯ ಬೆಲೆ ಏನು ಉಳಿಯಲಿಲ್ಲ, ಆದುದರಿಂದ ಒಂದು ರೂಪಾಯಿಗೆ ಸೀಮಿತ ಪಡಿಸದೆ ನಿಮ್ಮ ಸಾಮರ್ಥ್ಯನುಸಾರವಾಗಿ ಕೊಡಬಹುದಾಗಿದೆ. ಒಂದು ಸಲಹೆ ಏನೆಂದರೆ ಹಬ್ಬದ ದಿವಸ ಸಾಮಾನ್ಯವಾಗಿ ಮಾಡಬಹುದಾದ ಖರ್ಚುವೆಚ್ಚದ ಅರ್ಧ ಭಾಗವನ್ನು ಈ ಖಾತೆಯಲ್ಲಿ ನೀಡಬಹುದಾಗಿದೆ. ಇದು ಕೇಂದ್ರೀಯ ಚಂದವಾಗಿರುತ್ತದೆ. ವಸೂಲಾದ ಸಂಪೂರ್ಣ ಮೊತ್ತವನ್ನು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಯಲ್ಲಿ ಜಮಾ ಮಾಡುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಸ್ಥಳಿಯರಿಗೆ ಯಾವುದೇ ರೀತಿಯ ಖರ್ಚು ಮಾಡಲು ಅನುಮತಿ ಇರುವುದಿಲ್ಲ.

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

## ಝಕಾತ್ ನೀಡುವಿಕೆಯು ಒಂದು ಕಡ್ಡಾಯ ಕರ್ಮವಾಗಿದೆ

ಝಕಾತ್ ಇಸ್ಲಾಮಿನ ಐದು ಆಧಾರ ಸ್ತಂಬಗಳಲ್ಲಿ ಒಂದು ಮುಖ್ಯ ಸ್ತಂಬವಾಗಿದೆ ಮತ್ತು ನಿಗದಿತ ಪ್ರಮಾಣದಲ್ಲಿ ಅಹ್‌ಮದಿ ಮುಸಲ್ಮಾನರಿಗೆ ಇದೊಂದು ಕಡ್ಡಾಯ ಶರಯೀ ಕರ್ತವ್ಯವಾಗಿದೆ.

ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಝಕಾತಿನ ಪ್ರಾಮುಖ್ಯತೆಯ ಬಗ್ಗೆ ಹೀಗೆ ಹೇಳಿದ್ದಾರೆ:

"ನಾನು ಮತ್ತೊಮ್ಮೆ ನಿಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಯಾವ ರೀತಿ ನಮ್ಮ ನಬಿ ಕರೀಮ್(ಸ) ಅವರು ಝಕಾತ್ ಒಟ್ಟುಗೂಡಿಸಿ ವಿತರಿಸುವ ನಮೂನೆಯನ್ನು ಸ್ಥಾಪಿಸಿದ್ದರೋ, ಯಾವ ರೀತಿ ಅಲ್ಲಾಹನ ಪವಿತ್ರ ಗ್ರಂಥ ಅದರ ಕ್ರಮಗಳನ್ನು ವಿವರಿಸಿತ್ತೋ, ಅದೇ ರೀತಿ ನಮ್ಮ ಜಮಾಅತ್ ಇದನ್ನು ಒಟ್ಟುಗೂಡಿಸಿ ಬಳಕೆ ಮಾಡುವುದಿಲ್ಲವೋ, ಇಸ್ಲಾಮಿನ ನಾಲ್ಕು ತತ್ವಗಳಲ್ಲಿ ಒಂದು ಅಮೋಘವಾದ ವಾಸ್ತವ ತತ್ವದ ಮೇಲೆ ನಡೆದುಕೊಂಡಂತಾಗುವುದಿಲ್ಲ. ಯಾವ ರೀತಿ ನಮಾಝ್ ಕಡ್ಡಾಯವಾಗಿದೆಯೋ ಮತ್ತು ಮಸೀದಿಯಲ್ಲಿ ಜಮಾತ್ ಸಹಿತ ನಿರ್ವಹಿಸುವುದು ಕಡ್ಡಾಯವಾಗಿದೆಯೋ ಹಾಗೆ ಝಕಾತನ್ನು ಒಟ್ಟುಗೂಡಿಸಿ ವಿತರಣೆ ಮಾಡುವುದು ಮತ್ತು ಅದರ ಬಳಕೆ ಕಡ್ಡಾಯಗೊಳಿಸಲಾಗಿದೆ. ಯಾವ ರೀತಿ ನಮಾಝ್, ಉಪವಾಸ (ರೋಝ) ಮತ್ತು ಹಜ್ಜ್ ಯಾತ್ರೆ ಪಾಲಿಸುವುದು ಅವಶ್ಯಕವೆಂದು ಭಾವಿಸುತ್ತೀರಿರೋ ಅದೇರೀತಿ ಈ ಕರ್ತವ್ಯ ಪಾಲನೆಯು ಅವಶ್ಯವೆಂದು ಪರಿಗಣಿಸಬೇಕು." **(ಮಾಲಿ ನಿಝಾಮ್, ಭಾಗ–2, ಪುಟ–30)**

ಸಯ್ಯದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅ.ಬಿ.ಅ) ಅವರು ನುಡಿಯುತ್ತಾರೆ:

"ಝಕಾತ್ ಪ್ರಮುಖ ಮತ್ತು ಕಡ್ಡಾಯ ಕರ್ಮ ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ. ಆದ್ದರಿಂದ ಯಾರ ಮೇಲೆ ಝಕಾತ್ ಕಡ್ಡಾಯವಾಗಿರುತ್ತದೆಯೋ ಅವರಿಗೆ ಝಕಾತ್ ನೀಡುವುದು ಅನಿವಾರ್ಯವಾಗಿದೆ ಎಂಬ ವಿಷಯವನ್ನು ಗಮನಕ್ಕೆ ತರುತ್ತಿದ್ದೇನೆ. ಅವರು ಅವಶ್ಯವಾಗಿ ಝಕಾತ್ ನೀಡಬೇಕು, ವಿಶೇಶವಾಗಿ ಮಹಿಳೆಯರು ಆಭರಣಗಳನ್ನು ಹೊಂದಿರುತ್ತಾರೆ. ಆ ಆಭರಣಗಳ ಝಕಾತ್ ಕೊಡುವುದು ಕಡ್ಡಾಯವಾಗಿದೆ." **(ಖುತ್‌ಬ ಜುಮುಅ 13–04–2007)**

ಭಾರತದ ಎಲ್ಲಾ ಅರ್ಹರಾದ ಪುರುಷರು ಮತ್ತು ಮಹಿಳೆಯರು ನಿಗದಿತ ಪ್ರಮಾಣದಲ್ಲಿ ಈ ಪ್ರಮುಖ ಕಡ್ಡಾಯ ಝಕಾತನ್ನು ನೀಡುವ ಕಡೆ ಗಮನ ವಹಿಸಬೇಕಾಗಿದೆ. ಅಲ್ಲಾಹನು ನಮಗೆಲ್ಲರಿಗೂ ಈ ಭಾಗ್ಯ ನೀಡುವಂತಾಗಲಿ. ಆಮೀನ್

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

**Love For All, Hatred For None**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 14 May 2020 Issue No. 18

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)

**(ಬದರ್ ಸಂಚಿಕೆ 17ರ ವರದಿಯ ಉಳಿದ ಭಾಗ)**

- ಶಿಕ್ಷಕರಾದ Uwe widura ಸಾಹಿಬ್ ಅವರು ಹೇಳಿದರು. ನನಗೆ ಇಲ್ಲಿ ಮೊದಲ ಬಾರಿಗೆ ಅಹ್ಮದಿಯಾ ಜಮಾಅತಿನ ಪರಿಚಯ ದೊರೆತಿದೆ. ಸಮಾರಂಭದ ಎಲ್ಲ ವ್ಯವಸ್ಥೆ ಚೆನ್ನಾಗಿದ್ದವು. ವಿಶೇಷವಾಗಿ ಖಲೀಫರ ಬಾಷಣ ತುಂಬಾ ಆಸಕ್ತಿದಾಯಕವಾಗಿತ್ತು. ನನಗೆ ಅವರ ಈ ವಿಷಯ ಬಹುಮುಖ್ಯ ಎನಿಸಿತು. ಅದು ಸಮಾನತೆಗೆ ಹೆಚ್ಚು ಒತ್ತು ನೀಡಬೇಕು. ಇತರ ಧರ್ಮಗಳ ಜನರಿಗೆ ಹಾಗೆಯೇ ಎಲ್ಲ ಮನುಷ್ಯರೊಡನೆ ಪ್ರೀತಿಯಿಂದ ವ್ಯವಹರಿಸಬೇಕು. ಇಂದು ಸಮಾಜ ಇವುಗಳ ಕೊರತೆ ಅನುಭವಿಸುತ್ತಿದೆ. ಇತರ ಧರ್ಮೀಯರು ಈ ವಿಷಯವನ್ನು ಕಡೆಗಾಣಿಸುತ್ತಿದ್ದಾರೆ. ಆದರೆ ನೀವು ಇದಕ್ಕೆ ಪ್ರಾಮುಖ್ಯತೆ ನೀಡುತ್ತಿದ್ದೀರಿ. ನಿಮ್ಮ ಮಸೀದಿಗೆ ಅವಶ್ಯವಾಗಿ ಬರುತ್ತೇನೆ ಮತ್ತು ನನ್ನ ಪ್ರಶ್ನೆಗಳನ್ನು ಕೇಳಿ ಅದರ ಪರಿಹಾರ ಪಡೆದು ಕೊಳ್ಳಬೇಕಾಗಿದೆ.

ಅವರು ಮುಂದುವರೆದು ಹುಝೂರ್(ಅಬಅ) ರ ಭಾಷಣದ ಕುರಿತು ಹೇಳಿದರು. his holiness ಅವರ ಭಾಷಣ ತುಂಬ ಚೆನ್ನಾಗಿತ್ತು. ಇದು ಲೋಕದ ಎಲ್ಲಾ ಸಮಾಜಕ್ಕೂ ಅನಿವಾರ್ಯವಾಗಿದೆ. ಖಲೀಫರು ಹೇಳಿದಂತಹ ಮಾತುಗಳು ಇಂದು ಇತರೆ ಧರ್ಮದವರೂ ಮರೆಯುತ್ತಿದ್ದಾರೆ. ಈ ವಿಷಯಗಳ ಮೇಲೆ ನಡೆಯುವವರಾದರೆ ಲೋಕದಲ್ಲಿ ಯುದ್ಧಗಳ ಭಯವೇ ಅಂತ್ಯವಾಗುವುದು.

- Heka Ebel ಸಾಹಿಬಾ ವೀರ್ಝ್‌ಬಾದಾನ್ ಶಾಲೆಯಲ್ಲಿ ಶಿಕ್ಷಕಿಯಾಗಿದ್ದಾರೆ. ಅವರು ಹೇಳಿದರು. ನನಗೆ ಅನಿಸಿದ ಒಂದು ಅತಿ ಮುಖ್ಯ ವಿಷಯ **"ಇಲ್ಲಿ ಕೇವಲ ಶಾಂತಿ, ಪ್ರೀತಿ ಮತ್ತು ಸ್ನೇಹದ ವಿಷಯಗಳು ಹೇಳುವುದರೊಂದಿಗೆ ಅದರಂತೆ ನಡೆದುಕೊಳ್ಳುತ್ತಿದ್ದಾರೆ"** ಎಂಬುದಾಗಿತ್ತು. ನೀವು ಸೌಹಾರ್ದತೆ (Integration) ಯ ಅರ್ಥ ಚೆನ್ನಾಗಿ ಅರಿತವರಾಗಿದ್ದೀರಿ. ಇದರ ಒಳ್ಳೆಯ ಉದಾಹರಣೆ ಪ್ರಸ್ತುತಪಡಿಸುತ್ತಿದ್ದೀರಿ. ಖಲೀಫರು ನಿಜವಾಗಿಯೂ ನನಗೆ **holy (ಪವಿತ್ರರು)** ಎಂದು ಅನಿಸಿದೆ ಮತ್ತು ಓರ್ವ ನೈಜ ಧಾರ್ಮಿಕ ನೇತಾರರಾಗಿರುವರು. ಖಲೀಫರು ನನ್ನೊಳಗೆ ಒಂದು ಪರಿವರ್ತನೆಯನ್ನುಂಟು ಮಾಡಿದ್ದಾರೆ. ಅದಕ್ಕೆ ಅವರ ಪರಿಶುದ್ಧತೆಯೇ ಕಾರಣ. ಅವರ ಹೃದಯದಿಂದ ಒಂದು ಪ್ರಕಾಶ ಪ್ರಜ್ವಲಿಸುವಂತೆ ಭಾಸವಾಗುತ್ತದೆ. ಅದು ಪ್ರತಿಯೊಬ್ಬರಿಗೆ ಆಕರ್ಷಿಸುವಂತಿದೆ. ಖಲೀಫರು ಓರ್ವ ನಿಜವಾದ ಆಧ್ಯಾತ್ಮಿಕ ವ್ಯಕ್ತಿತ್ವವುಳ್ಳವರಾಗಿದ್ದಾರೆ. ನಾನು ಅವರ ಪವಿತ್ರ ಶಕ್ತಿಯನ್ನು ಮನ್ನಿಸುತ್ತೇನೆ.
- ಓರ್ವ ಮಹಿಳೆ ಹೇಳಿದರು. ನಾನು ಅಹ್ಮದಿಯಾ ಜಮಾಅತನ್ನು 10 ವರ್ಷಗಳ ಹಿಂದಿನಿಂದಲೂ ತಿಳಿದವಳಾಗಿದ್ದೇನೆ. ನೀವು ತುಂಬ ಪ್ರೀತಿಸುವ ಜನರಾಗಿದ್ದೀರಿ. ಖಲೀಫರನ್ನು ಮೊದಲ ಬಾರಿ ಬೇಟಿಯಾಗುವ ಸಂದರ್ಭ ಒದಗಿ ಬಂದಿದೆ. ಅವರಿಂದ ಸ್ಪಷ್ಟವಾದ ವಿಷಯ ಏನೆಂದರೆ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಇಂತಹ ಯೋಚನೆವುಳ್ಳವನಾಗಿದ್ದರೆ ಲೋಕದಲ್ಲಿ ಶಾಂತಿಸ್ಥಾಪನೆಗೆ ಸಾಧ್ಯ.
- ಕೆಥೋಲಿಕ್ ಚರ್ಚಿನ ಓರ್ವ ಸದಸ್ಯರು ಹೇಳುತ್ತಾರೆ. ಇದು ಪ್ರೀತಿ ಮತ್ತು ಸ್ನೇಹದ ಚಿತ್ರಣವಾಗಿದೆ. ನಾನು ಇದಕ್ಕಿಂತ ಮುಂಚೆ ಎಂದೂ ಯಾವುದೆ ಧಾರ್ಮಿಕ ಮುಖಂಡರಲ್ಲಿ ತನ್ನ ನೆರೆಹೊರೆಯವರ ಬಗ್ಗೆ ಈ ರೀತಿಯ ವಿವರಣೆ ಕೇಳಿರಲಿಲ್ಲ.
- Klaus Bartel ಸಾಹಿಬ ಹೇಳಿದರು. ಶಾಂತಿ ಸ್ಥಾಪಿಸಲು ಇರುವ ಅತ್ಯಂತ ಪ್ರಮುಖವಾದ ವಿಷಯ ಖಲೀಫರು ಹೇಳಿದಂತೆ ಮೌಲ್ಯಗಳನ್ನು ಎತ್ತಿಹಿಡಿಯುವುದಾಗಿದೆ. ನನಗೆ ಇಸ್ಲಾಮಿನಲ್ಲಿ ಬಹಳಷ್ಟು ಪಂಗಡಗಳಿವೆ ಎಂಬ ವಿಷಯ ಗೊತ್ತಿತ್ತು. ಆದರೆ ಈ ಜಮಾಅತ್ ಅಷ್ಟೊಂದು ಶಾಂತಿ ಬಯಸುವ ಜಮಾಅತ್ ಆಗಿದೆ ಎಂದು ಗೊತ್ತಿರಲಿಲ್ಲ.
- Muktari ಸಹಿಬ್ ವೀರ್ಝ್‌ಬಾದಾನಿನ ಪೋಲೀಸ್ ವಿಭಾಗದಲ್ಲಿ ಸೇವೆ ಸಲ್ಲಿಸುವವರಾಗಿದ್ದಾರೆ. ಅವರು ಹೇಳಿದರು. ಇಂದಿನ ಈ ಕಾರ್ಯಕ್ರಮದಿಂದ ಒಂದಂತೂ ಸ್ಪಷ್ಟವಾಗಿದೆ. ಮುಸ್ಲಿಮರು ತಮ್ಮ ಇನ್ನೊಂದು ಚಿತ್ರಣ ಪ್ರದರ್ಶಿಸಬಯಸುತ್ತಾರೆ. ಅದೇನೆಂದರೆ ಇಸ್ಲಾಂ ನಿಜವಾಗಿಯೂ ಒಂದು ಶಾಂತಿ ಪ್ರಿಯ ಧರ್ಮವಾಗಿದೆ. ಖಲೀಫರು ಹೇಳಿದಂತೆ ತಾವು ಆಫ್ರಿಕಾದಲ್ಲಿಯೂ ವಿವಿಧ ಯೋಜನೆಗಳನ್ನು ಹಾಕಿಕೊಂಡಿದ್ದೀರ ಎಂಬುದು ನನಗೆ ತುಂಬ ಮೆಚ್ಚುಗೆಯಾಯಿತು.
- Mehmet yimaz ಸಾಹಿಬ್ ಹೇಳಿದರು. ಖಲೀಫರ ಈ ಸಂದೇಶ ಪರಸ್ಪರ ವಿಶೇಷವಾಗಿ ನೆರೆಹೊರೆಯರೊಡನೆ ಪ್ರೀತಿಯಿಂದ ವರ್ತಿಸಬೇಕು ಎಂಬುದು ಅತ್ಯಂತ ಅನಿವಾರ್ಯವಾಗಿದೆ. ಖಲೀಫರನ್ನು ನಾನು ಮೊದಲಿನಿಂದಲೂ ಬಲ್ಲವನಾಗಿದ್ದೇನೆ. ಏಕೆಂದರೆ ಮೊದಲು ಅವರ ಗ್ರಂಥಗಳನ್ನು ಓದಿರುತ್ತೇನೆ. ನಾನು ಬಯಸುವುದೇನೆಂದರೆ ಖಲೀಫರ ಹಾಗೆ ಇತರ ಮುಸ್ಲಿಮ್ ನೇತಾರರು ಸಹ ಅದೇ ರೀತಿ ಶಾಂತಿ ಬಯಸುವವರಾಗಬೇಕು.
- ಒಬ್ಬ evangelical theology professor ಹೇಳುತ್ತಾರೆ. ಖಲೀಫರ ಭಾಷಣ ಕೇಳಿ ತುಂಬ ಆಶ್ಚರ್ಯವಾಯಿತು. ನನಗೆ ಇಸ್ಲಾಮಿನ ಇಂತಹದೊಂದು ಪ್ರತಿನಿಧಿಯನ್ನು ಕಂಡು ಅತ್ಯಂತ ಹರ್ಷವಾಗಿದೆ. ಅವರು ಎಷ್ಟೊಂದು ಪ್ರೀತಿ ಸ್ನೇಹದ ಶಿಕ್ಷಣವನ್ನು ಪಸರಿಸುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮಾನವೀಯತೆ ಜೊತೆ ಪ್ರೀತಿಯಿಂದ ವ್ಯವಹರಿಸುವುದು ಆರಾಧನೆಯಾಗಿದೆ.
- Gabriela stochhlter Eiche ಸಾಹಿಬಾ ಹೇಳಿದರು. ಇಂದಿನ ಸಮಾರಂಭವು ನನಗೆ ತುಂಬ ಹಿತವೆನಿಸಿತು. ಖಲೀಫರ ಭಾಷಣ ಅತ್ಯಂತ ಹೃದಯ ಸ್ಪರ್ಶಿಯಾಗಿತ್ತು. ವಿಶೇಷವಾಗಿ ಇಂದು ಸಮಾಜಕ್ಕೆ ಬೇಕಾಗುವ ವಿಷಯಗಳ ಕುರಿತು ಸ್ಪಷ್ಟನೆ ಅಂದರೆ, ಶಾಂತಿ ಸ್ಥಾಪನೆ, ಸೌಹಾರ್ದತೆ, ನೆರೆಹೊರೆಯವರೊಡನೆ ಉತ್ತಮ ಸಂಬಂಧ. ಬಡವರಿಗೆ ಸಹಾಯ ನೀಡುವುದು, (ಉದಾಹರಣೆಗೆ, ಆಫ್ರಿಕಾದಲ್ಲಿ ಬಾವಿ ತೋಡುತ್ತಿದ್ದಾರೆ) ಇತ್ಯಾದಿ, ನನಗಂತೂ ಖಲೀಫರು ಅತ್ಯಂತ ಶಾಂತಿಪ್ರಿಯರು ಹಾಗೂ ಪ್ರೀತಿ ಸ್ನೇಹ ಬಯಸುವ ವ್ಯಕ್ತಿಯಾಗಿ ಕಾಣುತ್ತಿದ್ದಾರೆ.
- Thomas schewze ಸಾಹಿಬ್ ಅವರು ಒಂದು ಶಾಲೆಯ ಪ್ರಾಂಶುಪಾಲರಾಗಿದ್ದಾರೆ. ಅವರು ಹೇಳುತ್ತಾರೆ. ಇಂದಿನ ಸಮಾರಂಭ ಒಂದು ಅದ್ಭುತ ಸಮಾರಂಭವಾಗಿತ್ತು. ಪ್ರತಿಯೊಬ್ಬರೂ ಇಲ್ಲಿ ಪ್ರೀತಿಯಿಂದ ವ್ಯಹರಿಸುತ್ತಿದ್ದಾರೆ. ಮತ್ತು ನಮಗೆ ಅತಿಥಿ ಸತ್ಕಾರವನ್ನು ನೀಡುತ್ತಿದ್ದಾರೆ. ನಾನು his holiness ನಂತಹ ವ್ಯಕ್ತಿತ್ವವುಳ್ಳವರೊಂದಿಗೆ ಭೇಟಿಯಾಗುವೆನು ಎಂದು ಊಹಿಸಿಯೂ ಇರಲಿಲ್ಲ. ಅವರು ಪ್ರತಿಯೊಂದು ಮಾತು ಅರಿತು ಮತನಾಡುವವರಾಗಿದ್ದಾರೆ. ಅವರ ಮಾತುಗಳು ಜನರ ಮೇಲೆ ಪ್ರಭಾವ ಬೀರುವಂತಿರುತ್ತವೆ.
- Giane warner ಸಾಹಿಬಾ ಹೇಳಿದರು. ಇಂದು ಮಸೀದಿಯ ಉದ್ಘಾಟನಾ ಸಮಾರಂಭವು ತುಂಬಾ ಚೆನ್ನಾಗಿತ್ತು. ಖಲೀಫರು ತುಂಬ ಪ್ರೀತಿಸುವವರಾಗಿದ್ದಾರೆ. ಅವರು ಹೇಳಿದ ಮಾತುಗಳ ಎಲ್ಲಾ ಪದವು ಸರಿಯಾಗಿದೆ. ಆದರ ಮೇಲೆ ನಾವು ವಿಶ್ವಾಸ ಹೊಂದಬಹುದಾಗಿದೆ.
- Wolfgeng Nickal ಸಾಹಿಬ್ ವೀರ್ಝ್‌ಬಾಪಾನ್ ನಗರದ ಸಂಸದ್ ಸದಸ್ಯರಾಗಿದ್ದಾರೆ. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನನಗೆ ನಿಮ್ಮ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂದರ್ಭ ಲಭಿಸಿದೆ. ಅಡಿಗಲ್ಲು ಸಂದರ್ಭದಲ್ಲಿಯೂ ಭಾಗವಹಿಸಿದ್ದೆ. ನಾನು ಖಲೀಫರನ್ನು ಬಹಳ ಗಮನಕೊಟ್ಟು ನೋಡಿದ್ದೇನೆ. ಮತ್ತು ಅವರ

*(ಉಳಿದ ವರದಿ ಪುಟ ಸಂಖೆ 14 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.